VI. ಚಿಕ್ಕೋಡಿಯಲ್ಲಿ ಸರ್ಕಾರದ ಧನ ಸಹಾಯದಿಂದ ನಡೆಯುತ್ತಿರುವ ಬಿ. ಎಡ್. ಕಾಲೇಜಿನ ಕಟ್ಟಡದ ನಿರ್ಮಾಣಕ್ಕಾಗಿ ಹಣ ಸಂಗ್ರಹಿಸುತ್ತಿರುವುದು.

ಶ್ರೀ ಬಿ. ಸ್ವಾಮಿರಾವ್.— ಅಧ್ಯಕ್ಷರೇ, ಚಿಕ್ಕೋಡಿಯಲ್ಲಿ ಸರಕಾರದ ಧನಸಹಾಯದಿಂದ ನಡೆಸುತ್ತಿರುವ ಬಿ. ಎಡ್. ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಧನ ಸಂಗ್ರಹಿಸುತ್ತಿರುವ ಸಲುವಾಗಿ ಮಹೇಶ್‌ಕುಮಾರ್ ಮತ್ತು ಸಂಗಡಿಗರಿಂದ ಪಾರ್ಟಿ ನಡೆಸುವ ಸಂದರ್ಭದಲ್ಲಿ ಟಿಕೆಟ್ಟುಗಳನ್ನು ಮಾರಾಟ ಮಾಡಲು ಅಧಿಕಾರಿಗಳ ಮೇಲೆ ಒತ್ತಡ ತಂದಿದ್ದು ಜನತಾ ಪಾರ್ಟಿಯ ಕಾರ್ಯಕರ್ತರೊಬ್ಬರು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರಿಗೆ ತಿಳಿಸಿರುವುದಾಗಿ ತಿಳಿದುಬಂದಿದ್ದು, ಸರಕಾರದವರು ಕೂಡಲೇ ಸಂಗ್ರಹಣೆಯನ್ನು ನಿಲ್ಲಿಸುವಂತೆ ಆಜ್ಞೆ ಮಾಡುವುದಲ್ಲದೆ ಈ ಬಗ್ಗೆ ತನಿಖೆ ನಡೆಸಬೇಕೆಂದೂ ಮಾನ್ಯ ಶಿಕ್ಷಣ ಮಂತ್ರಿಗಳು ಈ ಬಗ್ಗೆ ಸದನಕ್ಕೆ ಹೇಳಿಕೆ ನೀಡಬೇಕೆಂದೂ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತಂದು ಉತ್ತರವನ್ನು ಕೊಡುವುದಕ್ಕೆ ಅವರಿಗೆ ಕೇಳಿಕೊಳ್ಳುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ನಡೆದ ಚರ್ಚೆಗೆ ಉತ್ತರ.

ಅಧ್ಯಕ್ಷರು.— ಈಗ ರಾಜ್ಯಪಾಲರ ಭಾಷಣದ ಮೇಲೆ ಆದ ಚರ್ಚೆಗೆ ಮಾನ್ಯ ಜೆ. ಹೆಚ್. ಪಟೇಲ್ ಅವರು ಉತ್ತರವನ್ನು ನೀಡುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಕೈಗಾರಿಕಾ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಅರ್ಪಿಸುವ ಕಾಲದಲ್ಲಿ ಸದನದ ಮುಂದೆ ಈಗಾಗಲೇ ಸಾಕಷ್ಟು ಚರ್ಚೆಗಳನ್ನು ಮಾಡಿದ್ದಾರೆ. ಸುಮಾರು ಎಂಟು ದಿನಗಳ ಕಾಲ ಈ ಭಾಷಣದ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದ್ದು ಬಹಳ ಜನರು ಈ ಭಾಷಣಕ್ಕೆ ವಂದನೆಯನ್ನು ಸಲ್ಲಿಸಿದ್ದಾರೆ. ಕೆಲವರು ಭಾಷಣವನ್ನು ನಿಂದಿಸಿದ್ದಾರೆ. ಇನ್ನು ಕೆಲವರು ಯಾವುದೇ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳದೇ ಇರತಕ್ಕವರೂ ಇದ್ದಾರೆ. ಎಂದರೆ ನ್ಯೂಟ್ರಲ್ ಆಗಿ ಇದ್ದಾರೆ. ಆದುದರಿಂದ ನಾನು ಮೊದಲನೆಯದಾಗಿ ಪ್ರಾಸ್ತಾವಿಕವಾಗಿ ಮಾನ್ಯ ವಿರೋಧ ಪಕ್ಷದ ನಾಯಕರಿಂದ ಹಿಡಿದು ಹಲವಾರು ಹಿರಿಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕ ಸಾಮಾನ್ಯ ವಿಷಯದ ಬಗ್ಗೆ ಸ್ವಲ್ಪ ಪ್ರಸ್ತಾಪ ಮಾಡಬೇಕಾಗುತ್ತದೆ. ನೇರವಾಗಿ ಕೆಲವು ಅಂಶಗಳನ್ನು ನಾನು ಚರ್ಚೆಗೆ ತೆಗೆದುಕೊಳ್ಳುವುದಕ್ಕಿಂತಲೂ ಮುಂಚೆ ಅವರು ಮಾಡಿದ ಕೆಲವು ಅಂಶಗಳು, ಹೇಳಿದ ಕೆಲವು ವಿಚಾರಗಳು ಏನೆಂದರೆ, ರಾಜ್ಯಪಾಲರು ಇಂಡಿಪೆಂಡೆಂಟಾಗಿ ಅವರೇ ಭಾಷಣವನ್ನು ಮಾಡಬಹುದಾಗಿತ್ತು ಎಂದು ಹೇಳಿದರು. ಮಾನ್ಯ ರಾಜ್ಯಪಾಲರು ಈ ಸರ್ಕಾರದ ಪರವಾಗಿ ಭಾಷಣ ಮಾಡಿದ್ದಾರೆಂದು ಮಾನ್ಯ ವೀರಪ್ಪ ಮೊಯ್ಲಿ ಅವರು ಹೇಳಿದರು. ಇದು ರಾಜ್ಯಾಂಗದಲ್ಲಿ ನಡೆದು ಬಂದಿರತಕ್ಕ ಒಂದು ಸಂಪ್ರದಾಯ. ಅದನ್ನು ಕರ್ನಾಟಕದಲ್ಲಿ ಬೇರೆ ಮಾಡಬೇಕೆಂದೇನೂ ಕಾರಣ ನನಗೆ ತಿಳಿದಿಲ್ಲ. ಅವರ ಮಾತಿನ ಹಿನ್ನೆಲೆಯಲ್ಲಿ ಏನಿತ್ತೆಂದರೆ, ರಾಜ್ಯಪಾಲರು ಇವರಿಗೇ ಸೇರಿದವರು, ಸರ್ಕಾರ ನಮ್ಮದು ಎನ್ನುವ ಹಾಗೆ ರಾಜ್ಯಪಾಲರು ಇವರಿಗೆ ಸೋತುಬಿಟ್ಟ ಹಾಗೆ ಏನೋ ಹೇಳುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಹಾಗೆ ಮಾಡುವುದಕ್ಕಾಗುವುದಿಲ್ಲ. ರಾಜ್ಯದಲ್ಲಿ ಜನತಾ ಪಾರ್ಟಿ ಅಧಿಕಾರದಲ್ಲಿ ಇರಲಿ, ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇರಲಿ, ಕಮ್ಯುನಿಸ್ಟ್ ಪಕ್ಷ ಅಧಿಕಾರದಲ್ಲಿರಲಿ ಯಾವ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇರುತ್ತದೆಯೋ ಆ ಸರ್ಕಾರದ ಅನುಭವಗಳನ್ನು, ಆ ಸರ್ಕಾರದ ನೀತಿಯನ್ನು ಆ ರಾಜ್ಯದ ರಾಜ್ಯಪಾಲರು ಸದನದ ಮುಂದೆ ಇಡತಕ್ಕದ್ದು ಸಂವಿಧಾನವಾಗಿ ಬಂದಿರತಕ್ಕ ರೀತಿ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅರ್ಥ ಇಲ್ಲ, ಅದರಲ್ಲಿ ಏನಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಅದಕ್ಕೆ ನಾನು ಹೇಳುವುದು ಇಷ್ಟೇ. ರಾಜ್ಯದ ಆಪ್ರೊತ್ತಿನ ಸ್ಥಿತಿ ಏನಿತ್ತು ? ಪ್ರತಿಯೊಂದು ವರ್ಷದಲ್ಲೂ ರಾಜ್ಯಪಾಲರು ಭಾಷಣ ಮಾಡುವಾಗ ರಾಜ್ಯದಲ್ಲಿ ಸ್ಥಿತಿಗತಿ ಏನು ಎಂಬುದನ್ನು ಮೊದಲು ಆದ್ಯತೆ ಕೊಟ್ಟು ಹೇಳುತ್ತಾರೆ. ಯಾವುದಾದರೂ ಒಂದು ವಿಷಯವನ್ನು, ಏನಾದರೂ ಸರ್ಕಾರದ ನೀತಿಯನ್ನು

ನಿರೂಪಣೆ ಮಾಡತಕ್ಕ ಅವಶ್ಯಕತೆ ಬಿದ್ದಲ್ಲಿ ಆ ನೀತಿಯ ನಿರೂಪಣೆಯನ್ನು ನಾವು ಮಾಡುತ್ತೇವೆ. ಇದರಲ್ಲಿ ಏನಿದೆ ಅಂದರೆ ಅರ್ಥ ಏನು ? ಈ ವರ್ಷದ ಸ್ಥಿತಿಯನ್ನು ಹೃದಯ ಸ್ಪರ್ಶಿಯಾಗಿ ನಾವು ತಿಳಿಸಿದ್ದೇವೆ. ಕಳೆದ ವರ್ಷ ನಮಗೆ ಮುಂಗಾರು ಬೆಳೆ ಬರಲಿಲ್ಲ, ಹಿಂಗಾರು ಸ್ವಲ್ಪಮಟ್ಟಿಗೆ ಬಂತು. ಅದರ ಹಿಂದಿನ ವರ್ಷ ಮುಂಗಾರು ಕಡಿಮೆಯಾಯಿತು ಹಾಗೂ ಹಿಂಗಾರೂ ಕಡಿಮೆಯಾಯಿತು. ಈ ವರ್ಷದ ಆವರೇಜ್ ರೈನ್‌ಫಾಲ್ ಅನ್ನು ರಾಷ್ಟ್ರದ ಭೂಪಟದ ಮೇಲೆ ನೋಡಿದರೆ ಆಶ್ಚರ್ಯಕರ ರೀತಿಯಲ್ಲಿ ನಮ್ಮ ರಾಜ್ಯಕ್ಕೆ ಬರಗಾಲ ಬಂದಿರುವುದು ತಿಳಿಯುತ್ತದೆ. ಈ ಮಾತನ್ನು ಹೇಳದೇ ನಾವು ಇನ್ನೇನನ್ನು ಹೇಳಬೇಕಾಗಿತ್ತು ? ಬರಗಾಲ ಇರಬೇಕಾದರೆ, ಜನರಿಗೆ ಕೆಲಸ, ದನಕರುಗಳಿಗೆ ಮೇವು ಹಾಗೂ ನೀರನ್ನು ಒದಗಿಸುವುದು ಹೇಗೆ ಎಂಬುದನ್ನು ಪ್ರಸ್ತಾಪ ಮಾಡದೇ ಏನನ್ನು ಮಾಡಬೇಕಾಗಿತ್ತು ? ಇದು ನನಗೆ ಅರ್ಥವಾಗಿಲ್ಲ. ರಾಜ್ಯದಲ್ಲಿ ವಿಶಿಷ್ಟ ಪರಿಸ್ಥಿತಿ ಏನು ಇದೆ ಎಂಬುದನ್ನು ರಾಜ್ಯಪಾಲರ ಭಾಷಣದಲ್ಲಿ ಕಾಣಬೇಕು. ನಾಲ್ಕು ವರ್ಷಗಳ ನಂತರ ರಾಜ್ಯಪಾಲರ ಭಾಷಣವನ್ನು ಕೈಯಲ್ಲಿ ಹಿಡಿದರೆ ೧೯೮೬ನೇ ಇಸವಿಯಲ್ಲಿ ಏನು ಸಮಸ್ಯೆ ಇತ್ತು ಎಂಬುದು ಆ ಭಾಷಣದಲ್ಲಿ ಗೊತ್ತಾಗಬೇಕು. ಗತಕಾಲದ ವೈಭವವನ್ನು ಮುಂದೆ ಕಾಣಲಾಗದ ಕನಸನ್ನು ರಾಜ್ಯಪಾಲರ ಭಾಷಣದಲ್ಲಿ ನಾವೇನೂ ಹೇಳಿಲ್ಲ. ಇದು ಒಂದು ಸಾಹಿತ್ಯ ಇದ್ದಹಾಗೆ. ಆದಕ್ಕೋಸ್ಕರ ರಾಜ್ಯಪಾಲರು ಸೂಕ್ತವಾದ ರೀತಿಯಲ್ಲಿ ಈಗಿರತಕ್ಕ ಸ್ಥಿತಿಯನ್ನು ಚರ್ಚೆ ಮಾಡಿದ್ದಾರೆ. ಅಷ್ಟೆಲ್ಲಾ ಪರಿಹಾರ ಕಾಮಗಾರಿಗಳನ್ನು ನಮ್ಮ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವತಿಯಿಂದ ಪಡೆದು ಮಾಡಿರತಕ್ಕದ್ದರ ಬಗ್ಗೆ ಪ್ರಸ್ತಾಪ ಮಾಡುವುದರ ಜೊತೆಗೆ ಹಿಂದೆ ನಾವು ೧೯೮೫ನೇ ಇಸವಿಯ ಭಾಷಣದಲ್ಲಿ ಹೇಳಿದ ಕೆಲವು ಪ್ರಸ್ತಾಪನೆಗಳ ಬಗ್ಗೆ ನಾವು ಏನು ಆಚರಣೆಗೆ ಕೊಟ್ಟಿದ್ದೇವೆ ಎಂಬ ಬಗ್ಗೆ ತಿಳಿಸಿದ್ದಾರೆ. ಅದು ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಇರಬಹುದು, ಶಿಕ್ಷಣದ ಬಗ್ಗೆ, ಕಾಮಗಾರಿಗಳ ಬಗ್ಗೆ ಏನು ಹೋದ ಭಾಷಣದಲ್ಲಿ ಹೇಳಿದ್ದಾರೆ ಆ ಬಗ್ಗೆಯೂ ಕೂಡಾ ಪ್ರಸ್ತಾಪ ಮಾಡಿದ್ದಾರೆ. ಹಿಂದಿನ ಭಾಷಣದಲ್ಲಿ ಹೇಳಿದ ಮಾತುಗಳು ಏನು ಇವೆಯೋ ಅವನ್ನು ಕಾರ್ಯಾಚರಣೆಗೆ ಕೊಟ್ಟಿದ್ದೇವೆಂದು ಈ ಭಾಷಣದಲ್ಲಿ ಹೇಳಿದ್ದೇವೆ. ವಿದ್ಯಾಭ್ಯಾಸದ ಕೊರತೆ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಗ್ರೀನ್ ಕಾರ್ಡುಗಳನ್ನು ಏನು ಕೊಡಬೇಕೆಂದು ಹೋದ ವರ್ಷ ಹೇಳಿದೆವೋ ಅವನ್ನು ಕೊಟ್ಟಿದ್ದೇವೆಂದು ಪ್ರಸ್ತಾಪ ಮಾಡಿದ್ದಾರೆ. ಜಿಲ್ಲಾ ಪರಿಷತ್ ಹಾಗೂ ಮಂಡಲ್ ಪರಿಷತ್ ಬಗ್ಗೆ ಹೇಳಬೇಕೆಂದರೆ, ಹಿಂದೆ ಈ ಬಗ್ಗೆ ವಿಧಾನಮಂಡಲದಲ್ಲಿ ಬಿಲ್ ಪಾಸ್ ಆಗಿದ್ದು ಆ ಬಗ್ಗೆ ರಾಷ್ಟ್ರಪತಿಗಳ ಒಪ್ಪಿಗೆ ಬಂದಿರಲಿಲ್ಲ ಆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಜನರ ಹತ್ತಿರಕ್ಕೆ ಹೋಗಬೇಕಾದ ವಿಷಯವನ್ನು ಅವರು ಹೇಳಿದ್ದಾರೆ. ವಿದ್ಯಾ ವಿಕಾಸ ಯೋಜನೆ ಬಗ್ಗೆ ಏನು ಮಾಡಬೇಕೆಂದು ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ಎಷ್ಟು ಜನರಿಗೆ ಕೊಟ್ಟಿದ್ದಾರೆಂಬುದನ್ನು ವಾಸ್ತವಿಕವಾಗಿ ತಿಳಿಸಿದ್ದಾರೆ. ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಬಗ್ಗೆ ಎಲ್ಲೂ ಪ್ರಸ್ತಾಪವಿಲ್ಲವೆಂದು ಹೇಳಿದರು. ಈ ಭಾಷಣದ ಪ್ರತಿಯೊಂದೂ ಪ್ಯಾರಾದಲ್ಲಿ ಬಂದಿರತಕ್ಕ ರೈತರ ಸಮಸ್ಯೆ, ಅಭಾವ ಪರಿಹಾರ ಸಮಸ್ಯೆ, ವಿದ್ಯಾಭ್ಯಾಸದ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ನಾವು ಕೊಟ್ಟಿರತಕ್ಕ ಬೆನಿಫಿಶಿಯರೀಸ್‌ನಲ್ಲಿ ಎಷ್ಟು ಜನ ಶೇಕಡಾವಾರು ಪರಿಶಿಷ್ಟಜಾತಿ ಹಾಗೂ ಪಂಗಡದವರು ಇದ್ದಾರೆ ಎಂಬುದನ್ನು ನಾವು ಇಲ್ಲಿ ಆದಷ್ಟು ಸಂಕ್ಷಿಪ್ತವಾಗಿ ಕೊಟ್ಟಿದ್ದೇವೆ. ನಾವೇನೂ ದೊಡ್ಡದಾಗಿ ಮಾಡಿದ್ದೇವೆಂದು ಅಪಾರವಾಗಿ ಕೊಚ್ಚಿಕೊಳ್ಳುವುದಕ್ಕೆ ಹೋಗದೇ ಆದಷ್ಟು ಗಂಭೀರವಾಗಿ, ಮಾಡೆಸ್ಟಾಗಿ ಮಾಡಿರುವುದನ್ನು ನಾವು ಹೇಳಿದ್ದೇವೆ. ಆದರೆ ಯಾವ ವಿಷಯವೂ ಕಾಣಲಿಲ್ಲ ಎಂದರೆ ಹೇಗೆ ? ಸಮಗ್ರವಾಗಿ ಭಾಷಣದಲ್ಲಿ ಹೇಳಿದಮೇಲೆ ಏನೇನನ್ನು ಕಾರ್ಯಾಚರಣೆ ಮಾಡಿದ್ದೇವೆ ಎಂಬುದನ್ನು ಹೇಳಿದ್ದೇವೆ. ಕನ್ನಡಕ್ಕೆ ಹಿಂದೆಂದೂ ಯಾವ ಸರ್ಕಾರವೂ ಕೊಡದಷ್ಟು ಅಗ್ರಸ್ಥಾನವನ್ನು ಕೊಟ್ಟಿದ್ದೇವೆ. ಹೀಗೆ ಮಾಡಿ ದೊಡ್ಡ ಉಪಕಾರವನ್ನು ಮಾಡಿದ್ದೇವೆಂದು ಹೇಳುತ್ತಿಲ್ಲ. ಹಿಂದೆ ಯಾರೂ ನಿಭಾಯಿಸದಷ್ಟು ಕರ್ತವ್ಯವನ್ನು ನಿಭಾಯಿಸಿದ್ದೇವೆ. ಇದು ಯಾರಿಗೂ ಕಾಣಲಿಲ್ಲವೇ ? ಮಾನ್ಯ ಕೆ. ಹೆಚ್. ಪಾಟೀಲರು ಬರಗಾಲದ ಬಗ್ಗೆ ಹೆಚ್ಚು ಹೇಳಿದರು. ಮಾನ್ಯ ಕೆ.ಹೆಚ್. ಶ್ರೀನಿವಾಸ್ ಅವರೂ ಹೇಳಿದರು. ಭಾಷಣದ ಕೊನೆಯಲ್ಲಿ ಮಾನ್ಯ ರಾಜ್ಯಪಾಲರು ಈರೀತಿ ಹೇಳಿದ್ದಾರೆ.

> " ಈ ಹಿಂದಿನ ವರ್ಷಗಳಂತೆಯೇ ವಿಧಾನ ಮಂಡಲದ ಉಭಯ ಸದನಗಳ ಎಲ್ಲಾ ವಿಭಾಗಗಳೂ ಚರ್ಚೆಗಳು ಮತ್ತು ಗೋಷ್ಠಿಗಳಿಗೆ ರಚನಾತ್ಮಕ ಕೊಡುಗೆ ನೀಡಬಲ್ಲವು ಮತ್ತು ರಾಜ್ಯದ ಉತ್ತರೋತ್ತರ ಪ್ರಗತಿಗೆ ತಮ್ಮ ಅತ್ಯುತ್ತಮ ಸೇವೆ ಸಲ್ಲಿಸಬಲ್ಲವೆಂಬ ಬಗ್ಗೆ ನನಗೆ ಪೂರ್ಣ ಭರವಸೆ ಇದೆ. "

ಈ ರೀತಿ ಎಲ್ಲರೂ ಕೂಡಾ ಒಂದು ಕಡೆ ಕಲೆತು ಕನ್‌ಸ್ಟ್ರಕ್ಟೀವ್ ಆಗಿ ಕೆಲಸ ಮಾಡಿ ಎಂದರೆ ಏನನ್ನೂ ಹೇಳಿಲ್ಲ ಎಂದರೆ ಏನು ? ಇದು ಬರೀ ಬರದ ವರದಿ ಎಂದು ಹೇಳಿದ್ದಾರೆ. ಏಕೆ, ಇದೆಲ್ಲಾ ಇವರಿಗೆ ಕಾಣುವುದಿಲ್ಲವೇ ? ನಮ್ಮ ಸರ್ಕಾರ ಮಾಡಿರತಕ್ಕ ಕೆಲಸ ಇವರಿಗೆ ಏಕೆ ಕಾಣುವುದಿಲ್ಲ ಎಂದರೆ, ಒಂದು ಇವರಿಗೆ ವೈಯಕ್ತಿಕ ದೋಷ ಇರಬಹುದು, ಎರಡು ದೃಷ್ಟಿದೋಷ ಇರಬಹುದು. ಕಾಣುತ್ತಾ ಇರುವುದೂ ಇವರ ಕಣ್ಣಿಗೆ ಕಾಣುವುದಿಲ್ಲವೆಂದರೆ ಇವರಿಗೆ ದೃಷ್ಟಿ ದೋಷವೇ ಇರಬೇಕು. ನಿಂದಕರು ಬೇಕು. ನಿಜ, ನಿಂದಕರ ಬಗ್ಗೆ ದಾಸರು ಹೀಗೆ ಹೇಳಿದ್ದಾರೆ. 'ಇರಬೇಕು ಇರಬೇಕು ನಿಂದಕರು ಇರಬೇಕು. ಹಂದಿ ಇದ್ದರೆ ಕೇರಿ ಹೇಗ ಶುದ್ಧವೋ ಹಂಗೆ ನಿಂದಕರು ಇರಬೇಕು, ಎಂದು, ಆದರೆ ನಿಜವಾಗಿಯೂ ವಾಸ್ತವಸ್ಥಿತಿಯನ್ನು ಅರ್ಥಮಾಡಿಕೊಂಡು ಅವರು ಪ್ರಸ್ತಾಪ ಮಾಡಿದ್ದರೆ ಚೆನ್ನಾಗಿ ಇತ್ತು. ಮಾನ್ಯ ವೀರಪ್ಪ ಮೊಯಿಲಿಯವರು ಎರಡು ಮೂರು ವಿಷಯಗಳ ಬಗ್ಗೆ ಗಂಭೀರವಾದ ಆರೋಪಗಳನ್ನು ಮಾಡಿದರು. ಈ ರಾಜ್ಯದ ಪರ್ ಕ್ಯಾಪಿಟಾ ಪ್ಲಾನ್ ಔಟಲೆ ಕಡಿಮೆ ಆಗುತ್ತಾ ಇದೆ, ನಾವು ಗಳಿಸಿರಂಥ ರಿಸೋರ್ಸ್ ಮೊಬಿಲೈಸೇಷನ್ ಅನ್ನು ಅಲ್ಲಸಲ್ಲದ ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತಿದ್ದಾರೆ ಎಂದು ಹೇಳಿದರು. ಶ್ರೀ ಮೊಯಿಲಿ ಅವರು ಕೆಲವು ಸಾರಿ ವಿಷಯಗಳನ್ನು ತಿರುಗು-ಮುರುಗು ಮಾಡಿ ಹೇಳುವುದರಲ್ಲಿ ತುಂಬಾ ಜಾಣರು.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

೫ನೇ ಯೋಜನೆಯಲ್ಲಿ ಪರ್‌ಕ್ಯಾಪಿಟಾ ಪ್ಲಾನ್ ಔಟಲೇ ಎಷ್ಟು ಇತ್ತು ಎಂದರೆ ೩೪೦ ರೂಪಾಯಿಗಳು ಇತ್ತು. ೬ನೇ ಯೋಜನೆಯಲ್ಲಿ ಅದು ೬೧೦ ರೂಪಾಯಿಗಳಾಗಿದೆ. ೭ನೇ ಯೋಜನೆಯಲ್ಲಿ ೯೪೩ ರೂಪಾಯಿಗಳು ಆಗಿದೆ. ಹೀಗಿರುವಾಗ ಅವರು ಇದು ಕಡಿಮೆಯಾಗುತ್ತಿದೆ ಎಂದು ಹೇಳಿದ್ದಾರೆ. ಅವರು ಇನ್ನೊಂದು ಪಾಯಿಂಟ್ ಅನ್ನು ಕೂಡ ಹೇಳಿದರು. ನಾವು ೫ನೇ ಯೋಜನೆಯಲ್ಲಿ ಹತ್ತನೇ ರ್ಯಾಂಕ್‌ನಲ್ಲಿದ್ದೆವು. ೬ನೇ ಯೋಜನೆಯಲ್ಲಿ ೯ನೇ ರ್ಯಾಂಕ್‌ನಲ್ಲಿದ್ದು, ೭ನೇ ಯೋಜನೆಯಲ್ಲಿ ೮ನೇ ರ್ಯಾಂಕಿಗೆ ಬಂದಿದ್ದೇವೆ ಎಂದು ಹೇಳಿದರು. ಇದು ಸರಿಯಲ್ಲ, ಈ ರ್ಯಾಂಕಿಂಗ್ ವ್ಯವಸ್ಥೆ ಹೇಗೆ ಎಂದರೆ, ನಾವು ೫ನೇ ಯೋಜನೆಯಲ್ಲಿ ನಾವು ಎಷ್ಟು ಹಣವನ್ನು ಸೆಂಟ್ರಲ್ ಅಸಿಸ್ಟೆನ್ಸ್ ಆಗಿ ಪಡೆದಿದ್ದೆವು, ಅದರ ಆಧಾರದ ಮೇಲೆ ಎಷ್ಟು ಹಣವನ್ನು ಮೊಬಲೈಸ್ ಮಾಡುತ್ತೇವೆ ಅದರ ಆಧಾರದ ಮೇಲೆ ನಮ್ಮ ರ್ಯಾಂಕಿಂಗ್ ಇದೆ. ರ್ಯಾಂಕಿಂಗ್ ಎಂಬುದನ್ನು ಅಂಕಿಅಂಶಗಳ ಆಧಾರದ ಮೇಲೆ ಹೇಳಬೇಕೇ ಹೊರತು ಸುಮ್ಮನೆ ಊಹೆ ಮಾಡಿ ಹೇಳುವುದಲ್ಲ. ಮಾನ್ಯ ಸಭಾಧ್ಯಕ್ಷರೇ, ೫ನೇ ಯೋಜನೆಯಲ್ಲಿ ನಾವು ೯೯೮ ಕೋಟಿ ರೂಪಾಯಿಗಳನ್ನು ನಮ್ಮ ಔಟ್‌ಲೇ ಎಂದು ಇಟ್ಟುಕೊಂಡಿದ್ದೆವು. ಆಗ ನಮ್ಮ ರ್ಯಾಂಕ್ ೧೦ನೇಯದಿತ್ತು. ೬ನೇ ಯೋಜನೆಯಲ್ಲಿ ೨೨೬೫ ಕೋಟಿ ಪ್ಲಾನ್ ಔಟ್‌ಲೇ ಇಟ್ಟುಕೊಂಡಿದ್ದು, ಆಗ ನಮ್ಮ ರ್ಯಾಂಕ್ ೯ನೇ ಯದಾಯಿತು. ೭ನೇ ಯೋಜನೆಯಲ್ಲಿ ೩೫೦೦ ಕೋಟಿ ನಮ್ಮ ಪ್ಲಾನ್ ಔಟಲೇ ಇದ್ದದ್ದು ನಮ್ಮ ರ್ಯಾಂಕ್ ೮ನೇ ಯದಾಯಿತು. ಯಾರಿಗಾದರೂ ಇದನ್ನು ಮೊದಲೇ ಹೇಳಿಬಿಟ್ಟರೆ, ೫ನೇ ಯೋಜನೆಯಲ್ಲಿ ಹತ್ತನೇ ರ್ಯಾಂಕ್ ಇದ್ದದ್ದು, ೭ನೇ ಯೋಜನೆಯಲ್ಲಿ ಎಂಟಾಯಿತು ಎಂದು ಹೇಳಿಬಿಟ್ಟರೆ ಬೇರೆ ಅರ್ಥವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಇದರ ಅರ್ಥ ನಮ್ಮ ರಾಷ್ಟ್ರದಲ್ಲಿ ಎಲ್ಲಾ ಬೇರೆ ರಾಜ್ಯಗಳ ಯೋಜನಾ ಮೊತ್ತಕ್ಕೆ ನಮ್ಮ ರಾಜ್ಯದ ಮೊತ್ತವನ್ನು ಹೋಲಿಸಿದಾಗ ನಮ್ಮ ರ್ಯಾಂಕಿಂಗ್ ಬರುತ್ತದೆ. ೫ನೇ ಯೋಜನೆಯಲ್ಲಿ ೯೯೮ ಕೋಟಿ, ೬ನೇ ಯೋಜನೆಯಲ್ಲಿ ೨೨೬೫ ಕೋಟಿ ಮತ್ತು ೭ನೇ ಯೋಜನೆಯಲ್ಲಿ ೩೫೦೦ ಕೋಟಿ ಪ್ಲಾನ್ ಔಟ್‌ಲೇ ಇಟ್ಟುಕೊಂಡಿದ್ದೇವೆ. ಇದರೊಳಗೆ ಒಂದು ಸ್ವಾರಸ್ಯಕರವಾದ ಅಂಶ ಎಂದರೆ, ೬ನೇ ಯೋಜನೆಯ ಮೊದಲ ಮೂರು ವರ್ಷಗಳು ಶ್ರೀಮಾನ್ ವೀರಪ್ಪ ಮೊಯಿಲಿಯವರ ಆಡಳಿತ ಸೂತ್ರದಲ್ಲಿತ್ತು. ೬ನೇ ಯೋಜನೆಯ ಮೊದಲ ಮೂರು ವರ್ಷಗಳಲ್ಲಿ ಖರ್ಚಾಗಿರುವುದು ೫೮, ೬೦ ಮತ್ತು ೬೨ ಕೋಟಿ. ಅಂದರೆ ಅದು ಮೊದಲ ಮೂರು ವರ್ಷಗಳಲ್ಲಿ ಆಗಿರುವ ವೆಚ್ಚ. ೧೯೮೦-೮೧ರಲ್ಲಿ ೩೮೯ ಕೋಟಿ ವೆಚ್ಚ ಪ್ಲಸ್ ೪೦ ಕೋಟಿ. ಎಂದರೆ ಯೋಜನೆಗಿಂತ ಹೆಚ್ಚು ಖರ್ಚಾಗಿದೆ. ೪೦ ಕೋಟಿ ರೂಪಾಯಿಗಳು ಜಾಸ್ತಿ ಖರ್ಚಾಗಿರುವುದು. ೧೯೮೧-೮೨ ರಲ್ಲಿ ೬೦ ಕೋಟಿ ಜಾಸ್ತಿ ಖರ್ಚುಮಾಡಿದ್ದರೆ, ೧೯೮೨-೮೩ರಲ್ಲಿ ೬೯ ಕೋಟಿ ಜಾಸ್ತಿ ಖರ್ಚಾಗಿದೆ. ಇದು ಅವರ ಸರ್ಕಾರ ಇದ್ದಾಗ ೫ನೇ ಯೋಜನೆಯ ಮೊದಲ ಮೂರು ವರ್ಷಗಳಲ್ಲಿ ಆಗಿದುದ್ದು. ನಮ್ಮ ಸರ್ಕಾರ ಬಂದ ಮೇಲೆ ೧೯೮೩ನೇ ಇಸವಿಯ ಮೊದಲು ಭಾಗದಿಂದ ೮೩, ೮೪, ೮೫ರಲ್ಲಿ ೧೦೫ ಕೋಟಿ ಜಾಸ್ತಿ ಖರ್ಚಾಗಿರುವುದು. ಇದನ್ನು ಲೆಕ್ಕಹಾಕಿ ೬ನೇ ಯೋಜನೆಯ ಕೊನೆಯ ಭಾಗದಲ್ಲಿ ಏನಾದರೂ ನಮ್ಮ ರಿಸೋರ್ಸಸ್ ಮೊಬಿಲೈಸೇಷನ್ ಆಗಲಿ, ಪ್ಲಾನ್ ಎಕ್ಸ್‌ಪೆಂಡೀಚರ್ ಆಗಲಿ ಹೆಚ್ಚಾಗಿದೆ

ಅದಕ್ಕೆ ನಮ್ಮ ಸರ್ಕಾರ ಕಾರಣ. ಈಗ ಮಾನ್ಯ ಸದಸ್ಯರು ರ್‍ಯಾಂಕ್ ಬಗ್ಗೆ ಹೇಳುವಾಗ ಒಂದು ಮಾತನ್ನು ಹೇಳಿದರು. ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ರಿಸೋರ್ಸ್ ಮೊಬಿಲೈಸೇಷನ್ ಆದುದನ್ನು ಉಪಯೋಗವಿಲ್ಲದೆ ಇರತಕ್ಕಂಥ ಕೆಲಸಗಳಿಗೆ ಖರ್ಚುಮಾಡಿದರು ಎಂದು. ಹೀಗಲ್ಲ, ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಎಂದರೆ, ಮಾನ್ಯ ಹಿರಿಯ ಸದಸ್ಯರಾದ ಪಾಟೀಲರಿಗೆ ಗೊತ್ತಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಒಂದೊಂದು ವರ್ಷಕ್ಕೂ ಖರ್ಚುಮಾಡಬೇಕೆಂದು ಇರುತ್ತದೆ. ಇದರೊಳಗೆ ಮೊದಲೇ ಅಪ್ರೂವ್ಡ್ ವೆಚ್ಚವನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರದ ನೌಕರರಿಗೆ ತುಟ್ಟಿಭತ್ಯ ಹೆಚ್ಚು ಮಾಡಿದರು ಎಂದರೆ ಇಲ್ಲಿ ನಾವೂ ಕೂಡ ಮಾಡಬೇಕಾಗುತ್ತದೆ. ಇದನ್ನು ನಾವು ಪ್ಲಾನ್‌ನಲ್ಲಿ ಸೇರಿಸುವುದಿಲ್ಲ. ಕೇಂದ್ರ ಸರ್ಕಾರ ಕೈಗೊಂಡ ಕಾರ್ಯಕ್ರಮಗಳಿಗೆ ಅನುಗುಣವಾಗಿ ಅನಿವಾರ್ಯವಾಗಿ ನಮ್ಮ ಹತೋಟಿಯಲ್ಲಿ ಇಲ್ಲದೇ ಇರತಕ್ಕಂಥ ಬಾಬುಗಳು ಏನಿವೆ, ಅವನ್ನು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಮಾಡಬೇಕಾಗುತ್ತದೆ. ಹಲವಾರು ಕಾರಣಗಳಿಂದಾಗಿ ಮಾನ್ಯ ಸದಸ್ಯರಿಗೆ ಗೊತ್ತಿದೆ, ೩೪೦ ಕೋಟಿ ರಿಸೋರ್ಸ್ ಮೊಬಿಲೈಸೇಷನ್ ಇದ್ದುದನ್ನು ನಾವು ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಂದಾಗಿ ಅನಿವಾರ್ಯವಾಗಿ ಖರ್ಚು ಮಾಡಬೇಕಾಯಿತು. ಇದೇ ರೀತಿ ಕಾವೇರಿ ಜಲಾನಯನ ಪ್ರದೇಶದ ಪ್ರಾಜೆಕ್ಟ್‌ಗಳಿಗೆ ಖರ್ಚು ಮಾಡಬೇಕಾಯಿತು. ಆದ್ದರಿಂದ ಇದೆಲ್ಲಾ ಕಾರಣಗಳಿಂದಾಗಿ ಪರ್‌ಕ್ಯಾಪಿಟಾ ಪ್ಲಾನ್ ಔಟ್‌ಲೇ ಕಡಿಮೆ ಆಯಿತು ಎಂದು ಹೇಳಿ ಬಿಡುವುದಲ್ಲ. ನಾನೇನೋ, ಇವರು ಇಷ್ಟೊಂದು ವರ್ಷಗಳ ಕಾಲ ಹಣಕಾಸು ಮಂತ್ರಿಯಾಗಿದ್ದವರು, ಆಧಾರ ಸಹಿತವಾಗಿ ನ್ಯಾಯಸಮ್ಮತವಾಗಿ ಯೋಚನೆ ಮಾಡಿ ಹೇಳುತ್ತಾರೆ ಎಂದು ಭಾವಿಸಿದ್ದೆ. ಆದರೆ ದುರಾದೃಷ್ಟವಶಾತ್ ಅವರು ಈ ತರಹ ಹೇಳಿದ್ದಾರೆ. ಇದೇನೂ ಅವರು ಅಂಕಿಅಂಶಗಳ ಆಧಾರದಿಂದ ಹೇಳಿದ್ದಲ್ಲ. ಇನ್ನು, ಭ್ರಷ್ಟಾಚಾರದ ಬಗ್ಗೆ ಅವರು ಪ್ರಸ್ತಾಪ ಮಾಡಿದರು. 'ನೀವೇನೋ ಲೋಕಾಯುಕ್ತ ಸ್ಥಾಪನೆ ಮಾಡಿದ್ದೀರಿ. ಲೋಕಾಯುಕ್ತ ಆಗಿಬಿಟ್ಟರೆ ಆಯಿತೆ ? ಇದರಿಂದ ಏನಾಗುತ್ತದೆ?, ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಶ್ರೀ ಕೆ. ಹೆಚ್ ಶ್ರೀನಿವಾಸ ಅವರು ಈ ಹೈಕೋರ್ಟ್ ತೀರ್ಮಾನದಿಂದಾಗಿ ನಿಮ್ಮ ಸರ್ಕಾರದ ಇಮೇಜ್ ಕೆಳಗೆ ಬಿದ್ದುಹೋಯಿತು ಎನ್ನುವ ತರಹ ಮಾತನಾಡಿದರು. ಶ್ರೀ ಶ್ರೀನಿವಾಸ್ ಅವರಿಗೆ ಬೇಲೂರು, ಹಳೆಬೀಡು ದೇವಸ್ಥಾನಗಳಿಗೆ ಹೋದಾಗ ಅಲ್ಲಿರತಕ್ಕಂಥ ಸುಂದರ ಶಿಲ್ಪ ಚಿತ್ರಗಳು ಕಾಣುವುದಿಲ್ಲ. ಶಿಲ್ಪಿ ಏನು ಮಾಡುತ್ತಾನೆ ಎಂದರೆ, ಈ ಕಲೆಯ ಸೌಂದರ್ಯ ಅಳಿಸಿಹೋಗಬಾರದು. ಇದಕ್ಕೆ ಕೆಟ್ಟ ಕಣ್ಣು ಬೀಳಬಾರದು ಎಂದು. ಅಲ್ಲಿ ವಿಕಾರವಾದ ಮೈಥುನ ಚಿತ್ರಗಳನ್ನೂ ಕೂಡ ಕೆತ್ತಿರುತ್ತಾನೆ. ಶ್ರೀನಿವಾಸ್ ಅವರಿಗೆ ಈ ಚಿತ್ರಗಳೇ ಕಣ್ಣಿಗೆ ಕಾಣುವುದು ಹೊರತು ಬೇರೆ ಯಾವುದೂ ಕಾಣುವುದಿಲ್ಲ. ಈ ಕಾರಣವಾಗಿಯೇ ಇವರು 'ಈ ಸರ್ಕಾರದ ಇಮೇಜ್ ಬಿದ್ದುಹೋಯಿತು ಎಂದು ಹೇಳುವುದು. ಹೈಕೋರ್ಟ್ ತೀರ್ಮಾನದ ಬಗ್ಗೆ ನಾವು ಈಗಾಗಲೇ ಹೇಳಿದ್ದೇವೆ. ಇದನ್ನು ಸರ್ಕಾರ ಒಪ್ಪಿಕೊಂಡಿದೆ. ಇದರಲ್ಲಿ ಪ್ರೊಸಿಜರಲ್ ಮಿಸ್ಟೇಕ್ ಆಗಿದೆ ಎಂದು ನಾವು ಒಪ್ಪಿಕೊಂಡಿದ್ದೇವೆ. ಇನ್ನು ಭ್ರಷ್ಟಾಚಾರ ಕಡಿಮೆ ಆಗಿಲ್ಲ, ಬರಗಾಲ ಬಂದಿದೆ ಇದರ ನಿವಾರಣೆಗೆ ಏನೂ ಮಾಡಿಲ್ಲ ಎಂದು ಹೇಳಿದ್ದಾರೆ. ಆದರೆ ಸರ್ಕಾರದ ಪರಿಮಿತಿಯಲ್ಲಿ ಕಳೆದ ವರ್ಷದಿಂದ ಈ ವರ್ಷದವರೆಗೆ ಬರಗಾಲದಿಂದಾಗಿ ಜನರು ಎದುರಿಸುತ್ತಿರುವ ಕಷ್ಟವನ್ನು ನಿವಾರಿಸಲು ಸರ್ವಸಾಮಾನ್ಯವಾದ ರೀತಿಯಲ್ಲಿ ಯುದ್ಧದೋಪಾದಿಯಲ್ಲಿ ಏನು ಕೆಲಸ ನಡೆಯುತ್ತಿದೆ ಇದರ ಬಗ್ಗೆ ನಮ್ಮ ಕಡೆಯವರು ಹೇಳಿದ್ದಾರೆ, ಆದರೆ ಆ ಕಡೆಯವರು ಒಂದು ಮಾತನ್ನಾದರೂ ಹೇಳಬಹುದಿತ್ತು, ಆದರೆ ಅವರು ಹೇಳಲಿಲ್ಲ.

ಬಹಳ ದೊಡ್ಡ ಆಪತ್ತು ಬಂದಾಗ ನಾವು ಪರಸ್ಪರ ದೋಷಣೆ, ನಿಂದನೆ ಮಾಡದೆ ಸಮಾಧಾನದಿಂದ ಇಂಥ ಕಡೆ ಇಂಥ ಕೆಲಸವಾಗಿಲ್ಲ, ಇಂಥ ಕಡೆ ಇಂಥ ಕೆಲಸವಾಗಿದೆ ಎಂದು ಸ್ಪೆಸಿಫಿಕ್ ಆಗಿ ಹೇಳಬೇಕಾಗಿತ್ತು, ಎಲ್ಲವನ್ನು ಜನರಲ್ ಆಗಿ ಮಾತನಾಡಿದರು, ಮಾನ್ಯ ಕೆ. ಎಚ್. ಪಾಟೀಲ್‌ರವರು ಕೆಲವು ಪ್ರಮುಖವಾದ ವಿಷಯಗಳನ್ನು ಈಗ ಪ್ರಸ್ತಾಪ ಮಾಡಿರುತ್ತಾರೆ. ಮಾನ್ಯ ಬಂಗಾರಪ್ಪನವರೂ ಕೂಡ ಪ್ರಾರಂಭದಲ್ಲಿಯೇ ಅವರು ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾಡಿರತಕ್ಕಂಥ ಕೆಲಸದ ಬಗ್ಗೆ ಮಾತನಾಡುತ್ತಾ ಹೇಳಿದರು. ನಾವು ನಡೆಸಿರುವುದರ ಬಗ್ಗೆ ಬಹಳ ಖಾರವಾಗಿ ಮಾತನಾಡಿದರು. ಮಾನ್ಯ ಶಿವರಾಮಕಾರಂತರವರಿಗೂ ಉಪದೇಶ ಮಾಡಲಿಕ್ಕೆ ಹೊರಟರು, ಪುಸ್ತಕ ಬರೆದರೆ ಕಿರೀಟ ಬರುವುದಿಲ್ಲವೆಂದು ಹೇಳಿ ಅವರಿಗೆ ಕಿರೀಟವನ್ನು ತೊಡಿಸಲಿಕ್ಕೆ ಹೋದರು. ಅವರು ಒಬ್ಬ ಮಹಾವ್ಯಕ್ತಿ. ಚುನಾವಣೆಗೆ ನಿಂತವರೇ ದೊಡ್ಡ ಮನುಷ್ಯರು, ಚುನಾವಣೆಗೆ ನಿಲ್ಲದಿರತಕ್ಕಂಥವರು ದೊಡ್ಡ ಮನುಷ್ಯ

ರಲ್ಲ ಎಂದು ತಿಳಿದುಕೊಳ್ಳಬಾರದು, ಚುನಾವಣೆ ಹವ್ಯಾಸ ಇಲ್ಲದೇ ಇರತಕ್ಕಂಥ ರಾಜಕಾರಣಿಗಳೂ ಇದ್ದಾರೆ, ಸಾಹಿತಿಗಳೂ ಇದ್ದಾರೆ, ಮಾನ್ಯ ಜಯಪ್ರಕಾಶ್ ನಾರಾಯಣ್‌ರವರು ಚುನಾವಣೆಗೆ ನಿಲ್ಲುತ್ತಲೇ ಇರಲಿಲ್ಲ, ಅವರೇನು ದೊಡ್ಡ ಮನುಷ್ಯರಾಗಲಿಲ್ಲವೇ ? ಚುನಾವಣೆಗೆ ನಿಂತುಬಿಟ್ಟರೆ ದೊಡ್ಡ ಮನುಷ್ಯ, ದೊಡ್ಡ ವ್ಯಕ್ತಿ ಎಂದು ಮಾನ್ಯ ಬಂಗಾರಪ್ಪನವರು ಹೇಳುವುದಾದರೆ ಅದು ಮಾನ್ಯ ಬಂಗಾರಪ್ಪನವರ ವಿಶಿಷ್ಟ ಕೊಡುಗೆ, ಜಗತ್ತಿಗೆ ಒಂದು ವಿಶಿಷ್ಟಕೊಡುಗೆ. ಅದು ಇರಲಿ ಅವರು ಸ್ಪೆಸಿಫಿಕ್ ಆಗಿ ಒಂದು ಪಾಯಿಂಟ್ ಹೇಳಿದರು, ಪುಸ್ತಕ ಪ್ರಿಂಟ್ ಮಾಡಿದ್ದು ಸರಿಯಿಲ್ಲ ಅದು ಹಾಗೆ ಹೀಗೆ ಎಂದೆಲ್ಲಾ ಹೇಳಿದರು. ಆದಾದ ಮೇಲೆ ತಿಂಕ್‌ಟ್ಯಾಂಕ್ ಬಗ್ಗೆ ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅದು ಏತಕ್ಕೆ ಇರಬೇಕೆಂದು ಹೇಳಿದರು ತಿಂಕ್‌ಟ್ಯಾಂಕ್ ಎನ್ನುವುದು ವಿಚಾರವಂತರ ಸಲಹೆಯನ್ನು ಪಡೆದುಕೊಳ್ಳುವ ಸಲುವಾಗಿ ರಚನೆ ಮಾಡಿದ್ದುದು. ಏತಕ್ಕೆಂದರೆ ನಾವೇ ಸರ್ವಜ್ಞರು ಎನ್ನುವ ಭ್ರಮೆ ನಮಗೆ ಇಲ್ಲ, ಎಲ್ಲಕಡೆಯಿಂದಲೂ ಸಲಹೆಗಳು ಬರುವುದಾದರೆ ಅದನ್ನು ತಿಳಿದುಕೊಳ್ಳಬೇಕೆಂದೇ ಅದನ್ನು ರಚನೆ ಮಾಡಿದ್ದುದು. ಬಹುಶಃ ಸರ್ಕಾರವಾಗಲಿ, ವ್ಯಕ್ತಿಯಾಗಲಿ ಸದಾ ವಿದ್ಯಾರ್ಥಿ ಎನ್ನುವ ಭಾವನೆ ಇರಬೇಕು, ನಾನೇ ಸರ್ವಜ್ಞ, ನನ್ನ ಪ್ರಕಾರವೇ, ಜಗತ್ತಿನಲ್ಲಿ ಇನ್ನೊಬ್ಬರ ಪ್ರಕಾರವೇ ಇಲ್ಲ ಎಂದು ತಿಳಿದುಕೊಳ್ಳುವಂತೆಯೇ ಇಲ್ಲ, ಕೇಂದ್ರ ಸರ್ಕಾರವು ತಿಂಕ್‌ಟ್ಯಾಂಕ್ ರಚನೆ ಮಾಡುವಬಗ್ಗೆ ಈಗಾಗಲೇ ಯೋಚನೆ ಮಾಡಿದ್ದಾರೆ. ಯಾರು ತಿಂಕ್ ಮಾಡುವುದಕ್ಕೆ ಶಕ್ತಿ ಇಲ್ಲವೋ ಅವರಿಗೆ ಈ ಪ್ರಶ್ನೆ ಬರುವುದೇ ಇಲ್ಲ. ಮಾನ್ಯ ಬಂಗಾರಪ್ಪನವರು ಹೇಳಿರತಕ್ಕಂಥದ್ದು ಮತ್ತೊಂದು ವಿಷಯವೇನೆಂದರೆ ಕ್ರೈಂರೇಟ್ ರಾಜ್ಯದಲ್ಲಿ ಇನ್‌ಕ್ರೀಸ್ ಆಗಿದೆ, ಈ ರಾಜ್ಯದಲ್ಲಿ ಕಾನೂನು ಶಾಂತಿಪಾಲನೆ ಇಲ್ಲ, ಕಾನೂನು ಮತ್ತು ಶಾಂತಿಪಾಲನೆ ಇವೊತ್ತಿನ ದಿವಸ ಸಾಪೇಕ್ಷತೆಯಾಗಿದೆ ಎಂದು ಹೇಳಿದರು, ಲಾ ಅಂಡ್ ಆರ್ಡರ್ ರಾಮನ ಕಾಲದಲ್ಲಿ ಕಣ್ವರ ಕಾಲದಲ್ಲಿ ಆಶ್ರಮಗಳಲ್ಲಿ ಇದ್ದಹಾಗೆ ಎಂದು ಬೇರೆ ಬೇರೆ ರೀತಿಯಲ್ಲಿ ಹೋಲಿಸಿದರು. ನಾವು ರಾಮರಾಜ್ಯವನ್ನು ಮಾಡಿದ್ದೇವೆಂದು ಹೇಳಲಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಒಮ್ಮೊಮ್ಮೆ ನೀವು ದಾರಿ ತಪ್ಪಿದಾಗ ಹೇಳಬೇಕಾಗುತ್ತದೆ. ಗೂಂಡ ಆಕ್ಟ್ ಜಾರಿಗೆ ತಂದಾಗ ನಾವು ಎಲ್ಲರೂ ಹೇಳಿದೆವು ಇದನ್ನು ಜಾರಿಗೆ ತರಬೇಡಿ ಎಂದು, ಇದರಿಂದ ಏನಾಯಿತು ಎಂದರೆ ಮತಷ್ಟು ಕಳ್ಳರು ಜಾಸ್ತಿಯಾದರು. ಗೂಂಡಾ ಆಕ್ಟ್ ಮಾಡಿದಿರಿ, ಮುನಿಸಿಪಲ್ ಎಲೆಕ್ಷನ್ ನಡೆಸಿದರು ಆದಾದ ಮೇಲೆ ಅವರನ್ನೆಲ್ಲಾ ಬಿಡಿಸಿದಿರಿ ಇದು ನಿಮ್ಮ ನೀತಿ.

ಶ್ರೀ ಜೆ. ಎಚ್. ಪಟೇಲ್.—ಗೂಂಡಾ ಆಕ್ಟ್ ಮಾಡಿ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಆಗಬೇಕಾಗಿತ್ತೋ ಅಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಆಗಲಿಲ್ಲ, ಅದನ್ನು ಒಪ್ಪುತ್ತೇವೆ, ಸಮಾಜದಲ್ಲಿರತಕ್ಕಂಥ ಕ್ರೈಂ ದಂಡ ಏನು ಇದೆ ? ಹಿಂದಿನ ಸರ್ಕಾರದ ಕ್ರಮಗಳಿಂದ ಗೂಂಡಾಗಳು ಮತ್ತು ಸಮಾಜದಲ್ಲಿರತ್ಕಂಥ ದುಷ್ಟ ಶಕ್ತಿಗಳು ವೃದ್ಧಿಯಾದರೇ ಹೊರತು ಕಡಿಮೆಯಾಗಲಿಲ್ಲ ಹೇಗೆಂದರೆ ಮಳೆ ಬಿದ್ದಮೇಲೆ ಹನಿಗಳು ತೊಟ್ಟಿಕ್ಕಿ ಬೀಳುತ್ತಲೇ ಇರುತ್ತವೆ. ಅವರ ಕಾಲದಲ್ಲಿ ಆದಂಥದ್ದು ಈಗಲೂ ಹನಿ ಬೀಳುತ್ತಲೇ ಇದೆ ಇದೆಲ್ಲಾ ತಕ್ಷಣವೇ ಹೋಗಿಬಿಡುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ ಮಳೆ ನಿಂತ ಮೇಲೆ ಹನಿಗಳು ನಿಲ್ಲುವುದಿಲ್ಲ.

ಶ್ರೀ ಎಂ. ರಾಮಪ್ಪ.—ಇವರು ಬೆಳೆಸಿರತಕ್ಕಂಥ ಗಿಡಗಳಲ್ಲಿ ತೊಟಕುಗಳು ಮಳೆಗಿಂತಲೂ ಜಾಸ್ತಿ ಬೀಳುತ್ತಲೇ ಇರುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ರಾಮಪ್ಪನವರಿಗೆ ಗೂಂಡಾಗಳು ಎಂದರೆ ಸಿಟ್ಟು ಏತಕ್ಕೆ ಬರುತ್ತದೆಯೋ ನನಗಂತೂ ಗೊತ್ತಿಲ್ಲ.

ಶ್ರೀ ಎಂ. ರಾಮಪ್ಪ.—ನನಗೆ ಗೂಂಡಾಗಳು ಎಂದುದಕ್ಕೆ ಸಿಟ್ಟುಬರಲಿಲ್ಲ......

ಉಪಾಧ್ಯಕ್ಷರು.—ಗೂಂಡಾ ಶಬ್ಧಕ್ಕೆ ಹೋಲಿಸಿದರು.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಪಾಟೀಲ್‌ರವರು ಲಾ ಅಂಡ್ ಆರ್ಡರ್ ಬಗ್ಗೆ ಬಹಳವಾಗಿ ಪ್ರಸ್ತಾಪ ಮಾಡಿದರು, ಮತ್ತೆ ಎಕನಾಮಿಕ್ ಪಾಯಿಂಟ್ ಬಗ್ಗೆ ಪ್ರಸ್ತಾಪ ಮಾಡಿದರು.

ಶ್ರೀ ಕೆ. ಎಚ್ ಪಾಟೀಲ್.—ನಿಮಗೆ ಏತಕ್ಕೆ ಎಕನಾಮಿಕ್ ಪಾಯಿಂಟ್ ಬೇಕು ? ವಿನೋದದ ರೀತಿಯಲ್ಲಿ ಹೇಳಿಬಿಟ್ಟರೆ ಸಾಕು, ಸಂಬಂಧಪಟ್ಟ ಮಂತ್ರಿಗಳೇ ಹೇಳಲಿಕ್ಕೆ ಆಗುವುದಿಲ್ಲವೆಂದು ಓಡಿ ಹೋಗಿಬಿಟ್ಟರು ನೀವು ಏತಕ್ಕೆ ಚಿಂತೆ ಮಾಡುತ್ತೀರಿ ?

ಶ್ರೀ ಜೆ.ಎಚ್. ಪಟೇಲ್.—ತಾವು ಹೇಳಿ ಭಿಕ್ಷೆ ಬೇಡುತ್ತಿದ್ದೀರಿ ಎಂದು ಹೇಳಿದಿರಿ.

ಶ್ರೀ ಕೆ.ಎಚ್. ಪಾಟೀಲ್.—ತಮ್ಮ ಸಲುವಾಗಿ ಭಿಕ್ಷೆ ಬೇಡಲಿಕ್ಕೆ ಗೌವರ್ನರನ್ನು ಹೊರಟಿದ್ದಾರೆ ಎಂದು ಹೇಳಿದೆ.

ಶ್ರೀ ಜೆ. ಎಚ್. ಪಟೇಲ್.— ನಿಮ್ಮನ್ನು ನಾವು ಕೇಳುತ್ತಿಲ್ಲ. ಜನಸಾಮಾನ್ಯರು ಕೇಳುತ್ತಿದ್ದೇವೆ, ನೀವು ಕೊಟ್ಟರೆ ನಮಗೇನು ಚಿಂತೆ ಇಲ್ಲ.

ಶ್ರೀ ಕೆ ಎಚ್ ಪಾಟೀಲ್.—ಏನು ಪಕ್ಷದ ಅಭಿಮಾನ ಇರಬೇಕು ಅದನ್ನು ಮೀರಿ ಹೋಗುತ್ತಿದ್ದೀರಿ ನಿಮ್ಮಲ್ಲಿ ಹಿರಿಯರು ಇರುವುದರಿಂದ ನನಗೆ ಕೆಟ್ಟಶಬ್ದವನ್ನು ಉಪಯೋಗ ಮಾಡಲಿಕ್ಕೆ ಬರುವುದಿಲ್ಲ ಕರ್ನಾಟಕ ನಾಲ್ಕು ಕೋಟಿ ಜನರನ್ನು ಕೇಳಿ ನಿಮ್ಮೆಲ್ಲರಿಗಿಂತ ಹೆಚ್ಚು ಕೊಟ್ಟಿದ್ದೀರಿ ನೀವು ಕೇಳುವುದಕ್ಕೆ ಮೊದಲೇ ನಾವು ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಕೇಳಿದಂಥ ಸ್ಥಿತಿಯಲ್ಲಿ ನಾವು ನಿಜವಾಗಿಯೂ ಅದು ಉತ್ತಮವಾದ ಸಲಹೆ ಎಂದು ಹಣ ಕೊಟ್ಟಿದ್ದೇವೆ.

ಶ್ರೀ ಜೆ.ಎಚ್. ಪಟೇಲ್.—ಯಾರು ಕೊಟ್ಟರೂ ಬರಗಾಲ ಪರಿಹಾರಕ್ಕೆ ತೆಗೆದುಕೊಳ್ಳುತ್ತೇವೆ, ಇದರಿಂದ ಅನುಕೂಲವಾಗಲಿ ಎಂಬುದೇ ನಮ್ಮ ಇಚ್ಛೆ.

ಶ್ರೀ ಕೆ.ಎಚ್. ಪಾಟೀಲ್.—ಕಾಂಗ್ರೆಸ್ ಪಕ್ಷದವರು ಕೊಡಬಾರದು ಎಂದು ಇಲ್ಲಿ ಕೊಡಲಿಕ್ಕೆ ಬರುತ್ತದೆ. ಕಾಂಗ್ರೆಸ್ ಪಕ್ಷದವರು ಕೊಡಬೇಕೆಂದು ಇದ್ದುದರಿಂದ ಮಾನ್ಯ ಕೆ ಎಚ್ ರಂಗನಾಥ್ ರವರು ಅಧ್ಯಕ್ಷರಾಗಿದ್ದಾಗ ಎಲ್ಲರೂ ಕೊಡಬೇಕು ಒಂದು ಪ್ರಕಟಣೆಯನ್ನು ಹೊರಡಿಸಿ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಪೂರ್ಣವಾಗಿ ಸರಕಾರವನ್ನು ಕೊಡಬೇಕೆಂದು ವಿನಂತಿಸಿಕೊಂಡೆವು.

ಶ್ರೀ ಜೆ.ಎಚ್. ಪಟೇಲ್.—ಅದರ ಬಗ್ಗೆ ಸಂಪೂರ್ಣವಾದ ಸ್ವಾಗತ ಇದೆ.

೧೦–೩೦ ಎ.ಎಂ.

ಶ್ರೀ ಜೆ. ಹೆಚ್. ಪಟೇಲ್—ರಾಜ್ಯಪಾಲರು ಏನು ಹೇಳಿದರೂ ಸರ್ಕಾರದ ಭಾಷೆಯಲ್ಲಿಯೇ ಹೇಳುವುದು ಯಾವುದೇ ರಾಜ್ಯದಲ್ಲೂ ರಾಜ್ಯಪಾಲರು ಸ್ವತಂತ್ರ ಭಾಷಣ ಮಾಡುವುದಿಲ್ಲ ಇಲ್ಲಿ ಭ್ರಷ್ಟಾಚಾರದ ಬಗ್ಗೆ ಲೋಕಾಯುಕ್ತ ಬಗ್ಗೆ ಮಾತನಾಡಿದ್ದಾರೆ. ಅದನ್ನು ನಿಲ್ಲಿಸಬೇಕೆಂದು ಶ್ರೀ ಕೆ.ಹೆಚ್. ಶ್ರೀನಿವಾಸ್ ಹೇಳಿದರು. ಅವರು ಹೇಳುವುದು, ರಾಜಕೀಯ ಪೈಪೋಟಿಯನ್ನು ನಿಲ್ಲಿಸಬೇಕು. ಮೌಲ್ಯಗಳನ್ನು ನಾವೆಲ್ಲರೂ ಸೇರಿ ಪಾಲಿಸಬೇಕೆಂದೂ ಹೇಳಿದರು. ನಿಜವಾಗಿಯೂ ಇದು ಸ್ವಾಗತಾರ್ಹವಾದ ಮಾತು. ಆದರೆ ಸಮಿತಿಗಳಿಗೆ ಇಂಥವರನ್ನು ನೇಮಿಸಿದ್ದಾರೆಂದು ಅವರು ಹೇಳಿದ್ದಾರೆ. ಅದರಲ್ಲಿ ಏನು ದೋಷ ಕಂಡುಬಂದಿತು ? ಶ್ರೀ ಬಿ ಎಲ್ ಗೌಡರು ಈ ಸದನದ ಸದಸ್ಯರಾಗಿದ್ದರು. ಅವರನ್ನು ಈಗ ಲೋಕಸೇವಾ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಅವರು ಶಕ್ತರಲ್ಲವೇ, ಅವರಲ್ಲಿ ಶಕ್ತಿ ಇಲ್ಲವೇ ?

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಬಿ ಎಲ್ ಗೌಡರಲ್ಲಿ ದೋಷ ಇಲ್ಲ. ಆದರೆ ನಾವು ಹೇಳುತ್ತಿರುವುದು ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಆಗಿದೆ. ನೂರಕ್ಕೆ ತೊಂಭತ್ತರಷ್ಟು ದೋಷವಿರುವ ಜನ ಇದ್ದಾರೆ. ಅವುಗಳನ್ನು ತೋರಿಸುವುದಕ್ಕೆ ನಾವೇಕೆ ಹೋಗೋಣ ? ಹೊಡೆಯಲಿ ಚಕ್ಕಡಿ. ಕ್ರಿಮಿನಲ್ ಕೇಸ್. ಮಿಸ್ ಅಪ್ರಾಪ್ರಿಯೇಷನ್ ಕೇಸ್ ಇದ್ದವರನ್ನು ಸಿಟಿ ಡೆವಲಪ್‌ಮೆಂಟ್ ಛೇರ್ಮನ್ನರಾಗಿ ನೇಮಿಸಿಲ್ಲವೇ ? ಅನೇಕ ಆಪಾದನೆಗಳಿದ್ದ ಜನರನ್ನೂ ಕಾಡಾ ಚೇರ್ಮನ್‌ರಾಗಿ ನೇಮಿಸಲಿಲ್ಲವೆ ?

ಶ್ರೀ ಜೆ. ಹೆಚ್. ಪಟೇಲ್—ನಮ್ಮ ಪಕ್ಷದ ಸದಸ್ಯರು ನಮಗೆ ಚೆಂದವಾಗಿ ಕಾಣುತ್ತಾರೆ. ಅವರಿಗೆ ಬೇಕಾಗುವುದಿಲ್ಲ ಅವರು ಪಕ್ಷದವರು ಅವರಿಗೆ ಚೆಂದವಾಗಿ ಕಾಣುತ್ತಾರೆ. ನಮ್ಮಲ್ಲಿ ಕೆಟ್ಟವರು ಇದ್ದರೆ ನೀವು ತೋರಿಸಬಹುದು ನಾವು ಇಲ್ಲಿ ಫ್ರಾಂಕ್ ಆಗಿ ಇರುವುದು ಒಳ್ಳೆಯದು.

ಶ್ರೀ ಕೆ.ಹೆಚ್. ಪಾಟೀಲ್.—ಇದನ್ನು ಒಂದು ಛಾಲೆಂಜ್ ಎಂದು ಹೇಳುತ್ತೇನೆ. ಕಾಂಗ್ರೆಸ್ಸಿಗರು ಬಹಳ ದಿನ ಆಡಳಿತ ಮಾಡಿದ್ದಾರೆ. ಅನೇಕ ಕೆಟ್ಟಕೆಲಸಗಳನ್ನು ಮಾಡಿದ್ದಾರೆಂದು ನೀವು ಹೇಳುತ್ತೀರಿ ಆದ್ದರಿಂದ ನಿಮ್ಮನ್ನು ಜನ ಇಳಿಸಿ, ನಮಗೆ ಅಧಿಕಾರ ಕೊಟ್ಟಿದ್ದಾರೆ. ಎನ್ನುತ್ತೀರಿ, ನಿಮ್ಮಲ್ಲಿ

ಯೋಗ್ಯತೆ ನಿಮಗೇನಾರ ಇದ್ದರೆ ಯಾರು ತಪ್ಪು ಮಾಡಿದ್ದರೆ, ಅವರನ್ನು ಲೋಕಾಯುಕ್ತಕ್ಕೆ ಒಳಪಡಿಸಿ ಇಲ್ಲದಿದ್ದರೆ, ಎನ್‌ಕ್ವೈರಿ ಕಮಿಷನ್‌ಗೆ ನೇರವಾಗಿ ಕ್ರಿಮಿನಲ್ ಮೇಲೆ ಹಾಕಿ. ಆಗಿದಾಂಗ್ಗೆ ಈ ಸಭೆಯಲ್ಲಿ ಈ ಪಕ್ಷದಲ್ಲಿ ಕೆಟ್ಟವರು ಇದ್ದಾರೆಂದು ಹೇಳುವುದು ಸರಿಯಲ್ಲ ದೇಶಕ್ಕಾಗಿ ತ್ಯಾಗ ಮಾಡಿದಂತ ಪಕ್ಷ ಈ ಕಾಂಗ್ರೆಸ್. ನೀವು ಈ ರೀತಿ ಮಾತನಾಡಿದರೆ, ಅವಹೇಳನ ಮಾಡಿದಂತಾಗುತ್ತದೆ. ನಮ್ಮಲ್ಲಿ ಖದೀಮರು ಯಾರಾದರೂ ಇದ್ದರೆ ಅವರನ್ನು ಬಡಿಯಿರಿ.

ಶ್ರೀ ಜೆ.ಹೆಚ್. ಪಟೇಲ್.—ಈ ಮಾತನ್ನು ನಾನು ಒಪ್ಪುತ್ತೇನೆ. ನಮ್ಮ ಈ ರಾಜಕೀಯ ಪೈಪೋಟಿಯಲ್ಲಿ ಇಡೀ ದೇಶದಲ್ಲಿ ಕೆಲವು ಮೂಲಭೂತ ಮೌಲ್ಯಗಳನ್ನು ಕಳೆದುಕೊಂಡಿದ್ದೇವೆ, ಅಧಿಕಾರ ಸಂಪಾದಿಸುವ ಮೂಲ ಉದ್ದೇಶ ಇಟ್ಟುಕೊಂಡು ಸರ್ಕಾರವು ಹಂಚಬೇಕೆನ್ನುವ ಉದ್ದೇಶವನ್ನಿಟ್ಟು ಕೊಂಡು ಹೋಗಬೇಕಾದ ದಾರಿಯಲ್ಲಿ ಹೋಗದೇ ಬೇರೆ ಮಾರ್ಗಕ್ಕೆ ಹರಿಯುವ ವಿರೋಧಪಕ್ಷಗಳು ಯಾವುದೇ ರೀತಿಯಲ್ಲಾದರೂ ಸರಿ ಅಧಿಕಾರಕ್ಕೆ ಬರಬೇಕೆನ್ನುವುದು ಭಾರತದಲ್ಲಿರುವ ಪರಿಸ್ಥಿತಿ ಆಳುವಪಕ್ಷ ಕಾಂಗ್ರೆಸ್ ಇರಬಹುದು, ಜನತಾ ಇರಬಹುದು, ಕಮ್ಯೂನಿಸ್ಟ್ ಇರಬಹುದುದು, ಅಥವಾ ಅಕಾಲಿದಳ ಇರಬಹುದು. ಆದರೆ ಅಧಿಕಾರಕ್ಕೋಸ್ಕರ ಎಲ್ಲಾ ಮೌಲ್ಯಗಳನ್ನು ನಾವು ಬಿಟ್ಟುಬಿಡಬಾರದು ಇದೇ ಮಾತನ್ನು ತುರ್ತುಸ್ಥಿತಿ ಡಿಕ್ಲೇರ್ ಆದಾಗ ಶ್ರೀ ಜಯಪ್ರಕಾಶ್ ನಾರಾಯಣ್ ಹೇಳಿದ್ದರು. ದಿವಂಗತ ಜವಹರಲಾಲ್‌ರ ಮೌಲ್ಯಗಳೂ ಇಲ್ಲವಾಗಿವೆ. ಈಗಲಾದರೂ ಈ ನಮ್ಮ ಪೈಪೋಟಿಯಲ್ಲಿ ಮೌಲ್ಯಗಳು ಹಾನಿಯಾಗದಂತೆ ನೋಡಿಕೊಳ್ಳಬೇಕು ತಪ್ಪುಗಳೇನಾದರೂ ಇದ್ದರೆ, ಅವುಗಳನ್ನು ತಿದ್ದಿ ಕೊಳ್ಳುವುದಕ್ಕೆ ಸಾಧ್ಯ ಇದ್ದರೆ. ಪ್ರಯತ್ನಮಾಡಬೇಕು, ಆರ್ಥಿಕ ಕಾರ್ಯಕ್ರಮಗಳಲ್ಲಿ ನಮಗೂ ನಿಮಗೂ ಮೂಲತಃ ವ್ಯತ್ಯಾಸ ಇದೆ. ಶ್ರೀ ಕೆ.ಹೆಚ್. ಶ್ರೀನಿವಾಸ್ ಅವರು ಇದನ್ನು ಬಹಳ ಹಗುರ ವಾಗಿ ಹೇಳಿದರು. ಅವರು ೨೧ನೇ ಶತಮಾನವೆಂದು ಹೇಳಿದರೆ, ಅವರು ೧೯ನೇ ಶತಮಾನವೆಂದು ಹೇಳುತ್ತಾರೆ. ಅವರು ಎಲೆಕ್ಟ್ರಾನಿಕ್ಸ್ ಎಂದು ಹೇಳಿದರೆ, ಅದನ್ನು ಎತ್ತಿನಗಾಡಿ ಎಂದು ಹೇಳಿದರು. ಇದೇ ನಮಗೂ ನಿಮಗೂ ಇರುವ ವ್ಯತ್ಯಾಸ. ಶ್ರೀ ರಾಜೀವ್‌ಗಾಂಧಿಯವರ ರಾಜಕಾರಣದ ಬಗ್ಗೆ ನಮಗೇನಾದರೂ ಗೌರವ ಇದೆಯೆಂದರೆ ಅದು ಅವರ ಹೊಸತನಕ್ಕೆ ಮಾತ್ರ ಅವರನ್ನು ಮಿಸ್ಟರ್ ಕ್ಲೀನ್ ಮಿಸ್ಟರ್ ನ್ಯೂ ಎಂದು ಕರೆಯುತ್ತಿರಬಹುದು. ಅವರು ೨೧ನೇ ಶತಮಾನಕ್ಕೆ ಹೋಗಬೇಕೆಂದು ಹೇಳಿ ದ್ದಾರೆ. ಅವರು ಮಾಡುವುದೆಲ್ಲಾ ತಪ್ಪು ಎಂದು ಹೇಳುವುದಿಲ್ಲ, ಅವರ ವಿಹನ್‌ಗೂ ನಮ್ಮ ದೇಶದಲ್ಲಿರತಕ್ಕ ಸ್ಥಿತಿಗತಿಗೂ ಬಹಳ ಅಂತರವಿದೆ. ಶ್ರೀ ಕೆ ಹೆಚ್ ಶ್ರೀನಿವಾಸ್ ಹೇಳಿದ್ದರ ಬಗ್ಗೆ ಬಹಳ ವಿಶ್ಲೇಷಣೆ ಮಾಡಬೇಕಾಗಿದೆ. ಪ್ರಪಂಚದಲ್ಲಿ ನಮ್ಮಲ್ಲಿ ಎರಡು ತರಹ ಜನರಿದ್ದಾರೆ. ಒಬ್ಬ ಸ್ವತಂತ್ರ ವಿಶ್ವಮಾನವ ಅರ್ಥಶಾಸ್ತ್ರಜ್ಞ ಇನ್ನೊಬ್ಬ ಕಾಸ್ಮೋಪಾಲಿಟಿನ್ ತನ್ನ ದೇಶದಲ್ಲೇ ಆಗಲಿ, ತನ್ನ ರಾಜ್ಯದಲ್ಲೇ ಆಗಲಿ ಕೆಲವೊಂದು ಸುಧಾರಣೆ ಮಾಡುವವನು ಉದಾಹರಣೆಗೆ. ನೀವು ವಾಷಿಂಗ್‌ಟನ್, ಬಾಂಬೆ, ಡೆಲ್ಲಿ, ಬೆಂಗಳೂರು, ಅಮೇರಿಕಾ ಯಾವುದೇ ಪಂಚತಾರಾ ಹೋಟಲಿನಲ್ಲಿದ್ದರೂ, ಒಳಗಿದ್ದಾಗ ಒಂದೆ ಫೀಲಿಂಗ್ ಇರುತ್ತದೆ. ಅದೇ ಹೋಟಲಿನಿಂದ ಹೊರಗಡೆ ಬಂದು ನೋಡಿದಾಗ. ಬೆಂಗಳೂರಿನಲ್ಲೇ ಆಗಲಿ ಅಮೇರಿಕಾದಲ್ಲೇ ಆಗಲಿ ಕಾಣುವ ದೃಶ್ಯವೇ ಬೇರೆ ನಾವು ಎಲೆಕ್ಟ್ರಾನ್ಸ್‌ಗೆ ಹೋಗುತ್ತಿದ್ದೇವೆ ಎಂದರೆ ಈ ಪಂಚತಾರಾ ಜನರನ್ನು ಮಾತ್ರ ಮಾತ್ರ ಕರೆದುಕೊಂಡು ಹೋಗುವುದೇ ? ಎತ್ತಿನ ಗಾಡಿಯನ್ನು ಕರೆದುಕೊಂಡು ಹೋಗುವುದೇ. ಎಂಬುದು ಪ್ರಶ್ನೆ. ಯೂನಿವರ್ಸಲಿಸ್ಟ್ ಏನು ಹೇಳುತ್ತಾರೆಂದರೆ. ಜಗತ್ತಿನಲ್ಲಿ ಎಲ್ಲರೂ ಸುಧಾರಣೆಯಾಗಬೇಕು. ಆದರೆ, ಐದು ಬೆರಳೂ ಸಮಾನವಾಗಿರುವುದಿಲ್ಲ. It is not an absolute equality but it is a possible equality. ಯೂನಿವರ್ಸಲಿಸ್ಟ್ ಎಂದರೆ ಲೆನಿನ್, ಮಹಾತ್ಮ ಗಾಂಧಿ, ಲೇನಿನಂಥವರು ಹೋಚಿಮಿನ್‌ರವರು. ಕಾಸ್ಮೋಪಾಲಿಟಿನ್ ಯಾರೆಂದರೆ, ಆ್ಯಡಂ ಸ್ಮಿತ್‌ನ ಅರ್ಥಶಾಸ್ತ್ರದಲ್ಲಿ ನಂಬಿಕೆ ಇರತಕ್ಕ ಬಹುತೇಕ ಪಾಶ್ಚಾತ್ಯ ರಾಷ್ಟ್ರದವರು. ಅವರೂ ಸಹ ಸಂಪೂರ್ಣ ವಿಕಾಸವಾದದ ಬಗ್ಗೆ ಪ್ರಯತ್ನ ಮಾಡಿದ್ದಾರೆ. ಆದರೆ ಕೆಲವು ಇಂಡಸ್ಟ್ರಿಯ ಲಿಸ್ಟ್ ರೆವಿಲ್ಯೂಷನ್ ಬೆನಿಫಿಟ್ಸ್ ಸಿಕ್ಕಿತು ನಮ್ಮ ಏಷ್ಯನ್ ರಾಷ್ಟ್ರಗಳಿಗೆ ಸಿಕ್ಕುವುದಿಲ್ಲ. ಕಾಂಗ್ರೆಸ್ ಸಿದ್ಧಾಂತಕ್ಕೂ, ಜನತಾ ಪಕ್ಷದ ಸಿದ್ಧಾಂತಕ್ಕೂ ವ್ಯತ್ಯಾಸ ಮೂಲತಃ ಇದೆ, ಹಳ್ಳಿಗಳಲ್ಲಿ ಚಪ್ಪಲಿ ಹೊಲೆಯುವವರು ಇರಬೇಕಾದ ಅವಕಾಶ ಇಲ್ಲ. ಎಂದರೆ, ಚಪ್ಪಲಿ ಹೊಲೆಯುವವರೂ ಹೋಗಿ ಬಿಟ್ಟರು. ಹಿಂದೆ. ಹಳ್ಳಿಗಳಲ್ಲಿ ಚಪ್ಪಲಿ ಹೊಲೆಯುವುದು ಒಂದು ಕಸಬಾಗಿತ್ತು. ಅಂದರೆ, ಈಗ ಪರಿಸ್ಥಿತಿ ಆ ತರಹ ಇಲ್ಲ.

ಈ ಬಾಟ ಕಂಪನಿ ಬಂದ ಮೇಲೆ ಚಪ್ಪಲಿ ಹೊಲೆಯುವವನು ಹೋದ, ಟಾಟಾ ಕಂಪನಿ ಬಂದ ಮೇಲೆ ಎಣ್ಣೆ ತಯಾರು ಮಾಡುತ್ತಿದ್ದ ಗಾಣಿಗ ಹೋದ, ಪ್ಲಾಸ್ಟಿಕ್ ಕೊಡಗಳನ್ನು ಮಾಡುವ ಕಾರ್ಖಾನೆಗಳು ಬಂದ ಮೇಲೆ ಕುಂಬಾರ ಹೋದ. ಹೀಗೆ ನಮ್ಮ ಭಾರತದಲ್ಲಿದ್ದ ಎಲ್ಲಾ ವೃತ್ತಿಗಳೂ ನಿರ್ಮೂಲವಾದವು. ಯಾರೂ ಕೂಡ ಇವರ ಮೇಲೆ ಬುಲ್ಡೋಜರ್ ತಂದು ಹೊಡೆಯಲಿಲ್ಲ, ಕಾಸ್ಮೋಪಾಲಿಟನ್ ಎಕಾನಮಿ ಬಂದ ಮೇಲೆ ಅದರ ಒಂದು ವಿಷವರ್ತುಲದಲ್ಲಿ ಹೀಗಾಗಿ ಹಳ್ಳಿಯಲ್ಲಿ ವಿವಿಧ ವೃತ್ತಿಗಳನ್ನು ಮಾಡಿಕೊಂಡು ಜೀವನ ಮಾಡುತ್ತಿದ್ದವರು ತಾವೇ ತಾವಾಗಿ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳನ್ನು ಸೇರುವುದಕ್ಕೆ ಪ್ರಾರಂಭ ಮಾಡಿದರು. ಹಳ್ಳಿಯ ಸಂತೆಗೆ ಹೆಂಗಸರು ಹೋದಾಗ ಪ್ಲಾಸ್ಟಿಕ್ ಕೊಡ ಸಿಕ್ಕಿದರೆ ಅದನ್ನು ತೆಗೆದುಕೊಳ್ಳುತ್ತಾರೇಹೊರತು ಹೊಡೆದು ಹೋಗತಕ್ಕ ಮಣ್ಣಿನ ಕೊಡವನ್ನು ಯಾರು ಕೊಂಡುಕೊಂಡು ಬರುವುದಿಲ್ಲ. ಯಾರೇ ಆಗಲಿ ಒಡೆದುಹೋಗತಕ್ಕ ಕೊಡವನ್ನು ತೆಗೆದುಕೊಳ್ಳುತ್ತಾರೋ ಒಡೆಯದೇ ಇರತಕ್ಕ ಕೊಡವನ್ನು ತೆಗೆದುಕೊಳ್ಳುತ್ತಾರೋ, ನೀವೇ ಹೇಳಿ ? ೫ ರೂಪಾಯಿಗಳಿಗೆ ಪ್ಲಾಸ್ಟಿಕ್ ಚಪ್ಪಲಿ ಸಿಕ್ಕುವುದಾದರೆ ೧೫–೨೦ ರೂಪಾಯಿಗಳನ್ನು ಕೊಟ್ಟು ಚರ್ಮದ ಚಪ್ಪಲಿಗಳನ್ನು ಯಾರೂ ಕೂಡ ತೆಗೆದುಕೊಳ್ಳುವುದಿಲ್ಲ. ವಿಲೇಜ್ ಇಂಡಸ್ಟ್ರೀಸ್ ಮತ್ತು ಕಾಟೇಜ್ ಇಂಡಸ್ಟ್ರೀಸ್ ನಾಶವಾಗಿ ಹೋಗುವುದಕ್ಕೆ ಕಾರಣ ಈ ಕಾಸ್ಮೋಪಾಲಿಟನ್ ಎಕನಾಮಿಕ್ಸ್, ಕಾರಣ ಮಾನಾಪಾಲಿಗಳನ್ನು ಸೃಷ್ಟಿ ಮಾಡುವುದೇ ಈ ಕಾಸ್ಮೋಪಾಲಿಟನ್ ಎಕನಾಮಿಕ್ಸ್. ಗ್ರಾಮಾಂತರ ಪ್ರದೇಶದಲ್ಲಿರುವವರು ಅಲ್ಲಿಯೇ ಇರಬೇಕು. ಅವರು ಅಲ್ಲಿಯೇ ಬದುಕುವಂತೆ ಮಾಡಬೇಕೆಂಬುದು ಯೂನಿವರ್ಸಲಿಸ್ಟ್ ಎಕಾನಮಿಯ ಸಿದ್ಧಾಂತ. ಇದರಲ್ಲಿ ಒಂದು ಪಿತೂರಿ ನಡೆದು ಕಾಸ್ಮೋಪಾಲಿಟನ್ ಎಕಾನಮಿಯಿಂದಾಗಿ ಹಳ್ಳಿಗಾಡಿನ ಜನರು ಈ ಒಂದು ಪರಿಸ್ಥಿತಿಗೆ ಬಂದಿದ್ದಾರೆ. ಇಡೀ ರಾಷ್ಟ್ರದ ಜನರು ನರನಾಡಿಯನ್ನು ಸ್ಪಂದಿಸುವ ಹೊರೆಯನ್ನು ಹೊತ್ತಿದ್ದ ದಿವಂಗತ ಜವಾಹರಲಾಲ್ ನೆಹರೂವರು ಈ ರಾಷ್ಟ್ರದ ಪ್ರಧಾನ ಮಂತ್ರಿಯಾಗಿದ್ದರು. ಅವರು ಆಕಾಶ ಮತ್ತು ನೆಲ ಎರಡನ್ನೂ ನೋಡತಕ್ಕ ಒಂದು ನೀತಿಯನ್ನು ಇಟ್ಟುಕೊಂಡಿದ್ದರು. ಅವರ ಬಗ್ಗೆ ವೈಯುಕ್ತಿಕವಾಗಿ ನನಗೆ ಯಾವುದೇ ಭಿನ್ನಾಭಿಪ್ರಾಯವೂ ಇಲ್ಲ ಅಮೇರಿಕ ಮತ್ತು ರಷ್ಯಾದವರು ಆಕಾಶದತ್ತ ನೋಡುತ್ತಿದ್ದಾರೆಂದು ಹೇಳುವುದಾದರೆ ಅವರು ಈ ನೆಲದಮೇಲೆ ಮಾಡಬೇಕಾದ ಎಲ್ಲಾ ಕೆಲಸವನ್ನೂ ಮಾಡಿರುವುದರಿಂದ ಅವರು ಈಗ ಆಕಾಶದತ್ತ ಹೊರಟಿದ್ದಾರೆ. ಆದರೆ ನಾವು ಈ ನೆಲದಮೇಲೆಯೇ ಮಾಡಬೇಕಾದ ಕೆಲಸಗಳು ಅನೇಕವಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದಕ್ಕೆಲ್ಲಾ ನಿಮ್ಮ ಸೋಷಿಯಲ್ ಸಿಸ್ಟಂ ಕಾರಣ ಎಂಬುದನ್ನು ಮರೆಯಬಾರದು. ಹಳ್ಳಿಗಾಡಿನಲ್ಲಿ ಇವತ್ತು ನಾವು ಏನೇನು ಕೆಲಸ ಮಾಡಿದ್ದೇವೆಂಬುದನ್ನು ತಾವು ನೋಡಬೇಕು. ನೀವು ಅವರನ್ನು ಯಾವರೀತಿ ನೋಡುತ್ತೀರಿ ಎನ್ನುವುದು ಬಹಳ ಮುಖ್ಯ, ನಾವು ಮಾಡಿರತಕ್ಕ ಕೆಲಸದಿಂದ ನಮ್ಮ ಹಳ್ಳಿಗಾಡಿನ ಜನರಿಗೆ ಎಷ್ಟು ಉಪಯೋಗವಾಗಿದೆ ಎಂಬುದನ್ನು ತಾವು ನೋಡಬೇಕು.

ಶ್ರೀ ಜೆ.ಹೆಚ್. ಪಟೇಲ್.—ಒಂದು ವೃತ್ತಿಗೆ ಒಂದು ಜಾತಿ ಎಂದು ಅಂಟಿಸಿದ್ದರಿಂದ, ನಮ್ಮಲ್ಲಿ ಜಾತಿ ಪದ್ಧತಿ ಇನ್ನೂ ಇರುವುದರಿಂದ, ಇಂದಿನ ಸಮಾಜದಲ್ಲಿ ಇಷ್ಟೊಂದು ಆರ್ಥಿಕ ತೊಂದರೆಗೆ ಕಾರಣವಾಗಿದೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಮಾನ್ಯ ಲೋಹಿಯಾರವರ ನೆನಪು ಬರುತ್ತದೆ. ಅವರು ಕೇವಲ ಭಾಷಣ ಮಾಡುತ್ತಿದ್ದರೇ ಹೊರತು ಬೇರೆ ಯಾವುದೇ ಕೆಲಸವನ್ನೂ ಮಾಡುತ್ತಿರಲಿಲ್ಲ, ತಾವು ಸ್ವದೇಶಿ ಬಗ್ಗೆ ಹೇಳುತ್ತೀರಿ, ಮಹಾತ್ಮ ಗಾಂಧಿಯವರ ತತ್ವಗಳ ಬಗ್ಗೆ ಹೇಳುತ್ತಿದ್ದೀರಿ, ಆದರೆ ತಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ತಾವು ಮಾಡಿರತಕ್ಕ ಕೆಲಸಗಳಾದರೂ ಏನು ಎಂಬುದನ್ನು ಹೇಳುತ್ತೀರಾ ?

ಶ್ರೀ ಜೆ.ಹೆಚ್. ಪಟೇಲ್.—ತಾವು ಹೇಳುತ್ತಿರುವುದು ಇತ್ತ ಅಬ್‌ಸ್ಟ್ರ್ಯಾಕ್ಟ್ ಅಲ್ಲ. ಕಾಂಕ್ರೀಟೂ ಅಲ್ಲ.........

ಶ್ರೀ ಕೆ. ಎಸ್. ನಾಗರತ್ನಮ್ಮ.—ಲೇಸರ್ ಬೀಮ್ಸ್ ಬಂತು. ಎಲೆಕ್ಟ್ರಾನಿಕ್ಸ್ ಬಂತು, ಸ್ಪೇಸ್ ಬಂತು ಎಲ್ಲಾ ಬಂತು. ಆದರೂ ನಾವು ಹಬ್ಬಳ್ಳಿಯಲ್ಲಿ ಬಾವಿಯಿಂದ ನೀರನ್ನು ಸೇದಿಕೊಂಡು ಮಡಿಕೆಯಲ್ಲಿ ಅಡಿಗೆ ಮಾಡಿಕೊಂಡಿರಬೇಕೆಂದು ತಾವು ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ತಾವು ಪ್ರಧಾನ ಮಂತ್ರಿಯಾಗಿದ್ದರೆ.........

ಶ್ರೀ ಆರ್. ಎಲ್. ಜಾಲಪ್ಪ.—ಶ್ರೀಮತಿ ನಾಗರತ್ನಮ್ಮನವರು ಹಳ್ಳಿಗಳನ್ನು ಮರೆತಿದ್ದಾರೆಂದು ಕಾಣಿಸುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ನೋಡಿದರೆ ಊರಿನ ಸುತ್ತ ವಾಸನೆ ಇದೆ. ಹೆಂಗಸರಿಗಾಗಲಿ, ಗಂಡಸರಿಗಾಗಲಿ ಇದುವರೆಗೂ ನಾವು ಲೆಟ್ರಿನ್ಸ್‌ನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅವರಿಗೆ ಕುಡಿಯುವುದಕ್ಕೆ ಶುದ್ಧವಾದ ನೀರನ್ನು ಕೊಡುವುದಕ್ಕೆ ಆಗಿಲ್ಲ, ಪುಸ್ತಕಗಳನ್ನು ಕೊಡುವುದಕ್ಕೆ ಆಗಿಲ್ಲ. ಆದರೂ ನಾವು ಆಕಾಶಕ್ಕೆ ಹೋಗುತ್ತೇವೆಂದು ಹೇಳುತ್ತಿದ್ದೀರಿ. ನೀವು ಆಕಾಶಕ್ಕೆ ಹೋಗುವುದಾದರೆ ಹೋಗಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಒಂದೊಂದು ಊರಿನಲ್ಲಿ ೧೦–೧೦ ಬಾರ್‌ಗಳನ್ನು ತೆರೆಯುವುದಕ್ಕೆ, ೧೦–೧೦ ರೆಸ್ಟೋರೆಂಟ್‌ಗಳನ್ನು ತೆರೆಯುವುದಕ್ಕೆ ಆಗುತ್ತದೆ. ಮಾನ್ಯ ಅಧ್ಯಕ್ಷರೇ, ನಾನು ಇನ್ನೂ ಏನೇನೋ ಹೇಳಬೇಕಾಗುತ್ತದೆ. ಅದನ್ನೆಲ್ಲಾ ಈಗ ಹೇಳಿದರೆ ಸರಿ ಹೋಗುವುದಿಲ್ಲ. ಆದ್ದರಿಂದ ಸುಮ್ಮನಿದ್ದೇನೆ.

ಉಪಾಧ್ಯಕ್ಷರು.—ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ತಾವು ಮಾತನಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಆಕಾಶಕ್ಕೆ ಹೋಗುವುದಿಲ್ಲ. ಇದರೆ ಅವರು ಊರು ಬಿಟ್ಟು ಇಲ್ಲಿಗೆ ಬಂದಿರುವುದರಿಂದ ಈ ರೀತಿ ಆಗಿದೆ.........

(ಗೊಂದಲ)

ಶ್ರೀ ಎಂ. ರಾಮಪ್ಪ.—ಮಾನ್ಯ ಜಾಲಪ್ಪನವರು ಮಾತ್ರ ಹಳ್ಳಿಯಲ್ಲಿದ್ದಾರೆ. ನಾವು ಮಾತ್ರ ಪಟ್ಟಣದಲ್ಲಿದ್ದೇವೆಯೋ ?

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಜಾಲಪ್ಪನವರು ತಮ್ಮ ಕಾಲದ ಇತಿಹಾಸವನ್ನೇ ಇನ್ನೂ ಹೇಳುತ್ತಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಕೆಲವು ಸೈದ್ಧಾಂತಿಕ ವಿಚಾರಗಳ ಭಿನ್ನಾಭಿಪ್ರಾಯದ ಬಗ್ಗೆ ನಾನು ಹೇಳುತ್ತಿದ್ದೆ. ಮಾನ್ಯ ಲೋಹಿಯಾರವರ ಬಗ್ಗೆ ಮಾನ್ಯ ಕೆ ಹೆಚ್ ಪಟೇಲ್‌ರವರು ಅವರು ಕೇವಲ ಭಾಷಣ ಮಾಡುತ್ತಿದ್ದರೇ ಹೊರತು ಯಾವ ಕೆಲಸವನ್ನೂ ಮಾಡಲಿಲ್ಲ ಎಂದು. ಅನ್‌ಚಾರಿಟಬಲ್ ಆಗಿ ಹೇಳಿದರು,

ಶ್ರೀ ಕೆ. ಹೆಚ್. ಪಾಟೀಲ್.— ಮಾನ್ಯ ಲೋಹಿಯಾರವರು ತಮ್ಮ ಕ್ಷೇತ್ರದಲ್ಲಿ ಏನು ಮಾಡಿದ್ದಾರೆಂಬುದನ್ನು ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಅದೇ ರೀತಿ ನೀವು ಇಲ್ಲಿ ಮಾತನಾಡುತ್ತಿದ್ದೀರೋ ಹೊರತು ಕಾರ್ಯತಃ ಏನು ಕೆಲಸ ಮಾಡಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.— ನೀವು ಮಾತನಾಡುತ್ತಿದ್ದಾಗ ನಾವು ಕೆಲಸ ಮಾಡಿದ್ದೇವೆ. ಸ್ವಾಮಿ, ೧೯೭೭ರವರೆವಿಗೂ ಜನತಾ ಪಕ್ಷದವರು ಒಂದೇ ಒಂದು ಪದವನ್ನೂ ಮಾತನಾಡಲು ನೀವು ಅವಕಾಶವನ್ನು ಕೊಟ್ಟಿರಲಿಲ್ಲ. ನಾನು ಏತಕ್ಕೆ ಹೇಳಬೇಕಾಗಿದೆ ಎಂದರೆ, ನಮಗೆ ನೀವು ಅವಕಾಶವನ್ನೇ ಕೊಟ್ಟಿರಲಿಲ್ಲ. ನೀವು ಮಾಡಿದ್ದನ್ನು ನಾವು ಹೇಳಬೇಕಾಗುತ್ತದೆ. ಅದೇ ರೀತಿ ನಾವು ಮಾಡಿದ್ದನ್ನು ನೀವು ಹೇಳಬೇಕಾಗುತ್ತದೆ. ಈ ವಿಚಾರದಲ್ಲಿ ನನ್ನ ಭಿನ್ನಾಭಿಪ್ರಾಯ ಇಲ್ಲ. ವಿಶ್ವ ಕಲ್ಯಾಣದ ಆರ್ಥಿಕ ಚಿಂತನೆಯಲ್ಲಿ ನಾವು ವಿಶ್ವಾಸವನ್ನು ಇಟ್ಟುಕೊಂಡಿದ್ದೇವೆ. ಇಲ್ಲಿ ನಾವು ಅಧಿಕಾರವನ್ನು ವಹಿಸಿಕೊಂಡ ಮೇಲೆ ಎರಡು ವಿಚಾರ ಬಂದಿದೆ. ಮೊದಲನೆಯದು ಮೂಲತಹ ಆರ್ಥಿಕ ಸುಧಾರಣೆ ಆಗಬೇಕಾದರೆ ನೀರಾವರಿ ಮತ್ತು ವಿದ್ಯುಚ್ಛಕ್ತಿ ಒದಗಿಸಲು ಎಷ್ಟು ಆದ್ಯತೆಯನ್ನು ಕೊಡಬೇಕೋ ಅದನ್ನು ಕೊಡಲೇ ಬೇಕಾಗಿದೆ. ಎರಡನೆಯದು ಎಂದರೆ ಸಮಾಜದಲ್ಲಿ ಬಡತನದ ಆಘಾತಕ್ಕೆ ಸಿಕ್ಕಿರುವವರ ಬಡತನವನ್ನು ನಿರ್ಮೂಲ ಮಾಡುತ್ತೇವೆ. ಬಡತನವನ್ನು ನಿರ್ಮೂಲ ಮಾಡುತ್ತೇವೆಂದು ಹೇಳುವುದಕ್ಕಿಂತ ಬಡತನವನ್ನು ಕಡಿಮೆ ಮಾಡುವುದಕ್ಕೆ ಏನು ಕೆಲಸ ಮಾಡಬೇಕೋ ಅದನ್ನು ಮಾಡಬೇಕಾಗಿದೆ. ಶ್ರೀಮತಿ ಇಂದಿರಾಗಾಂಧಿಯವರ ೨೦ ಅಂಶದ ಕಾರ್ಯಕ್ರಮದ ಹಿನ್ನಲೆಯನ್ನು ಅರಿತುಕೊಂಡು, ಬಡವರ ನೋವನ್ನು ಹೋಗಲಾಡಿಸಲು ನಾವು ಬಡತನವನ್ನು ನಿರ್ಮೂಲ ಮಾಡತಕ್ಕ ಕೆಲಸವನ್ನು

ಮಾಡುತ್ತಿದ್ದೇವೆ. ಆದರೆ ಕೆಲವು ಅರ್ಥ ಶಾಸ್ತ್ರಜ್ಞರು ಇದನ್ನು ವೇಸ್ಟ್‌ಫುಲ್ ಎಕ್ಸ್‌ಪೆಂಡಿಚರ್ ಅನ್ ಪ್ರೊಡಕ್ಟೀವ್ ಎಕ್ಸ್‌ಪೆಂಡೀಚರ್ ಎಂದು ಹೇಳಿದರು. ನಾನಾದರೂ ಹೇಳುತ್ತೇನೆ ನಿಮ್ಮ ಕಣ್ಣಿಗೆ ಈಗ ಇದು ವೇಸ್ಟ್‌ಫುಲ್ ಎಕ್ಸ್‌ಪೆಂಡೀಚರ್ ಆಗಿ ಕಾಣಬಹುದು. ಅನ್ ಪ್ರೊಡಕ್ಟೀವ್ ಎಕ್ಸ್‌ಪೆಂಡೀಚರ್ ಆಗಿ ಕಾಣಬಹುದು. ಆದರೆ ಈಗ ಯಾರು ಆರ್ಥಿಕವಾಗಿ ದುಃಸ್ಥಿತಿಯಲ್ಲಿದ್ದಾರೆ ಅವರಿಗೆ ನಾವು ತಕ್ಷಣ ಸಹಾಯ ಮಾಡದೇ ಹೋದರೆ ಅವರ ಜೀವನ ಕುಸಿದುಬೀಳುತ್ತಿದೆ. ಅನಂತರ ನಾವು ಏನು ಮಾಡಿದರೂ ಅದನ್ನು ಸರಿಪಡಿಸಲು ಸಾಧ್ಯವಿಲ್ಲ. ಬಹುಶ: ಈ ಮಾತನ್ನು ತಾವು ಒಪ್ಪಿಕೊಳ್ಳಬಹುದು. ಆದ್ದರಿಂದ ಬಡವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಹೆಚ್ಚಿನ ಗಮನವನ್ನು ನಾವು ಕೊಟ್ಟಿದ್ದೇವೆ. ಕಷ್ಟದಲ್ಲಿರುವವರಿಗೆ ತಕ್ಷಣ ಸಹಾಯ ಮಾಡುವ ಒಂದು ಕಾರ್ಯಕ್ರಮವನ್ನು ನಾವು ಇಟ್ಟುಕೊಂಡಿದ್ದೇವೆ. ಅದನ್ನು ಡೀಪ್ ಪಾಪ್ಯುಲಾರಿಟಿಗೋಸ್ಕರ ಇವರು ಮಾಡುತ್ತಿದ್ದಾರೆಂದು ತಾವು ತಿಳಿದುಕೊಂಡಿದ್ದರೆ ಅದಕ್ಕೆ ನಾವು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ.

ಮಾನ್ಯ ಸದಸ್ಯರು ಭ್ರಷ್ಟಾಚಾರದ ವಿಚಾರದಲ್ಲಿ ಒಂದು ಮಾತನ್ನು ಹೇಳಿದರು. ಶ್ರೀಮತಿ ಇಂದಿರಾಗಾಂಧಿಯವರು ಕೂಡ ಭ್ರಷ್ಟಾಚಾರದ ಬಗ್ಗೆ ಮಾತನಾಡಿ it is a world phenomenon, it is an universal phenomenon, ಎಂದು ಹೇಳಿದ್ದಾರೆ, ಎಂದರೆ ಇದು ಸರ್ವಾಂತರ್ಯಾಮಿ, ಇದು ಎಲ್ಲಾ ಕಡೆಯಲ್ಲೂ ಇದೆ ಎಂದು ಹೇಳಿದ್ದಾರೆ.

ಶ್ರೀ ಕೆ.ಹೆಚ್. ಪಾಟೀಲ್.—ಇಂದಿರಾಗಾಂಧಿಯವರು ಸತ್ತು ಹೋಗಿದ್ದಾರೆ ಎಂದು ಇದನ್ನು ಒಪ್ಪಿಕೊಳ್ಳುತ್ತಿದ್ದೀರಾ ?

ಶ್ರೀ ಜೆ.ಹೆಚ್. ಪಟೇಲ್.—ಇಡೀ ಒಂದು ರಾಷ್ಟ್ರದ ಆಡಳಿತ ಸೂತ್ರವನ್ನು ಹಿಡಿದಂಥ ಪ್ರಧಾನ ಮಂತ್ರಿಯವರು ಭ್ರಷ್ಟಾಚಾರ ಎಲ್ಲಾ ಕಡೆಯಲ್ಲೂ ಇದೆ. ಅದು ಸರ್ವಾಂತರ್ಯಾಮಿ ಎಂದು ಹೇಳುವುದಾದರೆ ತಾಲ್ಲೂಕು ಕಛೇರಿಯ ಗುಮಾಸ್ತ ೫ ರೂಪಾಯಿ ಕೇಳುವವನು ೧೦ ರೂಪಾಯಿ ಕೇಳಿದರೆ ಅದು ತಪ್ಪೆ ? ಇವತ್ತು ನಾವು ರಾಷ್ಟ್ರದಲ್ಲಿ ಯಾವರೀತಿಯ ವಾತಾವರಣವನ್ನು ನಿರ್ಮಾಣ ಮಾಡುತ್ತಿದ್ದೇವೆ ಎಂಬುದರ ಮೇಲೆ ರಾಷ್ಟ್ರದ ಭವಿಷ್ಯ ಅವಲಂಭಿತವಾಗಿದೆ. ಬೇರೆ ರಾಷ್ಟ್ರಗಳಲ್ಲಿರತಕ್ಕ ಭ್ರಷ್ಟಾಚಾರಕ್ಕೂ ನಮ್ಮ ರಾಷ್ಟ್ರದಲ್ಲಿಗತಕ್ಕ ಭ್ರಷ್ಟಾಚಾರಕ್ಕೂ ಹೋಲಿಕೆ ಮಾಡಿ ನೋಡಿದರೆ, ಅದು ಸರ್ವಾಂತರ್ಯಾಮಿ ಎಂದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಬಿ.ಎ. ಉಮರಬ್ಬ.—ರಾಷ್ಟ್ರ ಅಥವಾ ರಾಜ್ಯದ ಆರ್ಥಿಕ ನೀತಿ ಹೇಗಿರಬೇಕು ಎಂಬ ಬಗ್ಗೆ ಒಂದು ದಿನ ಚರ್ಚೆಯನ್ನು ತಾವು ಏರ್ಪಡಿಸಿದರೆ ಆಗ ಪಟೇಲರು ಮಾತನಾಡಲಿ, ನಾವೂ ಮಾತನಾಡುತ್ತೇವೆ. ಸುಮ್ಮನೆ ಇವೊತ್ತೇಕೆ ?

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಅವರು ಮಾತನಾಡಿದ್ದನ್ನು ಗುರುತು ಹಾಕಿಕೊಂಡು ಆಮೇಲೆ ಬೇಕಾದರೆ ಮಾತನಾಡಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಉಮರಬ್ಬರ ಹತ್ತಿರ ಪಟೇಲರೇನು ಅರ್ಥಶಾಸ್ತ್ರ ಕಲಿಯಬೇಕಾಗಿಲ್ಲ. ಮಾನ್ಯ ಪಟೇಲರಿಗಾಗಿರುವ ಅನುಭವದ ವರ್ಷಗಳಷ್ಟು ನಿಮ್ಮ ವಯಸ್ಸಾಗಿಲ್ಲ,

ಶ್ರೀ ಜೆ.ಹೆಚ್. ಪಟೇಲ್.—ಇವರು ಸುಮ್ಮನೆ ಅರ್ಥವಾಗದೆ ಮಾತನಾಡುತ್ತಾರೆ. ನೀವು ಏನು ಕೇಳುತ್ತೀರೋ ಅದರ ಬಗ್ಗೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಆಯಿತು. ನೀವು ಮಧ್ಯೆ ಮಾತನಾಡುವಾಗ ನಾವು ಯಾರಾದರೂ ಮಾತನಾಡಬೇಕೆನಿಸಿದರೆ ಯೀಲ್ಡ್ ಆಗಿ ಎನ್ನುತ್ತೇವೆ. ನೀವು ಯೀಲ್ಡ್ ಆದರೆ ಮಾತ್ರ ಮಾತನಾಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.—ರಾಷ್ಟ್ರದಲ್ಲಿ ಭ್ರಷ್ಟಾಚಾರದ ಪೂರಕವಾಗಿ ವಾತಾವರಣವನ್ನು ನಿರ್ಮಾಣ ಮಾಡಿದರೆ, ಆದರೆ ವೈಯಕ್ತಿಕವಾಗಿ ಆದರಲ್ಲಿ ಪ್ಯೂರಿಟಿ ಇರಬಹುದು. ಅಂದರೆ ಸಮಾಜ ಸುಧಾರಣೆಗೆ ನಿಂತಾಗ ರಾಷ್ಟ್ರದ ಅತ್ಯುನ್ನತ ಮಟ್ಟದಲ್ಲಿ ಇದ್ದು ಅನ್ಯಾಯವನ್ನು ನಿಯಂತ್ರಣ ಮಾಡು

ವವರೇ ಹೀಗೆ ಹೇಳಿಬಿಟ್ಟರೆ ಸಮಾಜದ ಮೇಲಾಗುವ ಪರಿಣಾಮಗಳೇನು ಎಂದು ನಾನು ಕೇಳುವುದು ? ಭ್ರಷ್ಟಾಚಾರಕ್ಕೆ ಒಬ್ಬ ಫಿಲಾಸಫರ್ ಹೇಳಿದ್ದನ್ನು ನಾನು ಹೇಳುತ್ತೇನೆ. ಒಂದು ಇಂಡಿವಿಜಿಯಲ್ ಗ್ರೀಡ್. ಇನ್ನೊಂದು ಅಬ್ಜೆಕ್ಟೀವ್ ಕಂಡೀಷನ್ಸ್ ರಷ್ಯಾದಲ್ಲಿ ಏನಾಯಿತೆಂದರೆ ಅಲ್ಲೊಂದು ಓಣಿ ಇತ್ತು ಅಲ್ಲಿ ನೂರಾರು ಮನೆಗಳಿದ್ದವು. ಆ ಮನೆಗಳ ಹೊರಗೆ ಒಂದಕ್ಕೂ ಬೀಗ ಹಾಕಿರಲಿಲ್ಲ. ನಾನು ಏಕೆ ಒಂದಕ್ಕೂ ಬೀಗವನ್ನೇ ಹಾಕಿಲ್ಲವಲ್ಲ, ಕಳ್ಳಕಾಕರು ನುಗ್ಗಿ ಒಳಗಿರುವುದನ್ನು ಹೊತ್ತುಕೊಂಡು ಹೋಗುವುದಿಲ್ಲವೇ, ಎಂದು ಕೇಳಿದಾಗ ಅವರು ಏನು ಹೇಳಿದರೆಂದರೆ ಬೀಗ ಏತಕ್ಕೆ ಬೇಕು ? ಆ ಮನೆಯಲ್ಲಿ ಏನಿರುತ್ತದೆಯೋ ಅದೇ ಪಕ್ಕದ ಮನೆಯಲ್ಲೂ ಇರುತ್ತದೆ. ಅಲ್ಲಿ ಕೋಳಿ ಮೊಟ್ಟೆ ಇದ್ದರೆ ಇಲ್ಲೂ ಅದೇ ಇಲ್ಲಿ ಹಂದಿ ಮಾಂಸ ಇದ್ದರೆ ಅಲ್ಲೂ ಅದೆ. ಇದು ಬಿಟ್ಟು ಇನ್ನೇನು ಬಂಗಾರ ಬೆಳ್ಳಿ ಇಲ್ಲ. ಇದಕ್ಯಾಕೆ ಬೇಕು ಖಜಾನೆ ಎಂದು ಹೇಳಿದರು. ಆ ತರದ ಅಬ್ಜೆಕ್ಟೀವ್ ಕಂಡೀಷನ್ ಇದ್ದರೆ ಗ್ರೀಡಿ ಪರಿಸ್ಥಿತಿ ಉಂಟಾಗುವುದಿಲ್ಲ. ಇಲ್ಲದೇ ಹೋದರೆ ಇನ್ನೊಂದು ಉದಾಹರಣೆಗೆ ಹಿಂದೆ ಋಷಿಗಳಿದ್ದರು. ಮಹಾತ್ಮಗಾಂಧಿ ಇದ್ದರು. ಅವರು ಮನೋನಿಗ್ರಹದಿಂದ ಆಸೆಗೆ ಹೋಗದೆ ತತ್ವಜ್ಞರಾಗಿದ್ದರು. ಅವರಿಗೆ ಅಂಥ ಸ್ಥಿತಿ ಇರಲಿಲ್ಲ. ಆದರೆ ಇಂದಿನ ಪರಿಸ್ಥಿತಿ ಅಂಥಾದ್ದಿದೆಯೇ ?

ನಮ್ಮ ದೇಶದಲ್ಲಿ ಒಬ್ಬ ಚೀಫ್ ಜಡ್ಜ್ ಇದ್ದರು. ಒಂದು ಲಾಯರ್ ಪೋಸ್ಟ್‌ಗೆ ಅಪಾಯಿಂಟ್ ಮೆಂಟ್ ಆಗಬೇಕಾಗಿತ್ತು ಸರಿ. ಇಂಟರ್‌ವ್ಯೂ ನಡೆಯುತ್ತಿತ್ತು. ಅದಕ್ಕೆ ಅವರ ಮಗನೂ ಇಂಟರ್‌ವ್ಯೂಗೆ ಬಂದಿದ್ದ. ಇನ್ನೇನು ಮೂರ್ನಾಲ್ಕು ಜನ ಆದಮೇಲೆ ತಮ್ಮ ಮಗ ಒಳಕ್ಕೆ ಬರುತ್ತಾನೆಂದು ಗೊತ್ತಿದ್ದ ಚೀಫ್ ಜಡ್ಜರು 'ಇನ್ನು ಸ್ವಲ್ಪ ಹೊತ್ತು ನಾನು ಇಲ್ಲಿ ಇರುವುದಿಲ್ಲ, ಏಕೆಂದರೆ ಇನ್ನು ಮೂವರಾದ ಮೇಲೆ ಒಳಕ್ಕೆ ಬರುವವನು ನನ್ನ ಮಗ ಆದ್ದರಿಂದ ಅದರ ತೀರ್ಮಾನ ಮಾಡುವಾಗ ನಾನಿರಬಾರದು' ಎಂದು ಹೇಳಿ ಹೊರಗೆ ಹೋದರಂತೆ ಸಾಕಲ್ಲ.

ಇನ್ನು ತಾವೇ ಆ ಕೆಲಸ ಮಾಡಿ ಎನ್ನುವ ಬದಲು ಇನ್‌ಡೈರೆಕ್ಟಾಗಿ ಅವರಿಗೆ ಹೇಳಿ ಅವರ ಕೈಲಿ ಮಾಡಿಸಿದರು. ಹೀಗಾಗಬಾರದು. ನೀವು ನಮ್ಮ ದೇಶದ ಜನತೆಯ ಅಭಿವೃದ್ಧಿ ಬಗ್ಗೆ ಹೀಗೆ ಮಾಡಬಾರದು ಎಂದು ನಾನು ಹೇಳಿದ್ದುದು. ಆರೋಪಣೆಗೂ ಒಂದು ಇತಿಮಿತಿ ಇದೆ. ವಿಚಾರಣೆ ಮಾಡಿಸುವುದಕ್ಕೂ ಒಂದು ಇತಿಮಿತಿ ಇದೆ. ಇದರಲ್ಲಿ ನಮ್ಮ ಪಾರ್ಟಿಯವರು, ನಿಮ್ಮ ಪಾರ್ಟಿಯವರು ಎಂದು ಅಲ್ಲ. ಈಗ ಏನಾಗಿದೆ ಎಂದರೆ ಮಾನ್ಯ ಬಂಗಾರಪ್ಪನವರು ಹೆಗ್ಗಡೆಯವರ ತಮ್ಮ ಅಕ್ಕಿ ಸಾಗಿಸುತ್ತಿದ್ದಾರೆ ಎಂದರೆ ಅದಕ್ಕೆ ನ್ಯಾಯಾಂಗ ತನಿಖೆ. ನನ್ನ ಮಗ ಲಿಕ್ಕರ್ ಟ್ರೇಡ್ ಮಾಡುತ್ತಿದ್ದಾನೆಂದರೆ ಅದಕ್ಕೆ ಜ್ಯುಡಿಷಿಯಲ್ ಎನ್‌ಕ್ವಯರಿ, ಮೆಡಿಕಲ್ ಸೀಟ್ ಕೊಡಿಸುವುದರಲ್ಲಿ ಹೆಗ್ಗಡೆ ಮಗ ಇನ್‌ವಾಲ್ವ್ ಆಗಿದ್ದಾರೆ, ಅದಕ್ಕೂ ನ್ಯಾಯಾಂಗ ತನಿಖೆ ಹೀಗೆ ಆರೋಪಣೆ ಮಾಡುವುದಕ್ಕೂ ತನಿಖೆ ಕೇಳುವುದಕ್ಕೂ ಇತಿಮಿತಿ ಇಲ್ಲದ ಹಾಗಾಗಿದೆ

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಹೆಗಡೆಯವರ ಮಗನ ಬಗ್ಗೆಯೂ ಜುಡಿಶಿಯಲ್ ಎನ್‌ಕ್ವಯರಿ ಆಗಬೇಕೆಂದು ಹೇಳಿದರಲ್ಲಿ ಅದು ಯೋಗ್ಯವೇನು ? ಏಕೆ ಎನ್‌ಕ್ವಯರಿ ಮಾಡಿಸಬೇಕು He is governed under the law of land. He may be innocent. ಹಾಗಾದರೆ ಬೊಮ್ಮಾಯಿಯವರ ಮೇಲೆ ಏಕೆ ಮಾಡಿಸಲಿಲ್ಲ ? ನೀವು ಮಾಡಿದ್ದೆಲ್ಲವನ್ನೂ ನಮ್ಮ ಮೇಲೆ ಹಾಕುವುದಕ್ಕೆ ಹೋಗಬೇಡಿ.

ಶ್ರೀ ಜೆ. ಹೆಚ್. ಪಟೇಲ್.—ನಾನು ದೋಷಾರೋಪಣೆ ಮಾಡುತ್ತಿಲ್ಲ. ಸ್ವಲ್ಪ ಲೂಸ್ ಟೈಪಾಗಿ ಅಡ್ಮಿನಿಸ್ಟ್ರೇಷನ್ ಇದ್ದರೆ ಸಾಕು. ಯಾರ ಮೇಲೆ ಯಾರು ಬೇಕಾದರೂ ಆರೋಪ ತರುವುದು ಸ್ವಲ್ಪ ಹತೋಟಿಗೆ ಬರಲಿ ಎಂದೇ ಲೋಕಾಯುಕ್ತ ಮಾಡಿರುವುದು. ಆದರೆ ಅದನ್ನು ಮಾಡಿದಾಕ್ಷಣವೇ ಎಲ್ಲಾ ಸರಿಹೋಯಿತು ಎಂದಲ್ಲ ಭ್ರಷ್ಟಾಚಾರದ ನಿವಾರಣೆಯಲ್ಲಿ ಅದು ಒಂದು ಹೆಜ್ಜೆ ಅಷ್ಟೆ.

ಇನ್ನು ಪರ್ಟಿಕ್ಯುಲರ್ ಪಾಯಿಂಟ್ ಇಲ್ಲದೇ ಇರುವುದರಿಂದ ಜನರಲ್ಲಾಗಿ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗಿರುವುದು ಬರಗಾಲ ಈ ಬರಗಾಲದಿಂದ ಹಳ್ಳಿಗಾಡಿನ ರೈತರಿಗೆ ಆಗಿರತಕ್ಕಂಥ ಕಷ್ಟ ಮತ್ತು ಹಳ್ಳಿಗಾಡಿನಲ್ಲಿ ಕೆಲಸ ಇಲ್ಲದೇ ಇರುವುದರಿಂದ ರೂರಲ್ ಅನೆಂಪ್ಲಾಯ್ಮೆಂಟ್ ಉಂಟಾಗಿದೆ. ಇತ್ತ ನಗರದಲ್ಲಿ ವಿದ್ಯುತ್ ಕಡಿತದಿಂದ ಅರ್ಬನ್ ಅನೆಂಪ್ಲಾಯ್‌ಮೆಂಟ್ ಆಗಿದೆ ಇದರಿಂದ ನಮ್ಮ ರಾಜ್ಯದ ಮೇಲೆ ಭಾರ ಜಾಸ್ತಿಯಾಗುತ್ತಿದೆ. ಅಲ್ಲಿ ಇಲ್ಲಿ ಕೆಲವು ಹಿಂಸಾತ್ಮಕ ಘಟನೆಗಳು ಆಗಿರಬಹುದು ಸರ್ಕಾರ ಎಷ್ಟೇ ಕಣ್ಣಿಗೆ ಎಣ್ಣೆ ಹಾಕಿಕೊಂಡಿದ್ದರೂ ಇಂಥವು ನಡೆದೇ ನಡೆಯುತ್ತವೆ. This is

basically because of the economic burden on the State and the Society. ಅದನ್ನು ಆದಷ್ಟು ನಾವು ಚೆಕ್ ಮಾಡುವುದಕ್ಕೆ ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಲ್ಲೊಂದು ದರೋಡೆಯಾಯಿತು. ಇಲ್ಲೊಬ್ಬ ಮಹಿಳೆಯ ಮೇಲೆ ಅತ್ಯಾಚಾರ ಆಯಿತೆಂದು ನೀವು ಅಬ್ಬರಿಸುವುದು ನಿಜ. ವಿಧಾನಸಭೆಯನ್ನು ನಾವು ಅದಕ್ಕೋಸ್ಕರ ಬಳಸುತ್ತೇವೆ. ಆದರೆ ಸಮಾಜದಲ್ಲಿ ಬೆಳೆಯುತ್ತಾ ಇರತಕ್ಕಂಥ ಹಿಂಸಾಚಾರ ಏನಿದೆ ಅದನ್ನು ನಿರ್ಮೂಲ ಮಾಡಬೇಕಾದರೆ ನಾವೂ ನೀವೂ ಸೇರಿ ಪ್ರಯತ್ನ ಮಾಡಬೇಕಾಗುತ್ತದೆ. ಜನಗಳೂ ಅಷ್ಟೇ, ಯಾವಾಗಲೂ ಒಂದೇ ಪಾರ್ಟಿಯಲ್ಲೇನೂ ಇರುವುದಿಲ್ಲ. ಯಾವ ಪಾರ್ಟಿಯಲ್ಲಿ ಹೆಚ್ಚಿಗೆ ದುಡ್ಡು ಸಿಗುತ್ತದೆ, ಯಾವ ಪಾರ್ಟಿಯು ಅಧಿಕಾರಕ್ಕೆ ಬರುತ್ತದೆಯೋ ಆ ಪಾರ್ಟಿಯಲ್ಲಿ ಸೇರಿಕೊಳ್ಳುತ್ತಾರೆ. ಬೇರೆ ಕಡೆ ಹೋಗುವುದಿಲ್ಲ. ಸತ್ಯಕ್ಕೋಸ್ಕರ ಏನೂ ಅವರು ಹೋರಾಟ ಮಾಡುವುದಿಲ್ಲ. ಅಧಿಕಾರದಲ್ಲಿರುವವರು ಸಮರ್ಪಕವಾಗಿರಬೇಕೆಂಬುದನ್ನು ಒಪ್ಪುತ್ತೇನೆ. ಹಾಗೆ ಇರಲು ಎಲ್ಲರೂ ಸೇರಿ ಪ್ರಯತ್ನ ಮಾಡೋಣ ನಮ್ಮ ರಾಜ್ಯದ ನದಿ ನೀರಿನ ಹಂಚಿಕೆಯ ಬಗ್ಗೆ, ವಿದ್ಯುತ್ತನ್ನು ಹೆಚ್ಚಿಸುವುದರ ಬಗ್ಗೆ, ಟೆಲಿವಿಷನ್ ಎರಡನೆಯ ಚಾನಲನ್ನು ರಾಜ್ಯ ಸರ್ಕಾರಗಳ ಉಪಯೋಗಕ್ಕಾಗಿ ಕೊಡುವ ಬಗ್ಗೆ ಮತ್ತು ಸರ್ಕಾರಿ ನೌಕರರ ಸಂಬಳ ಸಾರಿಗೆಗಳನ್ನು ಏರಿಸುವಾಗ ಕೇಂದ್ರ ರಾಜ್ಯ ಸರ್ಕಾರದೊಡನೆ ಕನ್‌ಸಲ್ಟ್ ಮಾಡಬೇಕೆಂಬುದರ ಬಗ್ಗೆ ಮತ್ತು ಕೇಂದ್ರ ರಾಜ್ಯಗಳ ಸಮಗ್ರ ಆರ್ಥಿಕ ನೀತಿಯ ಬಗ್ಗೆ ನಾವೂ ನೀವೂ ಆಡಳಿತ ಪಕ್ಷ, ವಿರೋಧ ಪಕ್ಷ ಎನ್ನದೆ ಕುಳಿತು ವಿಚಾರಮಾಡೋಣ. ಇದನ್ನು ಬೇರೆ ರಾಜ್ಯದಲ್ಲಿ ಮಾಡದೇ ಇರಬಹುದು. ಕೇಂದ್ರದಲ್ಲೂ ಮಾಡದೇ ಇರಬಹುದು. ಇದರ ಬಗ್ಗೆ ಬೇಕಾದರೆ ರೆಸಲ್ಯೂಷನ್ ಫಾರಂನಲ್ಲಿ ಫೀವೇ ತನ್ನಿ. ಉದಾಹರಣೆಗೆ ತೆಲಗು ಗಂಗಾ ಯೋಜನೆಯ ಬಗ್ಗೆ ರಾಜ್ಯ ಸರ್ಕಾರ ತನ್ನ ಪಾಲಿನ ನೀರನ್ನು ಉಳಿಸಿಕೊಳ್ಳಲೇಬೇಕಾಗಿದೆ.

ಶ್ರೀ ಕೆ.ಹೆಚ್. ಪಾಟೀಲ್.—ಈ ತೆಲುಗು ಗಂಗಾ ಬಗ್ಗೆ ನಾನು ಹೇಳಬೇಕಾದರೆ ಇಡೀ ಸದನವೇ ಪಕ್ಷಭೇದವಿಲ್ಲದೆ ಬೆಂಬಲ ಕೊಡುವುದಕ್ಕೆ ಸಿದ್ಧರಿದ್ದೇವೆ. ಆದರೆ ನೀವು ಬೆಂಗಳೂರಿನಲ್ಲಿ ಒಂದು ತರಹ ಭಾಷಣ ಮಾಡುತ್ತೀರಿ. ಹೈದರಾಬಾದಿನಲ್ಲಿ ಇನ್ನೊಂದು ಹೇಳುತ್ತೀರಿ. ದಿಲ್ಲಿಯಲ್ಲಿ ಹೇಳುವುದು ಇನ್ನೊಂದು. ಹೀಗಾದರೆ ಯಾರ ಕಡೆಯಿಂದ ಪ್ರಮಾದವಾಗುತ್ತದೆ. ಈಗ ದೇವೇಗೌಡರೊಬ್ಬರು ಮನಸ್ಸು ಮಾಡಿ ಯಾವುದೋ ಒಂದು ಅಣೆಕಟ್ಟು ಕಟ್ಟಬೇಕೆಂದು ಹೊರಟರೆ ಅದಕ್ಕೆ ಮುಖ್ಯಮಂತ್ರಿಗಳು ದುಡ್ಡು ಕೊಡಬೇಕಲ್ಲವೆ.

೧೧-೦೦ ಎ.ಎಂ.

ಈ ಬಗ್ಗೆ ನಾನು ಕಾನೂನನ್ನು ಅದರ ವ್ಯವಹಾರವನ್ನೆಲ್ಲಾ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಮುಖ್ಯವಾಗಿ ಇದರಲ್ಲಿ ನಿಮ್ಮ ಲೋಪ ಇದೆ. ಇದನ್ನು ಹೋಗಲಾಡಿಸಬೇಕಾದರೆ ನಮ್ಮ ರಾಜ್ಯದಲ್ಲಿಯೂ ಸಹ ಅಣೆಕಟ್ಟುಗಳನ್ನು ನಿರ್ಮಾಣ ಮಾಡಿ ಇರುವ ನೀರನ್ನೆಲ್ಲಾ ಶೇಖರಣೆ ಮಾಡಿಕೊಂಡು ನಮ್ಮ ರೈತರಿಗೆ ಕೊಡುವ ಸಲುವಾಗಿ ಮಾನ್ಯ ದೇವೇಗೌಡರ ನೀರಾವರಿ ಖಾತೆಗೆ ಮೂರು ನೂರು ಕೋಟಿ ರೂಪಾಯಿಗಳನ್ನಾದರೂ ಸರ್ಕಾರದವರು ಒದಗಿಸಬೇಕು. ಇದಕ್ಕೆ ನಮ್ಮ ಬೆಂಬಲ ಇದೆ. ಬೇರೆ ಕೆಲಸಗಳನ್ನೆಲ್ಲಾ ಬೇಕಾದರೆ ಬಂದ್ ಮಾಡಿ ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು.

ಶ್ರೀ ಜೆ.ಎಚ್. ಪಟೇಲ್.—ಅದನ್ನೇ ನಾನು ಹೇಳುತ್ತಿರುವುದು. ನಾವು ಮತ್ತು ನೀವು ಪರಸ್ಪರ ಸಹಕಾರದಿಂದ ಮಾಡಿಕೊಂಡು ಹೋಗುವಂತಹ ಕೆಲವು ಕೆಲಸಗಳಿವೆ. ಕೆಲವೊಂದು ಕೆಲಸಗಳಿಗೆ ನೀವು ಸಹಕಾರ ಕೊಡಬೇಕೇ ಹೊರತು, ಪ್ರತಿಯೊಂದು ಸಂದರ್ಭದಲ್ಲಿಯೂ ರಾಜೀನಾಮೆ ಕೊಡಿ ಎಂದು ಹೇಳುವುದನ್ನು ಬಿಟ್ಟುಬಿಡಿ ಆ ರೀತಿ ಕೇಳಿದರೂ ಸಹ ನಾವು ಕೊಡುವುದಿಲ್ಲ ಎಂಬುದು ನಿಮಗೆ ಗೊತ್ತಿದೆ. ಆದ್ದರಿಂದ ಆ ರೀತಿ ಕೇಳುವುದನ್ನು ಬಿಟ್ಟುಬಿಡಿ.

ಶ್ರೀ ಕೆ.ಎಚ್. ಪಾಟೀಲ್ —ಆದರೂ ನಾವು ಕೊಡಿ ಕೊಡಿ ಎಂದು ಕೇಳುತ್ತೇವೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ— ಇವರು ಅನೇಕ ಸಲ ಇಲ್ಲಿ ರಾಜಿನಾಮೆ ಕೊಡಲು ತಯಾರಿದ್ದೇವೆಂದು ಹೇಳಿದ್ದಾರೆ. ಯಾವುದೇ ಪ್ರಕರಣ ಸಾಬೀತಾದರೆ ರಾಜೀನಾಮೆ ಕೊಡುತ್ತೇವೆಂದು ಹೇಳಿದ್ದಾರೆ. ಈಗಲೇ ಬೇಕಾದರೆ ಮುಖ್ಯಮಂತ್ರಿಗಳ ಕೈಗೆ ರಾಜೀನಾಮೆ ಬರೆದುಕೊಡುತ್ತೇವೆಂದು ಸಹ ಹೇಳಿದ್ದರು. ಆದರೆ ಈ ಬಾಟಲಿಂಗ್ ಕೇಸ್‌ನಲ್ಲಿ ಹೈಕೋರ್ಟಿನ ತೀರ್ಪಿನ ಪ್ರಕಾರ ರಾಜೀನಾಮೆ ಕೊಡಿ ಎಂದರೆ ಕೊಡುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ—ನಾವಿಬ್ಬರೂ ಸಹ ಈ ಹಿಂದೆ ರಾಜೀನಾಮೆ ಕೊಟ್ಟು ತೋರಿಸಿದ್ದೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್—ಅದನ್ನು ನಾನು ಒಪ್ಪುತ್ತೇನೆ. ಈಗಲೂ ಅದನ್ನೇ ಅನುಸರಿಸಬೇಕು.

ಶ್ರೀ ಜೆ ಎಚ್ ಪಟೇಲ್—ರಾಜೀನಾಮೆ ಕೊಡುವ ಸಂದರ್ಭ ಬಂದರೆ ಅದಕ್ಕೆ ನಾನು ಹಿಂಜರಿಯುವುದಿಲ್ಲ. ರಾಜೀನಾಮೆಯನ್ನು ಯಾವಾಗ ಕೊಡಬೇಕು ಎಂಬುದು ನಮಗೆ ಗೊತ್ತಿದೆ. ಅಂತಹ ಏನಾದರೂ ತಪ್ಪು ಮಾಡಿದ್ದೇವೆ ಎಂದು ನಮ್ಮ ಮನಸ್ಸಿಗೆ ಬಂದರೆ ನೀವು ಕೇಳುವುದಕ್ಕೆ ಮೊದಲೇ ರಾಜೀನಾಮೆ ಕೊಡುತ್ತೇವೆ.

ಶ್ರೀ ಎಚ್ ಡಿ ದೇವೇಗೌಡ— ನಮ್ಮ ಕೆಲಸವನ್ನು ಹಗುರ ಮಾಡುವುದಕ್ಕೆ ವಿರೋಧ ಪಕ್ಷದವರು ಪ್ರಯತ್ನ ಮಾಡಿದ್ದಾರೆ. ಅಷ್ಟಾದರೂ ಮಾಡದಿದ್ದರೆ ಅವರು ಆ ಕಡೆ ಕುಳಿತು ಏನು ಮಾಡಬೇಕು ?

ಶ್ರೀ ಜೆ ಎಚ್ ಪಟೇಲ್—ಪ್ರತಿ ಸಲ ನೀವು ಕೇಳಿದಾಗಲೂ ನಾವು ರಾಜೀನಾಮೆ ಕೊಡುವಂತಹ ಕೆಲಸ ಆಗಬಾರದು. ಅಂತಹ ಸಂದರ್ಭ ಬಂದರೇ ನಾವೇ ಕೊಡುತ್ತೇವೆ.

ಶ್ರೀ ಬಿ ಎಸ್ ಯಡಿಯೂರಪ್ಪ—ಬಾಟ್ಲಿಂಗ್ ಪ್ರಕರಣದಲ್ಲಿ ರಾಜೀನಾಮೆ ಕೊಡಿ ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಜೆ ಎಚ್ ಪಟೇಲ್—ಸಂದರ್ಭ ಬಂದಾಗ ನೀವು ಕೇಳುವುದಕ್ಕೆ ಮೊದಲೇ ಕೊಡುತ್ತೇವೆ.

ಶ್ರೀ ಕೆ ಎಚ್ ಪಾಟೀಲ್—ತಮ್ಮದು ಶ್ರೀ ಲೋಹಿಯಾ ಸಮಾಜವಾದವೋ ಅಥವಾ ಗಾಂಧೀಜಿ ಸಮಾಜವಾದವೋ ಅರ್ಥವಾಗುತ್ತಿಲ್ಲ. ಒಂದು ಕಾಲದಲ್ಲಿ ನಾವು ನೀವು ಒಂದೇ ಕಡೆ ಇದ್ದಾಗ ಮಹಾತ್ಮಗಾಂಧೀಜಿ ಅವರನ್ನು ನೆನಸಿಕೊಳ್ಳುತ್ತಿದ್ದೆವು, ಈ ಹಿಂದೆ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಯಾವ ಕಾರಣಕ್ಕೆ ರಾಜೀನಾಮೆ ಕೊಟ್ಟರು ಎಂಬುದು ಕಾಂಗ್ರೆಸ್‌ನ ಇತಿಹಾಸದಲ್ಲಿದೆ. ಆದ್ದರಿಂದ ತಾವು ಸಹ ಕೆಲವೊಂದು ಮೌಲ್ಯಗಳನ್ನು ಹಾಗೂ ತತ್ವಗಳನ್ನು ಎತ್ತಿ ಹಿಡಿಯುವ ಸಲುವಾಗಿ ರಾಜೀನಾಮೆ ಕೊಡಬೇಕು.

ಶ್ರೀ ಜೆ ಎಚ್ ಪಟೇಲ್— ಮಹಾತ್ಮಾಗಾಂಧೀಜಿ ಅವರ ಬಗ್ಗೆ ತಾವು ಏತಕ್ಕೆ ಹೇಳುತ್ತೀರಿ. ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯವನ್ನು ನಾನು ಸಮರ್ಥಿಸುತ್ತಾ ತಮಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಜನತಾ ಪಕ್ಷ ಒಂದು ಬೃಹತ್ ವೃಕ್ಷ ಅಲ್ಲದಿದ್ದರೂ ಸಹ ಇದು ಒಂದು ವೃಕ್ಷವಾಗಿದೆ. ಈ ಮರದ ಕೊಂಬೆಯನ್ನು ಯಾರಾದರೂ ಹಿಡಿದು ಜಗ್ಗಿದರೆ ಅದು ಬೀಳುವುದಿಲ್ಲ. ಈ ಮರದ ಬೇರು ಜನರ ಹತ್ತಿರವಿದೆ. ಆದ್ದರಿಂದ ನೀವು ಇಲ್ಲಿ ಹೇಳಿದರೆ ಏನೂ ಆಗುವುದಿಲ್ಲ. ಏನಾದರೂ ಹೇಳುವುದಿದ್ದರೆ ನೀವು ಜನರ ಹತ್ತಿರ ಹೋಗಿ ಹೇಳಿ. ಇವೊತ್ತಿನ ನಮ್ಮ ರಾಜ್ಯದ ಸ್ಥಿತಿಗತಿಗಳ ಬಗ್ಗೆ ಹಾಗೂ ಕೊರತೆಗಳ ಬಗ್ಗೆ ಸರಿಯಾಗಿ ಯೋಚನೆ ಮಾಡಲು ಇದು ತಕ್ಕದಾದಂಥ ಒಂದು ಉತ್ತಮವಾದ ಭಾಷಣ ಎಂದು ಹೇಳಿ ನಾನು ಇದನ್ನು ಸಮರ್ಥಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಜಾಲಪ್ಪನವರಿಗೆ ನಾನು ಎಲ್ಲಿ ಹುಟ್ಟಿದೆ, ಎಲ್ಲಿ ಬೆಳೆದೆ, ಎಲ್ಲಿಂದ ಬಂದೆ ಎಂಬುದು ಗೊತ್ತಿಲ್ಲ. ನಾನು ಬೇಕಾದರೆ ಸ್ಪೇಸ್‌ಗೆ ಹೋಗಲಿ ಎಂದು ಹೇಳಿದರು. ನಾನು ಎಂತಹವಳು ಎಂಬುದು ನಿಮಗೆ ಗೊತ್ತಿಲ್ಲ ನಾನು ಹೋಗುವುದಿದ್ದರೆ ನಿಮ್ಮನ್ನು ಕೇಳಿ ಹೋಗುತ್ತೇನೆಯೇ ? ನಿಮ್ಮನ್ನು ಕೇಳದೆ ಹೊರಟು ಹೋಗುತ್ತೇನೆ. ತಮ್ಮನ್ನು ಒಂದು ಪ್ರಶ್ನೆ ಕೇಳುತ್ತೇನೆ, ಏನೆಂದರೆ, ಈ ಸಂದರ್ಭದಲ್ಲಿ ನನ್ನ ಆದಿಮಾನವರು ಯಾವ ರೀತಿ ಇದ್ದರೆಂಬುದು ನನ್ನ ಜ್ಞಾಪಕಕ್ಕೆ ಬರುತ್ತಿದೆ. ಅವರು ಬೆತ್ತಲೆಯಾಗಿ ಓಡಾಡುತ್ತಿದ್ದರೆಂಬುದು ತಮಗೂ ಗೊತ್ತಿರಬೇಕು. ಆದ್ದರಿಂದ ನೀವು ಬ ಡಕ್ಕೆ ಹೋದರೆ ಏನೂ ಉಪಯೋಗವಿಲ್ಲ, ಎಂದು ಎಚ್ಚರಿಕೆ ಕೊಟ್ಟು ಹೇಳುತ್ತಿದ್ದೇನೆ. ಆ ಜನರು ಬೆತ್ತಲೆ ಇದ್ದರೆಂಬ ಕಾರಣದಿಂದ ನಾವೂ ಸಹ ಆ ಕಾಲಕ್ಕೆ ಹೋಗುವುದಾದರೆ, ನಮಗೆ ಸಿಲ್ಕ್ ಸೀರೆಯೂ ಬೇಕಾಗುವುದಿಲ್ಲ. ನಿಮಗೆ ಜುಬ್ಬವೂ ಬೇಕಾಗುವುದಿಲ್ಲ ಈಗ ನೀವು ಒಂದೊಂದು ಊರಿನಲ್ಲಿ ಹತ್ತು ಬಾರ್‌ಗಳನ್ನು ಏನು ತೆರೆಯುತ್ತಿದ್ದೀರಿ, ಅವೂ ಸಹ

ಬೇಕಾಗುವುದಿಲ್ಲ. ಈಗ ಎಳೆಯ ಮಕ್ಕಳಿಗೂ ಸಹ ಏನು ಬೀರು, ಬ್ರಾಂದಿ ಕುಡಿಸುತ್ತಿದ್ದಾರೆ, ಅದು ಸಹ ಬೇಕಾಗುವುದಿಲ್ಲ. ಎಲ್ಲಾ ಊರುಗಳಲ್ಲಿಯೂ ಏನು ಹೊಲಸಿದೆ ಎಂಬುದು ನನಗೆ ಗೊತ್ತು ಮತ್ತು ಹಳ್ಳಿಯ ಜನರು ಯಾವ ರೀತಿ ಇದ್ದಾರೆಂಬುದು ಸಹ ನನಗೆ ಗೊತ್ತು. ಇದನ್ನೆಲ್ಲಾ ನೀವು ತಿಳಿದುಕೊಂಡಿದ್ದರೆ, ಹೈಕೋರ್ಟಿನ ತೀರ್ಪಿಗೆ ತಲೆಬಾಗಿ ನೀವು ರಾಜೀನಾಮೆ ಕೊಡಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಹೇಳಿದ್ದನ್ನು ಕೇಳಿ ಅವರ ಮನಸ್ಸಿಗೆ ನೋವಾಗಿರಬಹುದು ನಾನು ತಮ್ಮನ್ನು ಕಳೆದ ೧೦–೧೫ ವರ್ಷಗಳಿಂದ ನೋಡುತ್ತಿದ್ದೇನೆ. ಆದ್ದರಿಂದ ನೀವು ಎಲ್ಲಿ ಹುಟ್ಟಿದ್ದು, ಎಲ್ಲಿ ಬೆಳೆದಿದ್ದು ಮತ್ತು ಎಲ್ಲಿಂದ ಬಂದಿದ್ದು ಎಂಬುದೆಲ್ಲಾ ನನಗೆ ಗೊತ್ತಿದೆ. ತಮ್ಮ ವಿಚಾರ ನನಗೆ ಗೊತ್ತಿಲ್ಲ ಎಂದು ಹೇಳಬೇಡಿ. ನಾನು ಹೇಳಿದ್ದುದು ಏನೆಂದರೆ ನಾವು ೨೧ನೇ ಶತಮಾನಕ್ಕೆ ಹೋಗಬೇಕಾಗಿರುವುದು ನಿಜ, ಆ ರೀತಿ ಹೋಗುವಾಗ ನೀವು ಒಬ್ಬರೇ ಹೋಗಬೇಡಿ, ಎಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಎಂದು. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆ ಇದೆ. ಅಲ್ಲಿನ ಹೆಣ್ಣುಮಕ್ಕಳಿಗೆ ಸರಿಯಾದ ಶೌಚಗೃಹದ ವ್ಯವಸ್ಥೆ ಇನ್ನೂ ಆಗಿಲ್ಲ. ಈ ಕಾರಣದಿಂದ ೨೧ನೇ ಶತಮಾನಕ್ಕೆ ಕೇವಲ ದೆಹಲಿ, ಮುಂಬೈ ಮತ್ತು ಬೆಂಗಳೂರು ನಗರಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಬದಲು ಎಲ್ಲಾ ಹಳ್ಳಿಗಳನ್ನೂ ಸಹ ತೆಗೆದುಕೊಂಡು ಹೋಗಿ ಎಂದು ನಾನು ಹೇಳಿದೆನೇ ಹೊರತು ಶ್ರೀಮತಿ ನಾಗರತ್ನಮ್ಮನವರ ಮನಸ್ಸಿಗೆ ನೋವು ಉಂಟು ಮಾಡಬೇಕೆಂಬ ಉದ್ದೇಶದಿಂದ ನಾನು ಆ ರೀತಿ ಹೇಳಲಿಲ್ಲ. ಕುಡಿತ ಎಂಬುದು ನಿಮ್ಮ ಕಾಲದಲ್ಲಿಯೂ ಇತ್ತು, ನಮ್ಮ ಕಾಲದಲ್ಲಿಯೂ ಇದೆ. ಈ ಹಿಂದೆ ಪಾನನಿರೋಧವನ್ನು ಜಾರಿಗೆ ತಂದಾಗ ಬೂಟ್‌ಲೆಗ್ಗರ್ಸ್ ಕಾಟ ಜಾಸ್ತಿಯಾಯಿತು. ಅಮೋನಿಯಂ ಸಲ್ಫೇಟ್, ಹಾವು, ಚೇಳು ಮುಂತಾದವನ್ನೆಲ್ಲಾ ಸೇರಿಸಿ ಕಳ್ಳಭಟ್ಟಿ ತಯಾರಿಸುವುದಕ್ಕೆ ಪ್ರಾರಂಭ ಮಾಡಿದರು. ಇದರಿಂದ ಜನರ ಜೀವಕ್ಕೆ ಹಾನಿಯಾಗ ಬಾರದೆಂಬ ಪಾನನಿರೋಧವನ್ನು ಸಡಿಲಗೊಳಿಸಲಾಯಿತು. ತಮಿಳುನಾಡಿನಲ್ಲಿ ಎರಡು ಸಲ ಪಾನ ನಿರೋಧವನ್ನು ಜಾರಿಗೆ ತಂದರು. ಆದರೆ ಯಶಸ್ವಿಯಾಗಲಿಲ್ಲ. ಈಗ ಸರ್ಕಾರಕ್ಕೆ ಈ ಬಾಬಿನಿಂದ ೩೦೦ ರಿಂದ ೪೦೦ ಕೋಟಿ ರೂಪಾಯಿಗಳವರೆಗೆ ಆದಾಯ ಬರುತ್ತಿದೆ. ಪಾನನಿರೋಧವನ್ನು ಜಾರಿಗೆ ತಂದರೆ ನಮಗೆ ಆಗುವಂತಹ ನಷ್ಟವನ್ನು ಕೇಂದ್ರಸರ್ಕಾರದವರು ತುಂಬಿಕೊಡುತ್ತೇವೆಂದು ಹೇಳಿದರೆ ಜಾರಿಗೆ ತರಬಹುದು, ಇಲ್ಲದಿದ್ದರೆ ನಮ್ಮ ಅಭಿವೃದ್ಧಿ ಯೋಜನೆಗಳು ಯಾವ ರೀತಿ ಆಗಬೇಕು ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ತಮಗೆ ತಿಳಿದಂತೆ ಮಾನ್ಯ ಜೆ. ಎಚ್. ಪಟೇಲ್ ಅವರು ಸುಂದರವಾದ ಮತ್ತು ಸಾಹಿತ್ಯಪೂರ್ಣವಾದ ಭಾಷಣವನ್ನು ಮಾಡಿದ್ದಾರೆ. ಇವರ ಭಾಷಣಕ್ಕೂ ಮತ್ತು ನಾವು ರಾಜ್ಯಪಾಲರ ಭಾಷಣದ ಮೇಲೆ ಮಾಡಿದ ಟೀಕೆಗಳಿಗೂ ಯಾವ ಸಂಬಂಧವೂ ಇಲ್ಲ. ಇಬ್ಬರು ಮೂವರು ಸದಸ್ಯರುಗಳು ಪ್ರಸ್ತಾಪ ಮಾಡಿದ ಅಂಶಗಳ ಮೇಲೆ ಅವರು ಉತ್ತರ ಕೊಟ್ಟರೇ ಹೊರತು ಉತ್ತಮವಾದುದನ್ನು ಏನನ್ನೂ ಹೇಳಲಿಲ್ಲ. ಮುಖ್ಯವಾಗಿ ಮಾನ್ಯ ಸಚಿವರು ಹೇಳಿದ್ದೇನೆಂದರೆ, ಬಡವರು, ಕೆಳಗೆ ಬಿದ್ದವರು ಹಾಗೂ ದೀನದಲಿತರು ಏನಿದ್ದಾರೆ, ಇವರನ್ನು ಮೊದಲು ಮೇಲಕ್ಕೆ ಎತ್ತತಕ್ಕಂಥ ಕೆಲಸ ಮಾಡಬೇಕು, ಈ ಜನರು ಉತ್ತಮರೀತಿಯ ಜೀವನವನ್ನು ಸಾಗಿಸುವಂತಹ ವ್ಯವಸ್ಥೆ ಮಾಡದೆ ಪ್ರಧಾನ ಮಂತ್ರಿಗಳು ಹೇಳಿದ ರೀತಿಯಲ್ಲಿ ಅಂದರೆ ಒಮ್ಮೆಲೆ ಪ್ರಗತಿಪರವಾದ ರೀತಿಯಲ್ಲಿ ೨೧ನೇ ಶತಮಾನಕ್ಕೆ ಹೊರಟರೆ ಮುಂದುವರೆದ ಜನ ಮುಂದೆ ಹೋಗುತ್ತಾರೆ, ಹಿಂದುಳಿದ ಜನ ಹಿಂದೆಯೇ ಉಳಿಯುತ್ತಾರೆಂದು ಹೇಳಿದರು. ಹಾಗಿದ್ದರೆ ಈ ಜನರನ್ನು ಮುಂದೆ ತರುವ ಬಗ್ಗೆ ನಿಮ್ಮ ರೂಪರೇಷೆಗಳೇನು ಮತ್ತು ನಿಮ್ಮ ಧ್ಯೇಯಧೋರಣೆಗಳು ಏನು ಎಂಬುದನ್ನು ತಿಳಿಸಬೇಕಾಗುತ್ತದೆ. ಕೇಂದ್ರಸರ್ಕಾರದವರು ಹರಿಜನ ಮತ್ತು ಗಿರಿಜನರಿಗೆ ಕಲ್ಪಿಸಿಕೊಡುತ್ತಿರುವ ಸಹಾಯಗಳ ಜೊತೆಗೆ ನೀವು ಈ ಜನರಿಗೆ ಕಲ್ಪಿಸಿಕೊಟ್ಟಿರುವಂತಹ ಸೌಕರ್ಯಗಳು ಏನು ಬಡವರ ಏಳಿಗೆ ಬಗ್ಗೆ ನೀವು ಯಾವ ಹೊಸ ಮಾರ್ಗವನ್ನು ಅನುಸರಿಸುತ್ತಿದ್ದೀರಿ, ಈ ದಿಸೆಯಲ್ಲಿ ನೀವು ನಡೆದುಕೊಂಡು ಬಂದ ದಾರಿ ಯಾವುದು ಎಂಬುದನ್ನು ತಿಳಿಸಬೇಕು. ನಮ್ಮ ದೇಶದ ಬೇರೆಬೇರೆ ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳು ಇರಬಹುದು.

ಆದರೆ ನೀವು ಹೊಸ ಹೊಸ ಮಾರ್ಗಗಳನ್ನು ಹಾಕುವವರಾಗಿದ್ದೀರಿ. ಆದ್ದರಿಂದ ಕೆಳಗೆ ಬಿದ್ದವರನ್ನು ಮೇಲಕ್ಕೆತ್ತಲು ಯಾವ ಮಾರ್ಗವನ್ನು ಅನುಸರಿಸುತ್ತಿದ್ದೀರಿ ಎಂಬುದನ್ನು ತಿಳಿಸಬೇಕು. ಈ ದಿಸೆಯಲ್ಲಿ ನೀವೇನಾದರೂ ಕುಡಿಯುವುದನ್ನು ಬಂದ್ ಮಾಡಿದ್ದೀರಾ ? ಹೆಂಡ, ಸಾರಾಯಿ ಮಾರಾಟ ಮಾಡುವುದನ್ನು ನಿಲ್ಲಿಸಿದ್ದೀರಾ ? ಮಾನ್ಯ ಚಾಲಪ್ಪನವರು ಸಹಕಾರ ಸಂಘಗಳಿಂದ ಕೊಟ್ಟ ಸಾಲವನ್ನು ವಸೂಲಿ ಮಾಡಲು ಎಷ್ಟೋ ಕಷ್ಟಗಳನ್ನು ಅನುಭವಿಸಿದ್ದಾರೆ. ಈ ಸೆರೆ ಕುಡಿಯುತಕ್ಕಂಥ ಜನರು ಏನಿದ್ದಾರೆ, ಈ ಜನರು ಬಾಕಿ ಕೊಡಬೇಕಾದ ಕೋಟ್ಯಾಂತರ ರೂಪಾಯಿಗಳಷ್ಟು ಸಾಲ ಏನಿದೆ, ಅದರ ವಸೂಲಿಯನ್ನು ಏನಾದರೂ ನಿಲ್ಲಿಸಿದ್ದೀರಾ ?

ಶ್ರೀ ಜೆ. ಎಚ್. ಪಟೇಲ್.—ನಾವು ಬೇಕಾದರೆ ಪಾನನಿರೋಧವನ್ನು ಜಾರಿಗೆ ತರಲು ಸಿದ್ಧರಿದ್ದೇವೆ. ಆದರೆ ಅದೇ ಕಾಲಕ್ಕೆ ಆಂಧ್ರದವರು ಮತ್ತು ತಮಿಳುನಾಡಿನವರು ಜಾರಿಗೆ ತರದಿದ್ದರೆ ಏನು ಮಾಡುವುದು ? ಆಗ ನಮಗೆ ಬರುವ ಆದಾಯವೆಲ್ಲಾ ಆ ರಾಜ್ಯಗಳಿಗೆ ಹೋಗುವುದಿಲ್ಲವೇ ? ಆದ್ದರಿಂದ ಇದನ್ನು ಜಾರಿಗೆ ತರುವುದಿದ್ದರೆ ಕೇಂದ್ರ ಸರ್ಕಾರದವರೇ ಜಾರಿಗೆ ತರಲಿ.

ಶ್ರೀ ಕೆ. ಎಚ್. ಪಾಟೀಲ್.— ಶ್ರೀಮತಿ ನಾಗರತ್ನಮ್ಮನವರು ಮತ್ತು ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ. ಆದ್ದರಿಂದ ತಮಗೆ ಮನಸ್ಸಿದ್ದರೆ ಜಾರಿಗೆ ತರಬಹುದು. ಇದಕ್ಕೆ ವಿರೋಧಪಕ್ಷದವರ ಸಂಪೂರ್ಣ ಸಹಕಾರವಿದೆ. ಪಾನ ನಿರೋಧವನ್ನು ಜಾರಿಗೆ ತರುವುದನ್ನು ನಾವು ಬೇಡವೆಂದು ಹೇಳುವುದಿಲ್ಲ. ಈ ದಿಸೆಯಲ್ಲಿ ನೀವು ಕ್ರಮ ತೆಗೆದುಕೊಂಡರೆ, ಅದಕ್ಕೆ ನಮ್ಮ ಸಹಕಾರ ಇದ್ದೇ ಇರುತ್ತದೆ. ನೀವು ನಿಜವಾಗಿಯೂ ದೀನದಲಿತರ ಬಗ್ಗೆ ಹಿಂದುಳಿದವರ ಬಗ್ಗೆ ಆಸ್ಥೆ ಉಳ್ಳವರಾಗಿದ್ದರೆ ಈ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಿರಿ. ಈಗ ರೈತರ ಹತ್ತಿರ ಸಾಲವನ್ನು ಕ್ರೂರ ರೀತಿಯಿಂದ ವಸೂಲು ಮಾಡುತ್ತೀರಿ ಅದೇ ರೀತಿಯಿಂದ ಇವತ್ತು ಸೆರೆಯನ್ನು ಮಾರುವವರು ಶೇಂದಿಯನ್ನು ಮಾರುವವರು ಕೊಡಬೇಕಾದ ಕೋಟ್ಯಾವಧಿ, ಹಣ ಏನು ಇದೆ, ಅದನ್ನು ವಸೂಲು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅವರಿಗೇ ಪುನಃ ಪುನಃ ಸೆರೆ ಅಂಗಡಿಯನ್ನು ಕೊಡುವ ರೀತಿಯಲ್ಲಿ ತಾವು ನಡೆಯುತ್ತಿದ್ದೀರಿ. ಅದಕ್ಕಾಗಿ ಏತಕ್ಕೆ ಈ ಸರಕಾರವನ್ನು ಕಂಟ್ರಾಕ್ಟರ ಗೌರ್ನಮೆಂಟ್ ಎನ್ನಬಾರದು ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇವತ್ತು ಬಡವರಿಗೆ ಸಹಾಯಧನ, ಲೋನ್, ಕಡಿಮೆ ಇಂಟರೆಸ್ಟ್ ಲೋನ್ ಇದನ್ನು ಕೊಡಬೇಕಾದರೆ ತಾವು ಬಹಳ ಹಿಂದೆ ಮುಂದೆ ನೋಡುತ್ತೀರಿ. ಇವೊತ್ತು ಹೊರಗಿನ ರಾಜ್ಯದಿಂದ ಬಂದಿರತಕ್ಕವರಿಗೆ, ಒಬ್ಬ ಮೆಹತಾ ಎನ್ನುವವರ ಹೆಸರನ್ನೂ ನಾನು ಹೇಳಿದೆ, ಅವರಿಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಬಡ್ಡಿ ಇಲ್ಲದ ಸಾಲವನ್ನಾಗಿ ಕೊಟ್ಟಿದ್ದೀರಿ. ಎಂ. ಎಂ ಸಿ, ಎನ್ನುವವರಿಗೆ ಮೂರುಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಎನ್ನುವ ವದಂತಿ ಇದೆ. ಇದಕ್ಕೆ ಯಾವ ತತ್ವ ಎಂದು ಹೇಳುತ್ತೀರಿ? ಇದೇನು ಲೋಹಿಯಾ ತತ್ವವೋ, ಮಹಾತ್ಮಗಾಂಧಿ ತತ್ವವೋ ಅಥವಾ ಜೆ. ಹೆಚ್. ಪಟೇಲರ ತತ್ವವೋ ?

ಶ್ರೀ ಜೆ. ಹೆಚ್. ಪಟೇಲ್.— ಶ್ರೀ ಮೆಹತಾರವರಿಗೆ ಡೆವಲಪ್‌ಮೆಂಟ್ ಲೋನ್ ಕೊಟ್ಟಿರುವುದು ನಮ್ಮ ಕಾಲದ ಡಿಸಿಷನ್ ಅಲ್ಲ. ಕೊಟ್ಟಿದ್ದೇವೆ, ಕೊಟ್ಟಿಲ್ಲ ಎಂದು ಅಲ್ಲ, ಅವರಿಗೆ ಒಂದೂವರೆ ಕೋಟಿ ಕೊಟ್ಟಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.— ಬಡ್ಡಿ ಇಲ್ಲದೆ ೧೦ ವರ್ಷಕ್ಕೆ ಕೊಟ್ಟಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.— ಐದು ವರ್ಷಕ್ಕೆ ಕೊಟ್ಟಿದ್ದೇವೆ. ಮಾನ್ಯ ಪಾಟೀಲರು ಹೇಳುವ ತತ್ವವನ್ನು ನಾನು ಒಪ್ಪುತ್ತೇನೆ. ಸ್ವತಃ ಕೋಟಿಗಟ್ಟಲೆ ಇನ್‌ವೆಸ್ಟ್ ಮಾಡಿದ್ದಾಗ, ಅವರಿಗೆ ಏತಕ್ಕೆ ದುಡ್ಡು ಕೊಟ್ಟಿದ್ದೀರಿ ಎಂಬ ವಿಚಾರದ ಬಗ್ಗೆ ಹೇಳುವುದಾದರೆ, ಬಂಡವಾಳ ಹಾಕಿ ಸ್ಟಾರ್ಟ್ ಮಾಡತಕ್ಕ ಕಾರ್ಖಾನೆಯವರಿಗೆ ನೆರವು ನೀಡುವುದು ನಮ್ಮ ಪಾಲಿಸಿ. ಇಂಡಸ್ಟ್ರಿಯಲ್ ಗ್ರೋತ್ ಆಗಬೇಕೆಂದರೆ, ಹೊರಗಡೆಯಿಂದ ಅನಿವಾರ್ಯವಾಗಿ ಜನ ಬರುತ್ತಾರೆ, ಅವರದ್ದು ೪೦೦— ೫೦೦ ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇರುತ್ತದೆ. ಅದರಿಂದ ನಮ್ಮ ರಾಜ್ಯದಲ್ಲಿ ಸಾವಿರಾರು ಜನರಿಗೆ ಕೆಲಸ ಸಿಗುತ್ತದೆ, ಅಂತಹ ಕೆಲವಕ್ಕೆ ನಾವು ನೆರವು ನೀಡಬೇಕಾಗುತ್ತದೆ. ಇದು ಅನಿವಾರ್ಯ. ನೀತಿಯ ದೃಷ್ಟಿ ಹೇಳುವುದಾದರೆ, ನಾವು ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಸಹಾಯ ಮಾಡಬೇಕೇ ಹೊರತು, ಬಹಳ ದೊಡ್ಡವರಿಗೆ ಮಾಡಬಾರದು.

ಶ್ರೀ ಕೆ. ಹೆಚ್. ಪಾಟೀಲ್.— ನನ್ನದು ಮೂರು ನಾಲ್ಕು ಪ್ರಶ್ನೆಗಳು ಇವೆ, ಒಂದಕ್ಕೆ ಉತ್ತರ ಹೇಳಿದ್ದಾರೆ. ಈ ರೀತಿ ಮೆಹ್ತಾರವರಿಗೆ ಹಣ ಕೊಟ್ಟಿದ್ದು ತಪ್ಪು. ಈ ರೀತಿ ಕೊಡುವುದರ ಬದಲು ಚನ್ನಗಿರಿಯಲ್ಲಿ ಒಂದು ಮಿಲ್ ಹಾಕಿದ್ದರೆ, ಸಾವಿರಾರು ಮಂದಿಗೆ ಉದ್ಯೋಗ ದೊರಕುತ್ತಿತ್ತು. ಹತ್ತು ವರ್ಷದವರೆಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಅವರಿಗೆ ಕೊಟ್ಟರೆ, ಅವರಿಗೆ ಬೆನಿಫಿಟ್ ಕೊಟ್ಟಹಾಗೆ ಆಗುತ್ತದೆ ಅದರಿಂದ ನಮಗೇನೂ ಲಾಭ ಇರುವುದಿಲ್ಲ. ಈ ದೃಷ್ಟಿಯಿಂದ ನಾನು ಹೇಳುತ್ತೇನೆ. ನಮ್ಮ ಕಾಲದಲ್ಲಿ ಇದನ್ನು ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ ನಮ್ಮ ಕಾಲದಲ್ಲಿ ತಪ್ಪು ಮಾಡಿದ್ದನ್ನು ಪುನರಪಿ ತಾವು ಮಾಡುವುದಕ್ಕೆ ಹೋಗಬೇಡಿ. ಆಗ ತಮಗೆ ಕೇಳುವ ಶಕ್ತಿ ಇರಲಿಲ್ಲ, ಮಾಡಿದ್ದಾರೆ, ಈಗ ನಮಗೆ ಕೇಳುವ ಶಕ್ತಿ ಇದೆ, ಅದಕ್ಕಾಗಿ ನಾವು ಹೇಳಬೇಕಾಗುತ್ತದೆ. ಇವೊತ್ತು ಕಾವೇರಿ ಯೋಜನೆಗಳ ಸಲುವಾಗಿ ಮತ್ತು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಎಷ್ಟು ಮಾಡಿರುತ್ತೀರಿ? ಕಾವೇರಿ ಯೋಜನೆಯಾಗಲೀ, ಮಲಪ್ರಭಾ ಯೋಜನೆಯಾಗಲೀ, ಘಟಪ್ರಭಾ ಯೋಜನೆಯಾಗಲೀ, ಕೃಷ್ಣಾ ಮೇಲ್ದಂಡೆ ಯೋಜನೆಯಾಗಲೀ, ಇವೆಲ್ಲಾ ಯೋಜನೆಗಳಿಗೆ, ಅನೇಕ ಕೋಟಿ ಹಣವನ್ನು ಖರ್ಚು ಮಾಡಿ, ಇವೊತ್ತಿನ ದಿವಸ ಈ ಯೋಜನೆಗಳನ್ನೆಲ್ಲಾ ಒಂದು ಮುಕ್ತಾಯದ ಹಂತಕ್ಕೆ ತಂದಿದ್ದರೆ ನಮ್ಮ ರಾಜ್ಯಕ್ಕೆ ಅನುಕೂಲವಾಗುತ್ತಿತ್ತು. ಇವುಗಳಿಗೆ ಸಮರ್ಪಕವಾಗಿ ಹಣ ಒದಗಿಸದೇ, ಬೇರೆ ಬೇರೆ ಕಾರಣಗಳಿಗಾಗಿ ನಮ್ಮ ಹತ್ತಿರ ಹಣ ಇಲ್ಲ ಎಂದು ಹೇಳುತ್ತಿದ್ದೀರಿ. ಈ ನಾನ್ ಪ್ಲಾನ್ ಯೋಜನೆಗಳಿಗೆ ಹಣ ಕೊಟ್ಟರೂ ಆಗುತ್ತದೆ ಕೊಡದಿದ್ದರೂ ಆಗುತ್ತದೆ. ನಿಮ್ಮನ್ನು ಯಾರು ಇವತ್ತು ತಾಳಿ ಕೊಡಿ ಎಂದು ಕೇಳಿದ್ದರು. ತಾಳಿ ಕೊಟ್ಟರೂ ಅವರು ಗಂಡ ಹೆಂಡಿರಾಗುತ್ತಾರೆ, ಕೊಡದಿದ್ದರೂ ಗಂಡ ಹೆಂಡಿರಾಗುತ್ತಾರೆ. ಇದಕ್ಕೆ ನೀವು ಹಣ ಕೊಡದಿದ್ದರೂ ನಡೆಯುತ್ತದೆ, ಹಾಗೆಂದರೆ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ಮಾಡಬೇಡಿ ಎಂದಲ್ಲ. ನೀವು ನಿಜವಾಗಿಯೂ ಜನಾನುರಾಗಿಗಳಾಗಿದ್ದರೆ, ದಯಾವಂತರಾಗಿದ್ದರೆ, ಹಣವನ್ನು ಯಾವುದಕ್ಕೆ ಉಪಯೋಗ ಮಾಡಬೇಕಾಗಿತ್ತೋ, ಅದಕ್ಕೆ ಮಾಡಬೇಕಾಗಿತ್ತು. ಆ ರೀತಿ ಮಾಡದೆ, ಯಾವಯಾವುದಕ್ಕೋ ಖರ್ಚು ಮಾಡಿ, ನಮ್ಮ ರಾಜ್ಯವನ್ನು ನಮ್ಮ ದೇಶವನ್ನು ದುಸ್ಥಿತಿಗೆ ತರುವುದಕ್ಕೆ ಕಾರಣರಾಗಿದ್ದೀರಿ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಅದಕ್ಕೆ ತಾವು ಉತ್ತರ ಹೇಳಲಿಲ್ಲ. ಇನ್ನು ಬರಗಾಲದ ಬಗ್ಗೆ ಹೇಳುತ್ತೇನೆ. ಹೋದಸಲ ಹೇಳಿದ್ದೇ ಈ ಸಲ ಹೇಳುತ್ತಿದ್ದೇವೆ ಎಂದು ಅಲ್ಲ. ಬರಗಾಲದ ಸಲುವಾಗಿ ಅವೊತ್ತು ಹೇಳಿದ್ದನ್ನೇ ಇವೊತ್ತು ಹೇಳುತ್ತೇವೆ, ಇವತ್ತು ಹೇಳಿದ್ದನ್ನು ಇನ್ನು ಮುಂದೂ ಹೇಳುತ್ತೇವೆ. ಆ ರೀತಿ ಹೇಳಲೇಬೇಕಾಗುತ್ತದೆ. ದನಗಳಿಗೆ ಮೇವು ಇಲ್ಲ. ಸುಮಾರು ೯೦ ಲಕ್ಷ ದನಗಳು ಇವೆ ಎಂದು ಹೇಳಿದ್ದೀರಿ. ಮಾನ್ಯ ಖಾರ್ಗೆಯುವರೂ ಸಹ ತಮ್ಮ ರಿಪೋರ್ಟಿನಲ್ಲಿ ಇದನ್ನು ಬರೆದಿದ್ದಾರೆ. ಅವರ ರಿಪೋರ್ಟನ್ನು ತಾವು ಒಪ್ಪಿದ್ದೀರಿ, ಆದರೆ ಅದರ ಪ್ರಕಾರ ಯಾವ ಕಾರ್ಯಕ್ರಮಗಳೂ ಇಲ್ಲ. ನೀವು ಅಲ್ಲಿಂದ ಫಾಡರ್ ಬರುತ್ತದೆ, ಇಲ್ಲಿಂದ ಫಾಡರ್ ಬರುತ್ತದೆ ಎಂದರೆ ಆಗುವುದಿಲ್ಲ. ಸುದೈವದಿಂದ ಮಳೆ ಬಂದರೆ ನಮಗೂ ಒಳ್ಳೆಯದೂ, ನಿಮಗಂತೂ ಸರಿಯೇ ಸರಿ. ನಿಮಗೆ ಕಲ್ಯಾಣ ಆಗಬೇಕು ಎಂಬುದು ನಮ್ಮ ಉದ್ದೇಶ. ನಿಮ್ಮನ್ನು ಕಷ್ಟದಲ್ಲಿ ಸಿಕ್ಕಿಸಲಿಕ್ಕೆ ಅಪೋಸಿಷನ್ ಇಲ್ಲ. ನಿಮ್ಮ ಕಷ್ಟ ದೂರ ಆಗಬೇಕೆಂದು ನಮ್ಮ ಇಚ್ಛೆ. ನಿಮ್ಮ ಕಷ್ಟ ದೂರ ಮಾಡುವುದಕ್ಕೆ ದೇವರು ಒಬ್ಬನಿಂದಲೇ ಸಾಧ್ಯ. ನೀವು ಯೋಜಕರಲ್ಲ. ಯಾರೋ ಯೋಜನೆ ಮಾಡಿದ್ದರ ಒಳಗೆ ನೀವು ಹೊಳ್ಳಾಡುತ್ತೀರಿ. ಥಿಂಕ್ ಟ್ಯಾಂಕ್ ಅಯೋಗ್ಯವಾಗಿದೆ. ಥಿಂಕ್ ಟ್ಯಾಂಕ್‌ಗೆ ಬುದ್ಧಿ ಇದ್ದಿದ್ದರೆ ಅವರು ಕ್ಯಾಟಲ್ ಫೀಡ್ ಬಗ್ಗೆ ಹೇಳಬಹುದಾಗಿತ್ತು. ಬರಗಾಲದ ಯೋಜನೆಗಳ ಬಗ್ಗೆ ಮೇವನ್ನು ಸರಿಪಡಿಸುವುದಕ್ಕೆ ಅವರು ಸಲಹೆ ಕೊಡಬಹುದಾಗಿತ್ತು. ಕ್ಯಾಟಲ್ ಫೀಡ್ ಯುನಿಟ್ಸ್ ಮಾಡಿ, ಗೋಧಿ ತೌಡು ಹಾಗೂ ಮೊಲಾಸಿಸ್ ಉಪಯೋಗ ಮಾಡಿ ದನಗಳಿಗೆ ಮೇವು ತಯಾರು ಮಾಡುವ ಬಗ್ಗೆ ಅವರು ಹೇಳಬಹುದಾಗಿತ್ತು. ಥಿಂಕ್ ಟ್ಯಾಂಕ್‌ನಲ್ಲಿ ರಿಟೈರ್ಡ್ ಆದವರು ಇದ್ದಾರೆ. ಅವರಿಗೆ ಏನೂ ಗೊತ್ತಿಲ್ಲ. ಬರ ಎಂದರೇನು ಎಂದು ಗೊತ್ತಿಲ್ಲ, ಹಳ್ಳಿಗಳ ಬಗ್ಗೆ ಅವರಿಗೆ ಗೊತ್ತಿಲ್ಲ. ಅವರಿಗೆ ಬರೀ ಸಿಟಿಗಳ ಬಗ್ಗೆ ಮಾತ್ರ ಗೊತ್ತು. ಇಂತಹವರ ಸಲುವಾಗಿ ತಾವು ಏತಕ್ಕೆ ಖರ್ಚು ಮಾಡುತ್ತೀರಿ. ಇದರ ಬಗ್ಗೆ ತಾವು ಲಕ್ಷ್ಯ ವಹಿಸಬೇಕೆಂದು ಹೇಳುತ್ತೇನೆ. ತಾವು ಜನಗಳಲ್ಲಿ ಹೊಸ ನೈತಿಕ ರೂಪುರೇಷೆಗಳನ್ನು ಬಿಂಬಿಸಲಿಕ್ಕೆ ಹೊರಟಿದ್ದೀರಿ. ನಿಮ್ಮನ್ನು ನಂಬಿ ಜನ ನಿಮಗೆ ಓಟು ಕೊಟ್ಟಿದ್ದಾರೆ, ನಮ್ಮನ್ನು ತಳಕ್ಕೆ ಕೂರಿಸಿದ್ದಾರೆ. ನೀವು ಅವರಿಗೆ ಒಳ್ಳೆಯದು ಮಾಡಿದರೆ ಸಂತೋಷ. ಕರ್ನಾಟಕದ ಜನತೆಗೆ ಸಂತೋಷ ಆಗಬೇಕೆಂಬುದೇ ಕಾಂಗ್ರೆಸ್ ಉದ್ದೇಶ. ಇವೊತ್ತು ಸಹಿತ ನಿಮ್ಮ ಯಾವ ಯೋಜನೆಗಳೂ ಹಳ್ಳಿಯ ಮಟ್ಟಕ್ಕೆ ಹೋಗಿಲ್ಲ.

ಹಳ್ಳಿಯ ಒಳಗೆ ಹೊಲಸು ನಾರುತ್ತಿದೆ ಎಂದು ಮಾನ್ಯ ಸಚಿವರು ಹೇಳಿದರು. ಹಳ್ಳಿ ಒಳಗೆ ಹೊಲಸು ನಾರುತ್ತಿದೆ ಎಂದು ನಾವು ಹೇಳಿಕೊಳ್ಳುತ್ತಾ ಬಂದಿದ್ದೇವೆ. ನೀವೂ ಹೇಳಿಕೊಳ್ಳುತ್ತಾ ಬಂದಿದ್ದೀರಿ. ಅದನ್ನು ಸರಿ ಮಾಡಿ. ಕೇಂದ್ರ ಸರಕಾರ ವನ್ನು ತಾವು ಬಯ್ಯುತ್ತೀರಿ. ಕೇಂದ್ರ ಸರಕಾರ ನೂರಕ್ಕೆ ನೂರರಷ್ಟು ಸಹಾಯ ಮಾಡುವಂತಹ ಅನೇಕ ಯೋಜನೆಗಳು ಇವೊತ್ತು ರಾಜ್ಯದಲ್ಲಿವೆ. ಇದೇನು ದೊಡ್ಡ ಸ್ಥಾನ ಅಲ್ಲ, ಎಲ್ಲರಿಗೂ ಕೊಟ್ಟ ಹಾಗೆ ನಿಮಗೂ ಕೊಡುತ್ತಿದ್ದಾರೆ. ಅದಕ್ಕೆ ಸರಿಯಾದ ಯೋಜನೆಗಳನ್ನು ಹಾಕಿ ಅದನ್ನು ಪೂರ್ತಿಯಾಗಿ ಅನುಭವಿಸುವ ಶಕ್ತಿ ನಿಮ್ಮಲ್ಲಿ ಇವೊತ್ತು ಇಲ್ಲ. ಕನ್ಯ ಕೊಡಬೇಕಾದರೆ ವರ ನೋಡಿ ಕೊಡಬಹುದು. ನೀವು ಶಕ್ತಿ ಇಲ್ಲದಿರುವವರು ಇವೊತ್ತು ಬಂದಿದ್ದೀರಿ. ನಿನ್ನೆ ನಾನು ಇಲ್ಲಿ ಒಂದು ಪತ್ರ ಓದಿದೆ. ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ನೂರು ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲ್‌ಗಳನ್ನು ಕೊಟ್ಟಿದ್ದೇವೆ ಎಂದರು. ಅದನ್ನು ನಡೆಸುವಂಥವರು ಬ್ಯಾಕ್‌ವರ್ಡ್ ಕ್ಲಾಸ್ ಇಲಾಖೆಯ ಡೈರೆಕ್ಟರ್‌ರವರು. ಆ ಡೈರೆಕ್ಟರ್‌ರವರು ನನಗೆ ಬರೆದ ಪತ್ರವನ್ನು ನೇರವಾಗಿ ಓದಿ ಹೇಳಿದರೆ ಇದರ ಬಗ್ಗೆ ಮಾನ್ಯ ಸಚಿವರು ಒಂದು ಅಕ್ಷರವನ್ನೂ ಹೇಳಲಿಲ್ಲ. ೭೫-೭೬ರಲ್ಲಿ ಒಂದೂ ಹಾಸ್ಟೆಲ್ ತೆಗೆದುಕೊಂಡಿಲ್ಲ ಎಂದು ಅವರು ಬರೆದಿದ್ದಾರೆ. ಅವರು ಇದನ್ನು ಬರೆದಾಗ ತಪ್ಪು ಬರೆದಿದ್ದಾರೆ, ಒಪ್ಪು ಬರೆದಿದ್ದಾರೋ ಎಂದು ಉತ್ತರ ಹೇಳುವಾಗ ಹೇಳಬೇಕಾಗಿತ್ತು. ಆ ಡೈರೆಕ್ಟರ್‌ರವರನ್ನು ತಂದು ಇಲ್ಲಿ ಕೂರಿಸಬೇಕಾಗಿತ್ತು. ಡೈರೆಕ್ಟರ್ ನಿಮ್ಮ ಮಾತು ಕೇಳುವುದಿಲ್ಲ, ನಿಮ್ಮ ಉತ್ತರ ಬರುವುದಿಲ್ಲ, ಇದರ ಹಕೀಕತ್ತು ನಮಗೆ ತಿಳಿಯುವುದಿಲ್ಲ. ಹೀಗಾದರೆ ಇದು ಏನು ಸರಕಾರ? ನಮಗೆ ಸುಮ್ಮನೆ ಟೀಕೆ ಮಾಡಬೇಕೆಂದೇನೂ ಇಲ್ಲ. ರಚನಾತ್ಮಕ ಕಾರ್ಯಕ್ರಮಗಳನ್ನು ನೀವು ಮಾಡಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.--- ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿ ಬರಗಾಲದ ಬಗ್ಗೆ ವಿಶೇಷವಾಗಿ ಪ್ರಸ್ತಾಪ ಮಾಡಿದ್ದಾರೆ ಇದರ ಬಗ್ಗೆ ಸ್ಪಷ್ಟೀಕರಣ ಕೇಳುತ್ತೇನೆ. ತಮಗೆ ಗೊತ್ತಿದೆ, ನಮ್ಮ ರಾಜ್ಯದಲ್ಲಿ ಅಂತರ್ಜಲ ಕೆಳಗಡೆ ಹೋಗುತ್ತಿದೆ. ಬೋರ್‌ವೆಲ್‌ನಲ್ಲೂ ನೀರು ಸಿಗುತ್ತಿಲ್ಲ. ೩೦೦ ಅಡಿಗಳಿಗೂ ಮೀರಿದ ಆಳದವರೆಗೆ ಕೊರೆಯುವ ಸಾಮರ್ಥ್ಯ ಹೊಂದಿರುವ ಹೈಡ್ರಾಲಿಕ್ ರಿಗ್‌ಗಳನ್ನು ಪಡೆಯುವ ಸಾಧ್ಯತೆಯನ್ನು ತುರ್ತಾಗಿ ವಿಚಾರ ಮಾಡಲಾಗುತ್ತಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಈಗ ರಾಜ್ಯಪಾಲರ ಭಾಷಣ ಆಗಿ ೨೦ ದಿವಸ ಕಳೆಯುವುದಕ್ಕೆ ಬಂತು. ಹೈಡ್ರಾಲಿಕ್ ರಿಗ್‌ಗಳನ್ನು ತರುವುದಕ್ಕೆ ಆರ್ಡರ್ ಏನಾದರೂ ಕೊಟ್ಟಿದ್ದೀರಾ ? ಅದರ ಸ್ಥಿತಿ ಏನು ? ಸ್ಟೈಕ್ಲೋನ್ ರಿಗ್ ನಿಮ್ಮ ಹತ್ತಿರ ಎಷ್ಟಿದೆ ? ಅದರ ಸ್ಥಿತಿ ಏನು ? ಇದು ಒಂದನೆಯದು. ಎರಡನೆಯದಾಗಿ, ಬರಗಾಲದ ಕಾಮಗಾರಿಯಲ್ಲಿ ಕೆಲಸ ಮಾಡುವವರಿಗೆ ಕೂಲಿಗೆ ಬದಲಾಗಿ ರಿಯಾಯಿತಿ ದರದಲ್ಲಿ ಒಂದೂವರೆ ಕೆ. ಜಿ. ದವಸಧಾನ್ಯಗಳನ್ನು ವಿತರಣೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ಬರಗಾಲ ಕಾಮಗಾರಿ ನಡೆಯುವ ಎಲ್ಲಾ ಕಡೆಗೆ ವಿಸ್ತರಿಸಬೇಕು. ಶಿವಮೊಗ್ಗ ಜಿಲ್ಲೆಯಲ್ಲಿ ಈ ರೀತಿ ಎಲ್ಲೂ ಕೊಡುತ್ತಿಲ್ಲ, ಎಲ್ಲೋ ಬೇರೆ ಒಂದೆರಡು ಕಡೆ ಕೊಡುತ್ತಿರಬಹುದು ಅಷ್ಟೆ. ಆದುದರಿಂದ ಇದನ್ನು ಎಲ್ಲಾ ಕಡೆಗೂ ರಾಜ್ಯದಾದ್ಯಂತ ವಿಸ್ತರಿಸಬೇಕು. ಮೂರನೆಯದಾಗಿ, ಮೇವಿನ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ರೈತರ ಹತ್ತಿರ ಮೇವನ್ನು ಕೊಳ್ಳುವಾಗ ಒಂದು ಟನ್‌ಗೆ ೨೫೦ ರೂಪಾಯಿಗಳನ್ನು ಕೊಡುತ್ತೇವೆ ಎಂದು ಮಾನ್ಯ ರೆವಿನ್ಯೂ ಸಚಿವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಅದೇನೆಂದರೆ ಅರಣ್ಯ ಇಲಾಖೆಯವರು ಮೇವನ್ನು ಕೊಯ್ಯುವುದಕ್ಕೆ ಒಂದು ಟನ್‌ಗೆ ೩೫೦ರಿಂದ ೪೦೦ ರೂಪಾಯಿಗಳು ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ನಮ್ಮ ರೈತ ಹುಲ್ಲಿನ ಬೀಜವನ್ನು ತಂದು, ನೆಟ್ಟು ನೀರು ಹೊಯ್ದು, ಬೆಳೆದಂಥ ಹುಲ್ಲನ್ನು ಕೊಯ್ದುಕೊಂಡು ಬಂದು ಕೊಟ್ಟರೆ ಅದಕ್ಕೆ ನೀವು ನಿಗದಿ ಮಾಡಿರುವ ಬೆಲೆ ಟನ್‌ಗೆ ೨೫೦ ರೂಪಾಯಿಗಳು ಹಸಿ ಮೇವಾಗಲೀ, ಒಣ ಮೇವಾಗಲೀ ಕೊಯ್ಯುವುದಕ್ಕೆ ಹಿಡಿಯುವ ಸಮಯ ಒಂದೇ ಅರಣ್ಯ ಇಲಾಖೆಯವರು ಒಣಗಿರುವ ಮೇವನ್ನು ಕೊಯ್ಯುವುದಕ್ಕೆ ಟನ್‌ಗೆ ೩೫೦ ರಿಂದ ೪೦೦ ರೂಪಾಯಿಗಳು ಖರ್ಚು ಎಂದರೆ ಹೇಗೆ ? ಹಸಿರು ಮೇವು ಒಣ ಮೇವು ಕೊಯ್ಯುವುದಕ್ಕೇ ಇಷ್ಟು ಖರ್ಚು ಬಂದು. ರೈತ ಬೆಳೆದು ಕೊಯ್ದುಕೊಂಡು ಬಂದು ಕೊಟ್ಟ ಹುಲ್ಲಿಗೆ ಟನ್‌ಗೆ ೨೫೦ ರೂಪಾಯಿಗಳು ಎಂದರೆ ಅವನು ಉದ್ಧಾರ ಆಗುವುದಿಲ್ಲ. ಆದ ಕಾರಣ ಇದನ್ನು ಜಾಸ್ತಿ ಮಾಡಬೇಕು. ಇನ್ನು ನಾಲ್ಕನೆಯದಾಗಿ, ಇವೊತ್ತಿನ ದಿವಸ ರೈತನ ಪರಿಸ್ಥಿತಿ ಬಹಳ ಕೆಟ್ಟಿದೆ, ಅದನ್ನು ತಾವು ಒಪ್ಪಿಕೊಂಡಿದ್ದೀರಿ ತಮ್ಮ ಕಾಲದಲ್ಲಾದರೂ ಸಹ ರೈತನ ಭಾರವನ್ನು ಇಳಿಸಿ ಅವನು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇದಕ್ಕೆ ಕೇಂದ್ರ ಸರಕಾರದ ಜೊತೆ ತಾವು ಮಾತುಕತೆ

ನಡೆಸಿ, ಅವನು ಕೊಡಬೇಕಾದ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುವುದಕ್ಕೆ ಒಂದು ಚಿಂತನೆಯನ್ನು ಮಾಡುತ್ತೀರಾ ? ನಮ್ಮ ರಾಜ್ಯದಲ್ಲಿ ಮೂರು ವರ್ಷದಿಂದ ಭೀಕರ ಬರಗಾಲ ಬಂದಿದೆ. ಈ ರೀತಿ ಇದ್ದರೂ ಸಹ ತಾವು ರೈತರ ಸಾಲವನ್ನು, ಮುಂದುವರಿಸಬಹುದು, ಮುಂದೆ ಕೊಡಿ ಎಂದು ಹೇಳಬಹುದು, ಬಡ್ಡಿಯನ್ನು ಮನ್ನಾ ಮಾಡಬಹುದು, ಆದರೆ ಅವನು ಅಸಲನ್ನು ಕೊಡಲೇಬೇಕು. ರೈತರ ಸಮಸ್ಯೆ ತಮಗೆ ಗೊತ್ತಿದೆ. ಅವನು ಅಸಲನ್ನು ಎಲ್ಲಿಂದ ತರುವುದಕ್ಕೆ ಸಾಧ್ಯ ? ಅದಕ್ಕೋಸ್ಕರ ತಾವು ಇದರ ಬಗ್ಗೆ ಚಿಂತನೆ ಮಾಡಿ, ಇದನ್ನು ಮನ್ನಾ ಮಾಡುವುದಕ್ಕೆ ಪ್ರಯತ್ನ ಮಾಡಿ. ಈ ನಾಲ್ಕು ವಿಚಾರಗಳ ಬಗ್ಗೆ ಕ್ಲಾರಿಫಿಕೇಷನ್ ಕೇಳುತ್ತೇನೆ. ಇನ್ನು ಒಂದು ಸಲಹೆಯನ್ನು ನಾವೆಲ್ಲರೂ ಕೊಟ್ಟಿದ್ದೇವೆ. ಬರಗಾಲದ ಕಾಮಗಾರಿಗಳು ಸರಿಯಾಗಿ ನಡೆಯುತ್ತಿಲ್ಲ, ಇದರ ಬಗ್ಗೆ ಇಲ್ಲಸಲ್ಲದ ಆರೋಪಗಳು ಬರುತ್ತಿವೆ. ಇದರ ಸತ್ಯಾಸತ್ಯತೆ ಬಗ್ಗೆ ನಮಗೆ ಗೊತ್ತಿಲ್ಲ. ಇದಕ್ಕಾಗಿ ಎಲ್ಲಾ ಪಕ್ಷದವರನ್ನೂ ಸೇರಿಸಿ ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿ ನೇಮಕ ಮಾಡಿ ಎಂದು ಸಲಹೆ ಕೊಟ್ಟಿದ್ದೆ. ಮೊನ್ನೆ ನಡೆದ ಚುನಾವಣೆಗಳಲ್ಲಿ, ಗೆದ್ದವರ ಬದಲು, ಎರಡನೆಯ ಸ್ಥಾನ ಪಡೆದಂಥವರನ್ನು ಈ ಸಮಿತಿಯಲ್ಲಿ ಸೇರಿಸುತ್ತೇವೆ ಎಂದು ತಾವು ಹೇಳಿದ್ದಿರಿ. ಚುನಾವಣೆಗೆ ನಿಂತಂಥ ಪ್ರತಿಸ್ಪರ್ಧಿ ಸೋತಮೇಲೆ, ಆ ಕ್ಷೇತ್ರಕ್ಕೂ ಅವನಿಗೂ ಸಂಬಂಧವೇ ಇಲ್ಲದಿರತಕ್ಕ ಪ್ರಕರಣಗಳೂ ಇವೆ. ಈ ರೀತಿ ಕ್ಷೇತ್ರದ ಸಂಪರ್ಕ ಇಲ್ಲದಿರುವವರು ಆ ಸಮಿತಿಯಲ್ಲಿ ಕುಳಿತುಕೊಂಡರೆ ಏನು ಉಪಯೋಗ ?

ಬರಗಾಲ ಪರಿಸ್ಥಿತಿಯ ಬಗ್ಗೆ ಹೋರಾಟ ಮಾಡತಕ್ಕಂತಹ ಸಮಯದಲ್ಲಿ ಎಲ್ಲೆಲ್ಲಿ ಬರಗಾಲ ಪರಿಹಾರ ಕಾಮಗಾರಿ ಮತ್ತಿತರ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಮಾಡಿದ್ದ ಸಮಿತಿಯಲ್ಲಿ ಅಲ್ಲಿಯ ಡಿಫೀಟೆಡ್ ಕ್ಯಾಂಡಿಡೇಟ್ಸ್‌ಗಳವರನ್ನು ತೆಗೆದು ಅಲ್ಲಿರುವ ಜನ ಸಂಪರ್ಕ ಹೊಂದಿರುವ ವ್ಯಕ್ತಿಯನ್ನೇ ನೇಮಿಸಿದಲ್ಲಿ ಅವರು ತಮ್ಮ ಕ್ಷೇತ್ರದಲ್ಲಿನ ಕೆಲಸವನ್ನು ಮುತುವರ್ಜಿಯಿಂದ ನೋಡಿಕೊಳ್ಳಲು ಮುಂದಾಗುತ್ತಾರೆ, ಇದರಿಂದ ಜನರಿಗೂ ಒಳ್ಳೆಯದಾಗುತ್ತದೆ. ಸರ್ಕಾರಕ್ಕೂ ಒಳ್ಳೆಯದಾಗುತ್ತದೆ ಸರಕಾರದ ಮೇಲಿನ ಜವಾಬ್ದಾರಿ ಸಾಕಷ್ಟು ಕಡಿಮೆಯಾಗುತ್ತದೆ. ಸರಕಾರಕ್ಕೆ ಒಳ್ಳೆಯ ಹೆಸರು ಕೂಡಾ ಬರುತ್ತದೆ.

ಶ್ರೀ ಜೆ.ಎಚ್. ಪಟೇಲ್.—ಮಾನ್ಯ ಸದಸ್ಯರ ಮೊದಲನೆಯ ಪ್ರಶ್ನೆಗೆ ಹೇಳುವುದಾದರೆ, ನಮ್ಮಲ್ಲಿ ಎರಡು ಸೈಕ್ಲೋನ್ ರಿಗ್ಸ್‌ಗಳು ಇವೆ. ಹೈಡ್ರೋಲಿಕ್ಸ್ ರಿಗ್ಸ್‌ಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಸರಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾವುಗಳು ಮೂರು ತಿಂಗಳ ಹಿಂದೆ ಈ ಸದನದಲ್ಲಿ ಬರಗಾಲದ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಿದ್ದೇವೆ. ಈಗಾಗಲೇ ನಾಲ್ಕು ತಿಂಗಳು ಕಳೆದು ಹೋಗಿವೆ. ಕೂಡಲೇ ಟೆಂಡರ್ ಕರೆದು ಇದನ್ನು ತೆಗೆದುಕೊಳ್ಳುವ ಬಗ್ಗೆ ಒಂದು ತೀರ್ಮಾನವನ್ನು ಮಾಡದಿದ್ದರೆ, ಮಳೆಗಾಲವೇ ಮುಗಿದು ಹೋಗುತ್ತದೆ.

ಶ್ರೀ ಜೆ.ಎಚ್. ಪಟೇಲ್.—ಮಾನ್ಯ ಸದಸ್ಯರು ಹೇಳಿದಂತೆ ಆದಷ್ಟು ಬೇಗ ಆ ಕೆಲಸವನ್ನು ಮಾಡುತ್ತೇವೆ. ಇನ್ನು ಸಾಲ ವಜಾ ಮಾಡುವ ವಿಚಾರದಲ್ಲಿ ಸಾಲವನ್ನು ವಜಾ ಮಾಡುವುದಕ್ಕೆ ಆಗುವುದಿಲ್ಲ. ಅಂತೆಯೇ ಈ ವಿಚಾರದಲ್ಲಿ ಕೇಂದ್ರ ಸರಕಾರದವರೊಡನೆ ವಿಚಾರ ವಿಮರ್ಶೆ ಮಾಡುವಲ್ಲಿ ಚಿಂತನೆ ಮಾಡಬೇಕೆಂದು ಹೇಳಿದ್ದೀರಿ. ಆ ಕುರಿತಾಗಿ ಕೇಂದ್ರ ಸರಕಾರಕ್ಕೆ ನಾವು ವಿನಂತಿ ಮಾಡಿಕೊಳ್ಳುತ್ತೇವೆ. ಎಲ್ಲಿ ಮೂರು ನಾಲ್ಕು ವರ್ಷಗಳ ಕಾಲ ಭೀಕರ ಬರಗಾಲ ಬೀಳುತ್ತಿದೆಯೋ ಅಂತಹ ಕಡೆಗಳಿಗೆ ಕೇಂದ್ರ ಸರಕಾರದವರು ತಮ್ಮ ಸಹಾಯವನ್ನು ಮಾಡಿದರೆ ಆ ಕುರಿತಾಗಿ ನಾವು ನಮ್ಮ ನೆರವನ್ನು ಕೊಡಬಹುದು. ಸಾಲ ಮನ್ನಾ ಮಾಡಿರುವುದರ ಬಗ್ಗೆ ಕೇಂದ್ರ ಸರಕಾರದವರು ಸಬ್ಸಿಡಿ ರೂಪದಲ್ಲಿ ಸಹಾಯವನ್ನು ಕೊಟ್ಟಿಲ್ಲ. ಆದರೆ ನಾವು ಇಷ್ಟು ಮಾಡಬಹುದು, ಮಾಡಿರುವ ಸಾಲಕ್ಕೆ ಬಡ್ಡಿಯ ಹಣವನ್ನು ವಜಾ ಮಾಡಿದ್ದೇವೆ. ಹಾಗೆಯೇ ಆ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಬಹುದು.

ಇನ್ನು ಡಿಫೀಟೆಡ್ ಕ್ಯಾಂಡಿಡೇಟ್ಸ್ ಬಗ್ಗೆ ಹೇಳಿದ್ದಾರೆ. ಅಂದರೆ ಬರಗಾಲ ಪರಿಹಾರ ಸಮಿತಿಗಳಿಗೆ ನೇಮಕ ಮಾಡುವ ವಿಚಾರದಲ್ಲಿ, ಮಾನ್ಯ ಸದಸ್ಯರು ಹೇಳುವ ತರಹ ಏನೂ ಇಲ್ಲ. ಬೇರೆ ಬೇರೆ ಕಡೆ ಬೇರೆ ಬೇರೆ ಪಕ್ಷದವರು ಬರಗಾಲ ಪರಿಹಾರ ಸಮಿತಿಗೆ ಅಧ್ಯಕ್ಷರಾಗಿದ್ದಾರೆ. ನಾವು ೧೪೦ ಕಡೆಗಳಲ್ಲಿ ಗೆದ್ದು ಬಂದಿದ್ದೇವೆ. ಅಲ್ಲಿ ಬೇರೆ ಪಕ್ಷದವರು ಇದ್ದಾರೆ. ಕಾಂಗ್ರೆಸ್‌ನವರು ಗೆದ್ದಿರುವ ಕಡೆಗಳಲ್ಲಿ ಇತರ

ಪಕ್ಷದ ಬೇರೆಯವರು ಇದ್ದಾರೆ. ಆದುದರಿಂದ ಇಲ್ಲಿ ಡಿಫೀಟೆಡ್ ಕ್ಯಾಂಡಿಡೇಟ್ಸ್‌ಗಳ ಬಗ್ಗೆ ಪಕ್ಷದ ವಿಚಾರ ಬರುವುದಿಲ್ಲ. ನಿಮ್ಮ ಕ್ಷೇತ್ರದ ವಿಚಾರ ನನಗೆ ಗೊತ್ತಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಹಾಗೆ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕಾಡಿನಲ್ಲಿರುವ ಹುಲ್ಲು ಕೊಯ್ಯುವುದಕ್ಕೆ ಒಂದು ಟನ್‌ಗೆ ೩೫೦ ರೂಪಾಯಿಗಳಂತೆ ಖರ್ಚು ಮಾಡಿದ್ದೇವೆ ಎಂದು ಮಾನ್ಯ ಅರಣ್ಯ ಮಂತ್ರಿಗಳವರು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಹೇಳಿದ್ದಾರು. ಆದರೆ ನಮ್ಮ ರೈತರಿಂದ ಕೊಂಡುಕೊಳ್ಳುವ ಬೆಲೆಯೂ ಕಡಿಮೆ ಇದೆ. ಇದು ನ್ಯಾಯವೇ ! ದಯಮಾಡಿ ರೈತರಿಂದ ಕೊಂಡುಕೊಳ್ಳುವ ಹುಲ್ಲಿನ ದರವನ್ನು ಜಾಸ್ತಿ ಮಾಡಬೇಕು. ಇಲ್ಲದಿದ್ದರೆ ಅವನಿಗೆ ಹುಲ್ಲನ್ನು ಬೆಳೆಯುವುದಕ್ಕಾಗುವುದಿಲ್ಲ. ಬೆಳೆಯುವುದರಿಂದ ಅವನಿಗೆ ಏನೂ ಉಳಿಯುವುದಿಲ್ಲ. ಕಾಡಿನಲ್ಲಿ ಬೆಳೆದುದನ್ನು ಕೊಯ್ಯುವುದಕ್ಕೆ ೨೫೦ ರೂಗಳನ್ನು ಹಸಿ ಹುಲ್ಲಿಗೂ, ೫೦೦ ರೂಪಾಯಿಗಳನ್ನು ಒಣ ಹುಲ್ಲಿಗೂ ಕೊಡುತ್ತಿದ್ದೀರಿ ಆದರೆ ರೈತರಿಗೆ ಮಾತ್ರ ಅದರಿಂದ ಕೊಂಡುಕೊಳ್ಳುವುದಕ್ಕೆ ಇಷ್ಟು ಕಡಿಮೆ ಬೆಲೆ ಕೊಡುವುದು ಸರಿಯಲ್ಲ, ಅವರಿಗೆ ಇನ್ನೂ ಜಾಸ್ತಿ ಕೊಡಬೇಕು, ಸರಕಾರದ ಅಧಿಕಾರಿಗಳು ಈ ಹುಲ್ಲನ್ನು ಕೊಯ್ಯುವ ಕೆಲಸಕ್ಕೆ ಖರ್ಚು ಮಾಡಿರುವುದು ಒಂದು ಟನ್‌ಗೆ ೩೫೦ರಿಂದ ೪೦೦ ರೂಪಾಯಿಗಳವರೆಗೆ ಎಂದು ಹೇಳಿದ್ದಾರೆ. ಇದು ಅರಣ್ಯ ಇಲಾಖೆಯ ಅಧಿಕಾರಿಗಳು ಮಾಡಿಸಿರುವ ಕೆಲಸ. ಆದರೆ ರೈತರಿಗೆ ನೀವು ಕಡಿಮೆ ಬೆಲೆ ಕೊಡುತ್ತೀರಿ. ತಮಗೆ ಗೊತ್ತಿರುವ ಹಾಗೆ ರೈತರಿಗೆ ನೀವು ಬೀಜವನ್ನು ಮತ್ತು ಒಂದೂವರೆ ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಾ ಇದ್ದೀರಿ. ಕಾಡಿನಲ್ಲಿ ಹುಲ್ಲು ಕೊಯ್ದರೂ ನಿಮಗೆ ಬರುವ ಖರ್ಚು ಕಡಿಮೆ ಇಲ್ಲ. ಒಂದು ಎಕರೆಯಲ್ಲಿ ಎಷ್ಟು ಟನ್ ಬೆಳೆಯಬಹುದು ಎಂದು ತಾವುಗಳು ಲೆಕ್ಕ ಹಾಕಿ ನೋಡಿದ್ದರೆ ಅದನ್ನು ತಾವುಗಳು ದಯವಿಟ್ಟು ಹೇಳಬೇಕು.

ಶ್ರೀ ಜೆ. ಎಚ್. ಪಟೇಲ್.—ಕಾಡಿನಲ್ಲಿ ಕೊಯ್ಯುವ ಹುಲ್ಲಿಗೆ ನಮಗೆ ೨೫೦ರೂಪಾಯಿಗಳ ಖರ್ಚು ಬರುತ್ತವೆ ರೈತನಿಗೆ ನಾವು ೫೦೦ ರೂಪಾಯಿಗಳನ್ನು ಟನ್‌ಗೆ ಕೊಡುತ್ತಾ ಇದ್ದೇವೆ. ನಮ್ಮ ಅಂದಾಜಿನ ಪ್ರಕಾರ ಎಕರೆಗೆ ೮–೧೦ ಟನ್‌ಗಳ ತನಕ ಬರಬಹುದು, ಒಣ ಹುಲ್ಲು. ಅದನ್ನು ಎಲ್ಲಾ ಲೆಕ್ಕ ಹಾಕಿ ೫೦೦ ರೂಪಾಯಿಗಳು ಸಿಗುತ್ತವೆಂದು ಹೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯರು ರೈತಾಪಿ ಪರಿಸ್ಥಿತಿಯನ್ನು ಮರೆತಿದ್ದಾರೆ. ಒಂದು ಎಕರೆ ಭತ್ತ ಬೆಳೆದರೆ ನಾಲ್ಕು ಗಾಡಿ ಹುಲ್ಲು ಬರುತ್ತದೆ. ತೂಕ ಸುಮಾರು ಎರಡೂವರೆ ಟನ್ ಬರಬಹುದು. ದಯಮಾಡಿ ಈ ಹುಲ್ಲಿನ ದರವನ್ನು ಏನು ನೀವು ರೈತರಿಗೆ ಕೊಡುತ್ತೀರಿ, ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರೂ ಬರಗಾಲ ಪರಿಸ್ಥಿತಿಯಲ್ಲಿ ಬದುಕಲಿ.

ಶ್ರೀ ಜೆ. ಎಚ್. ಪಟೇಲ್.—ಈಗಾಗಲೇ ಕೂಲಿ ಜಾಸ್ತಿ ಕೊಡುತ್ತಾ ಇದ್ದಾರೆ. ಸರಿಯಾದ ಬೆಲೆಯನ್ನು ಹುಲ್ಲಿಗೂ ಕೊಡುತ್ತಾ ಇದ್ದಾರೆ. ಆದರೂ ಕೂಡಾ ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಮತ್ತೊಮ್ಮೆ ಪರಿಶೀಲಿಸಬಹುದು.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಜೆ. ಎಚ್. ಪಟೇಲ್‌ರವರು ಒಬ್ಬ ಸಮಾಜವಾದಿ ಪ್ರೇಮಿಯಾಗಿ, ಜನರ ಬಗ್ಗೆ ಅತ್ಯಂತ ಕಳಕಳಿ ಇರತಕ್ಕಂತಹ ಮನುಷ್ಯರಾಗಿ ಜನಾನುರಾಗಿಗಳಾಗಿದ್ದಾರೆ ಎಂದು ನಾವೆಲ್ಲರೂ ಭಾವಿಸಿಕೊಂಡಿದ್ದೇವೆ ಇಂತಹವರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನಡೆದಿರತಕ್ಕಂತಹ ಗಂಭೀರವಾದ ಚರ್ಚೆಗೆ ಸೂಕ್ತವಾದ ಉತ್ತರ ಕೊಡಬೇಕು. ನಾವು ಇಂತಿಂಥ ಪ್ರಶ್ನೆಗಳನ್ನು, ಸಮಸ್ಯೆಗಳನ್ನು, ಗಂಭೀರವಾಗಿ, ಆಳವಾಗಿ, ಚಿಂತನೆ ಮಾಡಿ ಅವರ ಮುಂದೆ ಇಟ್ಟಿದ್ದೇವೆ. ಅದಕ್ಕೆ ಸರಿಯಾದ ಉತ್ತರವನ್ನು ನಾವು ಬಯಸುತ್ತೇವೆ. ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾಜವಾದಿ ಸಿದ್ಧಾಂತವನ್ನು ಕಾರ್ಯರೂಪಕ್ಕೆ ತರುವುದರ ಬಗ್ಗೆ ಯಾವ ಒಂದು ಕಾರ್ಯಕ್ರಮವನ್ನೂ ಸರ್ಕಾರ ಇಟ್ಟಿಲ್ಲ. ಇವೊತ್ತು ಇವರನ್ನು ಉತ್ತರ ಕುಮಾರರಂತೆ ರಣರಂಗಕ್ಕೆ ಕಳುಹಿಸಿದ್ದಾರೆ ಅಷ್ಟೆ. ಈ ಉತ್ತರ–ಕುಮಾರರಿಂದ ಯಾವ ಉತ್ತರವೂ ಇಲ್ಲ, ಪ್ರತಿಭಟನೆಯೂ ಇಲ್ಲ. ಈ ರೀತಿಯಾಗಿ ಸರ್ಕಾರದವರು ಪಲಾಯನ ಮಾಡಿದ್ದಾರೆ ಎಂದು ಹೇಳಬಹುದು.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಇದು ಸರಿಯಲ್ಲ. ಯಾವ ಸದಸ್ಯರು ಏನು ಮಾತನಾಡಿದ್ದಾರೆ, ಅದಕ್ಕೆ ಏನು ಉತ್ತರ ಕೊಡಬೇಕೆಂದು ನನಗೆ ಗೊತ್ತಿದೆ. ಇವರ ತೀರ್ಮಾನಕ್ಕೆ ಅನುಗುಣವಾಗಿ ನಾನು ಉತ್ತರವನ್ನು ಕೊಡಬೇಕಾಗಿಲ್ಲ.

ಶ್ರೀ ಪಟವುಕ್ಕಿ ರತ್ನಾಕರ.—ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಯಾವುದೇ ವಿಷಯ ಇರಬಹುದು, ಆದರೆ ಇವರು ಯಾವುದರ ಬಗ್ಗೆಯೂ ಉತ್ತರವನ್ನು ಸರಿಯಾಗಿ ಕೊಟ್ಟಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಉಪಾಧ್ಯಕ್ಷರೆ, ಪಾವು ಚರ್ಚೆಯಲ್ಲಿ ಭಾಷಣ ಮಾಡಿದ ಮೇಲೆ, ಉತ್ತರ ಕೊಡುವ ಹೊತ್ತಿನಲ್ಲಿ ನಾವು ಇರಬೇಕಾದುದು ನಮ್ಮ ಕರ್ತವ್ಯ. ಉತ್ತರವು ೧೧ ಗಂಟೆಗೆ ಪ್ರಾರಂಭ ಆಗಬಹುದು ಎಂದು ಅಂದಾಜಿನ ಮೇಲೆ ಒಂದು ಅವಶ್ಯಕ ವಿಷಯ ಸಂಗ್ರಹಣೆಗಾಗಿ ಗ್ರಂಥಾಲಯಕ್ಕೆ ಹೋಗಿದ್ದೆ. ಕ್ಷಮಿಸಬೇಕು.

೧೧–೩೦ ಎ. ಎಂ.

ಅದಕ್ಕಾಗಿ ನಾನು ಪ್ರಪ್ರಥಮವಾಗಿ ಮಾನ್ಯ ಸಚಿವರಿಗೆ ಕ್ಷಮೆಯಾಚಿಸುತ್ತೇನೆ. ನಾನು ಉದ್ದೇಶ ಪೂರ್ವಕವಾಗಿ ಈ ರೀತಿ ಮಾಡಿದ್ದುದು ಅಲ್ಲ. ನಾನು ಪ್ರಸ್ತಾಪ ಮಾಡಿದಂಥ ಕೆಲವು ವಿಚಾರಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿರಬಹುದು. ನಾನು ಮಾತನಾಡುವಾಗ ಅವರು ತಿಳಿದುಕೊಂಡ ಪ್ರಕಾರ ಆದರೆ ಕೆಲವು ನೀತಿಯನ್ನು ಲಘುವಾಗಿ ಕಂಡೆ ಎನ್ನುವ ಮಾತನ್ನು ಹೇಳಿದರು. ಖಂಡಿತವಾಗಿ ಆ ರೀತಿ ಇಲ್ಲ. ನಾನು ನಿನ್ನೆಯ ದಿವಸ ಏನು ಹೇಳಿದೆ ಎಂದರೆ ಇದು ನಿಮ್ಮ ಒಬ್ಬರ ಚಿಂತನೆಯಲ್ಲ. ಮಾನ್ಯ ಸಚಿವರಾದಂಥ ಶ್ರೀಮಾನ್ ಜೆ. ಹೆಚ್. ಪಟೇಲ್‌ರವರ ಚಿಂತನೆ ನನಗೆ ಚೆನ್ನಾಗಿ ಗೊತ್ತಿದೆ. ಅವರ ಚಿಂತನೆ ಸರ್ಕಾರದ ಚಿಂತನೆಯಾಗುವುದಿಲ್ಲ. ನಿಮ್ಮ ಸರ್ಕಾರಕ್ಕೆ ಸಮಗ್ರವಾದಂಥ ನೀತಿಯು ನೆಲೆ ಇನ್ನೂ ಸಿಕ್ಕಿಲ್ಲ ಏತಿ ಎಂದ ಮಾತ್ರಕ್ಕೆ ಪ್ರೇತದ ನೀತಿಯಾಗುವುದಕ್ಕೆ ಸಾಧ್ಯವಿಲ್ಲ. ಎಲೆಕ್ಟ್ರಾನಿಕ್ಸ್ ಎಂದರೆ ಎತ್ತಿನ ಗಾಡಿಯಾಗುವುದಿಲ್ಲ. ಪವರ್‌ಲೂಮ್ ಎಂದರೆ ಹ್ಯಾಂಡ್‌ಲೂಮ್ ಆಗುವುದಿಲ್ಲ. ಆಯಾಯ ನೀತಿಗೆ ಅನುಗುಣವಾಗಿ ಸರ್ಕಾರದವರ ಸಮಗ್ರವಾದ ಕಾರ್ಯಕ್ರಮ ಪ್ರತಿಫಲಿತವಾಗಬೇಕು. ಎತ್ತಿನ ಗಾಡಿ ಎಂದರೆ, ಹ್ಯಾಂಡ್‌ಲೂಮ್ ಎಂದರೆ ನಾನು ಲಘುವಾಗಿ ಕಂಡಿಲ್ಲ. ಉದಾಹರಣೆಗೆ ನಾನು ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಾದರೆ ಹೊಸನಗರದ ಶಾಸಕ ಸ್ವಾಮಿರಾವ್‌ರವರು ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಅವರ ಕ್ಷೇತ್ರದಲ್ಲಿ ಸುಮಾರು ಒಂದು ಸಾವಿರ ಕುಟುಂಬಗಳು ಸಣ್ಣ ಈಚಲು ಮರಗಳು ಬೆಳೆದುಕೊಂಡಿದ್ದ ಜಾಗವನ್ನು ಆಕ್ರಮಿಸಿಕೊಂಡಿದ್ದಾರೆ ಆ ಜಾಗವನ್ನು ಮೈಸೂರು ಪೇಪರ್ ಮಿಲ್ಸ್‌ನವರಿಗೆ ಕೊಟ್ಟಿದ್ದಾರೆ. ಅವರು ಆ ಈಚಲು ಮರಗಳನ್ನು ಕಡಿದು ಹಾಕುತ್ತಿದ್ದಾರೆ, ಅಲ್ಲಿದ್ದ ಸಂಸಾರಗಳು ಈಗ ರಸ್ತೆಗೆ ಬಂದಿದ್ದಾರೆ. ಈ ನೀತಿ ಪರ್ಕೊಲೇಟ್ ನೀತಿಯಾಗಿ ಕಾರ್ಯಗತವಾಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾನು ಹೇಳುತ್ತೇನೆ. ನಾನು ನಿಮ್ಮ ವ್ಯಕ್ತಿಗತವಾದ ಚಿಂತನೆಯನ್ನು ಕೇಳುತ್ತಿಲ್ಲ. ಅವುಗಳ ಮೆರಿಟ್ಸ್ ಮೇಲೆ ಮಾತನಾಡುತ್ತಿಲ್ಲ. ಈ ಸರ್ಕಾರ ಏನು ಇದೆ ಅದಕ್ಕೆ ಇನ್ನೂ ಒಂದು ನೀತಿಯ ನೆಲೆ ಸಿಕ್ಕಿಲ್ಲ. ಎನ್ನತಕ್ಕಂಥ ಮಾತನ್ನು ನಾನು ಇನ್ನೊಂದು ಸಾರಿ ಸ್ಪಷ್ಟಪಡಿಸಿದೆ ಅಷ್ಟೆ. ಅದನ್ನು ಮಾನ್ಯ ಸಚಿವರು ಯಥೋಚಿತವಾಗಿ ಭಾವಿಸಬಾರದು. ಇನ್ನು ಮಾನ್ಯ ಸದಸ್ಯರಾದಂಥ ಕೆ. ಹೆಚ್. ಪಾಟೀಲ್‌ರವರು ಸರ್ಕಾರಕ್ಕೆ ಮೇವು ವಿಚಾರದಲ್ಲಿ ಒಂದು ಪತ್ರವನ್ನು ಬರೆದಿದ್ದೇನೆಂದು ತಿಳಿಸಿದರು, ಅದೇನೆಂದರೆ ೧,೨೦೦ ರೂಪಾಯಿಗಳಂತೆ ಒಂದು ಟನ್ ಕಾನ್ಸಂಟ್ರೇಟೆಡ್ ಕ್ಯಾಟಲ್ ಫೀಡ್, ಲಾಭ ಮತ್ತು ನಷ್ಟವಿಲ್ಲದೆ ಸಪ್ಲೈ ಮಾಡುವುದಕ್ಕೆ ಸಾಧ್ಯವಿದೆ ಎಂದು. ಆ ಪತ್ರಕ್ಕೆ ಇದುವರೆವಿಗೂ ಉತ್ತರ ಇಲ್ಲ. ಇಂಥಾದ್ದನ್ನು ತಾವು ವಿಚಾರ ಮಾಡಬೇಕು

ಶ್ರೀ ಜೆ. ಹೆಚ್. ಪಟೇಲ್.—ಇವೆಲ್ಲಾ ಗೊತ್ತಿರುವ ವಿಚಾರಗಳು. ನಾನು ಉತ್ತರ ಹೇಳುವಾಗ ಗಂಭೀರವಾಗಿ ಹೇಳಿದ್ದೇನೆ. ನಮ್ಮಲ್ಲಿ ನಿಜವಾಗಿಯೂ ಸೈದ್ಧಾಂತಿಕ ವ್ಯತ್ಯಾಸಗಳು ಇವೆ. ನಮ್ಮ ಮತ್ತು ಅವರ ಮೂಲ ಭೂತ ಚಿಂತನೆಯಲ್ಲಿ ವ್ಯತ್ಯಾಸಗಳು ಇವೆ. ಮಾನ್ಯ ಸದಸ್ಯರು ಹೇಳಿದ ಪರ್ಕ್ಯೂಲೇಟ್ ಬಗ್ಗೆ ನಾನು ನೋಡುತ್ತೇನೆ. ಅದರಲ್ಲಿ ಏನೋ ಅಬ್ಜೆಕ್ಟ್ಸ್ ಇರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಮಾನ್ಯ ಸಚಿವರಾದಂಥ ಜೆ. ಹೆಚ್. ಪಟೇಲ್‌ರವರು ಉತ್ತರ ಕೊಟ್ಟರು. ಆರ್ಗ್ಯುಮೆಂಟ್ ಮಾಡಿ ತಮ್ಮದೆ ಆದ ರೀತಿಯಲ್ಲಿ ಅವರು ಉತ್ತರ ಕೊಟ್ಟರು. ಆದರೆ ಅನೇಕ ಜನ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಈ ಸದನದ ಮುಂದೆ ಇಟ್ಟಿದ್ದಾರೆ. ಆ ವಿಚಾರಗಳಿಗೆ ಮಾನ್ಯ ಸಚಿವರಿಂದ ನೇರವಾದ ಉತ್ತರ ಬಂದಿಲ್ಲ, ರಾಜ್ಯಪಾಲರ ಭಾಷಣದಲ್ಲಿ ಸುಮಾರು ೧೦ ಪುಟಗಳಷ್ಟು ಈ ಬರಗಾಲ ಪರಿಸ್ಥಿತಿಯನ್ನು

ವಿಶ್ಲೇಷಣೆ ಮಾಡಿದ್ದಾರೆ. ಇನ್ನುಳಿದ ಪುಟಗಳಲ್ಲಿ ಸಮಾಜ ಕಲ್ಯಾಣ, ಕೈಗಾರಿಕೆ, ಇನ್ನಿತರ ವಿಷಯಗಳನ್ನು ಸೇರಿಸಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಹರಿಜನ ಮತ್ತು ಗಿರಿಜನರ ಬಗ್ಗೆ ಒಂದು ಮಾತನ್ನು ಸಹ ಎಲ್ಲಿಯೂ ಹೇಳಿಲ್ಲ. ಆ ಜನರ ಸಲುವಾಗಿ ಯಾವ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ ಎನ್ನುವುದು ಸ್ಪಷ್ಟವಾಗಿ ಹೇಳಿಲ್ಲ. ಬ್ಯಾಕ್ ವರ್ಡ್ ಕಮ್ಯೂನಿಟಿಯವರಿಗೆ ೧೦೦ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡುತ್ತೇವೆ ಎನ್ನುವುದನ್ನು ಮಾತ್ರ ಹೇಳಿದ್ದಾರೆ. ಆದರೆ ಹರಿಜನ ಮತ್ತು ಗಿರಿಜನರ ಸಲುವಾಗಿ ಎಷ್ಟು ಹಾಸ್ಟಲ್‌ಗಳನ್ನು ಪ್ರಾರಂಭ ಮಾಡುತ್ತೀರಿ ಎನ್ನುವ ಬಗ್ಗೆ ಹೇಳಿಲ್ಲ. ಹರಿಜನ ಮತ್ತು ಗಿರಿಜನ ಮಕ್ಕಳಿಗೆ ಸ್ಕಾಲರ್‌ಶಿಪ್ಸ್ ಕೊಡುವ ಬಗ್ಗೆ ಪ್ರಸ್ತಾಪವಿಲ್ಲ. ಎರಡನೆಯದಾಗಿ ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳು ಮೆರಿಟ್ಸ್‌ನಲ್ಲಿ ಪಾಸಾದರೆ ಅವರನ್ನು ಡೈರೆಕ್ಟ್ ಆಗಿ ಕ್ಲಾಸ್ ೧ ಮತ್ತು ಕ್ಲಾಸ್ ೨ ಹುದ್ದೆಗೆ ರಿಕ್ರೂಟ್‌ಮೆಂಟ್ ಮಾಡಿಕೊಳ್ಳುತ್ತೇವೆಂದು ಕಳೆದ ಮೂರು ವರ್ಷಗಳಿಂದ ಹೇಳುತ್ತಲೇ ಬಂದಿದ್ದೀರಿ. ಆ ಕೆಲಸವನ್ನೂ ಸಹ ಇದುವರೆಗೂ ಮಾಡಿಲ್ಲ. ಆ ಬಗ್ಗೆ ಕೂಡ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿಲ್ಲ, ಮೂರನೆಯದಾಗಿ, ಡೆವಲಪ್‌ಮೆಂಟ್ ವರ್ಕ್ಸ್‌ನಲ್ಲಿ, ಬರಗಾಲ ಕಾಮಗಾರಿಗಳಲ್ಲಿ ಡಿಸ್‌ಕ್ರಿಮಿನೇಷನ್ ಆಗಿದೆ, ಎಂದು ಅಂಕಿಅಂಶಗಳ ಸಮೇತ ನಾನು ಈ ಸದನದ ಮುಂದೆ ಸ್ಪಷ್ಟವಾಗಿ ಇಟ್ಟೆ. ಆ ಬಗ್ಗೆಯೂ ಪ್ರಸ್ತಾಪ ಮಾಡಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮೌನಂ ಸಮ್ಮತಿ ಲಕ್ಷಣಂ ಎಂದ ಹಾಗೆ ಅದಕ್ಕೆ ಅವರು ಸುಮ್ಮನಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬರೀ ಭಾಷಣ ಮಾಡಿದರೆ ರಾಜ್ಯಪಾಲರ ಭಾಷಣಕ್ಕೆ ಉತ್ತರವಾಗಲಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ರಾಜ್ಯಪಾಲರ ಭಾಷಣದ ಮೇಲೆ ಪ್ರತಿಯೊಂದು ತಾಲ್ಲೂಕಿಗೂ ಸಂಬಂಧಪಟ್ಟ ಹಾಗೆ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಸಂಸದೀಯ ವ್ಯವಹಾರಗಳು ಮಾನ್ಯ ಕೆ. ಹೆಚ್. ಪಾಟೀಲ್‌ರವರಿಗೂ ಗೊತ್ತಿದೆ. ರಾಜ್ಯಪಾಲರ ಭಾಷಣದಲ್ಲಿ ಡಿಟೇಲ್ ಆಗಿ ಹೇಳುವುದಕ್ಕೆ ಆಗುವುದಿಲ್ಲ. ಇನ್ನೂ ಡಿಮ್ಯಾಂಡ್ಸ್ ಬರುತ್ತವೆ. ಆಗ ಬೇಕಾದರೆ ಮಾತನಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹರಿಜನ ಮತ್ತು ಗಿರಿಜನರ ಉದ್ಧಾರಕ್ಕೆ ತಾವು ಯಾವ ನೀತಿಯನ್ನು ಹಾಕಿಕೊಂಡಿದ್ದೀರಿ? ಉದಾಹರಣೆಗೆ ಹೇಳುವುದಾದರೆ ಹಾಸ್ಟಲ್‌ಗಳ ಬಗ್ಗೆ ತೆಗೆದುಕೊಳ್ಳಿ. ಡೆವಲಪ್‌ಮೆಂಟ್ಸ್ ಬಗ್ಗೆ ತೆಗೆದುಕೊಂಡರೆ ಹೈದ್ರಾಬಾದ್ ಕರ್ನಾಟಕ ಭಾಗವನ್ನು ಸಂಪೂರ್ಣವಾಗಿ ತಾವು ನೆಗ್ಲೆಟ್ ಮಾಡಿದ್ದೀರಿ. ಇರಿಗೇಷನ್ ಬಗ್ಗೆ ತೆಗೆದುಕೊಂಡರೆ ಕಾವೇರಿ ಬೇಸಿನ್‌ನ ಎಲ್ಲಾ ಪ್ರಾಜೆಕ್ಟ್‌ಗಳು ಪೂರ್ತಿಯಾಗಬೇಕಾದರೆ ಇನ್ನು ೧೦೦೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಅದೇ ರೀತಿ ಕೃಷ್ಣ ಬೇಸಿನ್ ಪ್ರಾಜೆಕ್ಟ್ ಪೂರ್ಣವಾಗಬೇಕಾದರೆ ಇನ್ನು ೫೦೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ ಎನ್ನುವ ಒಂದು ಪ್ರೋಪೋಸಲ್ಸ್ ಕೊಟ್ಟಿದ್ದೆ. ಆ ಬಗ್ಗೆ ತಾವೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ನಾನು ಇಲ್ಲಿ ಯಾದಗಿರಿ ಮತ್ತು ಗುರುಮಿಠ್‌ಕಲ್ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. ನಿಜವಾಗಿರತಕ್ಕಂಥ ವಿಷಯಗಳ ಮೇಲೆ ತಾವು ಹೇಳಿ. ಹೊಸ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ನಿಮ್ಮದು ಮತ್ತೆ ಮಾನ್ಯ ನಜೀರ್ ಸಾಬ್‌ರವರದು, ಬಸವಣ್ಣಪ್ಪ ನವರದು ಮತ್ತು ಜಾಲಪ್ಪನವರದು ಒಂದು ಸಿದ್ಧಾಂತವಾದರೆ ರಾಮಕೃಷ್ಣ ಹೆಗಡೆಯವರು ಹಿಂದೆ ಕಾಂಗ್ರೆಸ್‌ನಿಂದ ಬಂದವರು, ಅವರ ನಾಯಕತ್ವದಲ್ಲಿ ತಾವು ಇದ್ದೀರಿ. ಆದ್ದರಿಂದ ತಾವು ಹೊಸ ಸಂಪ್ರದಾಯವನ್ನು ನಿರ್ಮಾಣ ಮಾಡುವುದಕ್ಕೆ ಆಗುವುದಿಲ್ಲ. ಒಂದು ವೇಳೆ ಏನಾದರೂ ಬದಲಾವಣೆಯಾಗಿದ್ದರೆ ೧೯೭೨ ರಿಂದ ೧೯೮೩ರವರೆಗೆ ಸ್ವಲ್ಪ ಬದಲಾವಣೆಯಾಗಿದೆ. ಇದನ್ನು ಅವರೂ ಕೂಡ ಒಪ್ಪಿಕೊಳ್ಳುತ್ತಾರೆ. ಆದರೆ ಮಾನ್ಯ ಸದಸ್ಯರಾದಂಥ ಶ್ರೀನಿವಾಸ್‌ರವರು ಹೇಳಿದ ಹಾಗೆ ಈ ಸರ್ಕಾರದ ನೀತಿ ಏನು? ಇವೊತ್ತು ಜಾತಿ ಆಧಾರದ ಮೇಲೆ ಕಸಬುಗಳು. ಕುಂಬಾರನಾಗಿದ್ದರೆ ಆತ ಮಡಿಕೆ ಮಾಡುವುದು. ಚರ್ಮವನ್ನು ಹದ ಮಾಡುವವನು ಚಮ್ಮಾರ. ಕಲ್ಲು ಹೊಡೆಯುವವನಿಗೆ ಒಂದು ಜಾತಿ. ಈ ರೀತಿ ಕಸಬಿನ ಮೇಲೆ ಜಾತಿಯ ನಿರ್ಮಾಣವಾಗಿದೆ. ಸಮಾಜದಲ್ಲಿ ಯಾರು ಏನು ಕೆಲಸವನ್ನು ಮಾಡಬೇಕೋ ಅದೇ ಕೆಲಸವನ್ನು ಮಾಡಬೇಕು. ಅವರನ್ನು ಮೇಲೆ ತರತಕ್ಕಂಥ ಪ್ರಯತ್ನವನ್ನು ಯಾರೂ ಮಾಡುತ್ತಿಲ್ಲ. ಈ ದೃಷ್ಟಿಯಿಂದ ಇಂತಹ ಜನರನ್ನು ಮೇಲಕ್ಕೆತ್ತುವುದಕ್ಕೆ ತಮ್ಮ ರೂಪರೇಷೆಗಳು ಏನು? ಅದನ್ನು ತಾವು ಸ್ವಲ್ಪ ಸ್ಪಷ್ಟವಾಗಿ ಹೇಳಿ?

ಶ್ರೀ ಜೆ. ಹೆಚ್. ಪಟೇಲ್.—ಈಗ ಅವರು ಹೇಳುವುದು ಒಂದು, ರಾಜ್ಯಸರ್ಕಾರ ಅದರ ಶಕ್ತಿ, ಇತಿಮಿತಿಯೊಳಗೆ ಏನು ಮಾಡಬೇಕು ಅದನ್ನು ಮಾಡುತ್ತದೆ. ವಿವರಣೆಗಳನ್ನು ಅನಂತರ ಹೇಳುತ್ತೇನೆ. ಆದರೆ ಜಾತಿ ಪದ್ಧತಿಯ ಬಗ್ಗೆ ಮೂಲತಃ ದೃಷ್ಟಿಕೋನವನ್ನು ಬದಲಾವಣೆ ಮಾಡಬೇಕಾದರೆ, ಇದು ರಾಷ್ಟ್ರೀಯ ಸಮಸ್ಯೆ, ಇದು ಬರೀ ಕರ್ನಾಟಕದಿಂದ ಆಗುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಎಂಟುನೂರು ವರ್ಷಗಳ ಕೆಳಗೇ ಬಸವೇಶ್ವರರು ಇದರ ಬಗ್ಗೆ ಆಂಧೋಲನವನ್ನು ಮಾಡಿದರು. ಇದರಿಂದ ದೇಶದ ಮೇಲೆ ಏನೂ ಪರಿಣಾಮ ಆಗಲಿಲ್ಲ. ಪಶ್ಚಿಮ ಬಂಗಾಳದಲ್ಲಿ ಆರ್ಯಸಮಾಜದವರು ಮಾಡಿದರು, ಆದರೂ ಏನೂ ಆಗಲಿಲ್ಲ. ಇದನ್ನು ಶ್ರೀನಿವಾಸ್‌ರವರು ಹೇಗೆ ವಿಶ್ಲೇಷಣೆ ಮಾಡುತ್ತಾರೋ ನನಗೆ ಗೊತ್ತಿಲ್ಲ. ನಮ್ಮದು ಧರ್ಮ ಪ್ರಧಾನವಾದ ದೇಶ. ರಿಲಿಜಿಯಸ್ ಓರಿಯಂಟೆಡ್ ಕಂಟ್ರಿ.

SRI. B. BASAVALINGAPPA.—Religion is not Dharma, Religion is Matha.

ಶ್ರೀ ಜೆ. ಹೆಚ್. ಪಟೇಲ್.—ಮತ ಎಂದರೆ ಕ್ಯಾಸ್ಟ್. ಮತ ಎಂದರೆ ಜಾತಿ ಮತ, ಕ್ಯಾಸ್ಟ್ ಅಂಡ್ ಕ್ರೀಡ್.

ಶ್ರೀ ಬಿ. ಬಸವಲಿಂಗಪ್ಪ.—ಇದರ ಮೇಲೆ ವ್ಯಾಖ್ಯಾನ ಮಾಡಬೇಕಾದರೆ ಮಾಡಬಹುದು. ರಿಲೀಜಿಯನ್ ಎಂದರೆ ಧರ್ಮ ಎಂದು ಹೇಳುವುದಕ್ಕೆ ಹೋಗಬೇಡಿ. Please don't do that ಧರ್ಮ ಎಂದರೆ ಕರ್ತವ್ಯ, ಡ್ಯೂಟಿ. Religion is Matha.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಪಟೇಲರು ಇದನ್ನು ಒಪ್ಪಿಕೊಳ್ಳುತ್ತಾರೆ ಎಂದು ತಿಳಿಯುತ್ತೇನೆ. ಮನುಷ್ಯರಿಗಾಗಿ ಧರ್ಮ ಇದೆಯೇ ಹೊರತು, ಧರ್ಮಕ್ಕಾಗಿ ಮನುಷ್ಯ ಹುಟ್ಟಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಧರ್ಮವನ್ನು ನೀನು ಉಳಿಸಿದರೆ, ಧರ್ಮ ನಿನ್ನನ್ನು ಉಳಿಸುತ್ತದೆ, ಈ ಮಾತು ಬೇರೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಏನು ಹೇಳುತ್ತೀರಿ ಎಂದು ಜನ ನೋಡುವುದಿಲ್ಲ, ತಾವು ಏನು ಮಾಡುತ್ತೀರಿ ಎಂದು ನೋಡುತ್ತಾರೆ. ನೀವು ಯಾವ ತತ್ವವನ್ನು ರೂಪಿಸಿ, ಅದರ ಆಧಾರದ ಮೇಲೆ ರಾಜ್ಯವನ್ನು ಒಯ್ಯುತ್ತೀರೋ ಇಲ್ಲವೋ ಎಂಬುದನ್ನು ಜನರು ನೋಡುತ್ತಾರೆಯೇ ಹೊರತಾಗಿ ಆ ಸ್ವಾಮಿಗಳು ಈ ರೀತಿ ಹೇಳಿದರು, ಈ ಸ್ವಾಮಿಗಳು ಆ ರೀತಿ ಹೇಳಿದರು ಎಂದು ಯಾರೂ ನೋಡುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಕೆಲವು ವಿವರಗಳಲ್ಲಿ ನಿಮಗೂ ನನಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಮತ್ತೆ ಏತಕ್ಕೆ ತಾವು ಪುನಃ ಪುನಃ ಹೇಳುತ್ತೀರಿ. ಇಲ್ಲಿ ಒಂದು ಉದಾಹರಣೆ ಹೇಳಬೇಕಾಗುತ್ತದೆ. ಅದು ಸಮರ್ಥವಾದ ಉದಾಹರಣೆ ಆಗದೇ ಇರಬಹುದು. ಒಂದು ಹಡಗಿನಲ್ಲಿ ನಾವು ಬೇರೆ ಬೇರೆ ಕೋಣೆಗಳು ಇದ್ದ ಹಾಗೆ. ಅಷ್ಟೇ. ಹಡಗನ್ನು ನಡೆಸುವವರು ಹಡಗನ್ನು ಪಶ್ಚಿಮದ ಕಡೆಗೆ ತೆಗೆದುಕೊಂಡು ಹೋದರೆ, ನಾನು ಒಳಗಡೆ ಕುಳಿತಿದ್ದವನು ಪೂರ್ವಕ್ಕೆ ಹೋಗಬೇಕೆಂದು, ಪೂರ್ವದ ಕಡೆಗೆ ಮುಖ ಹಾಕಿಕೊಂಡು ಕುಳಿತರೆ ಹಡಗು ಯಾವ ಕಡೆಗೆ ಹೋಗುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೆ ಮಾಡತಕ್ಕ ಆಸಕ್ತಿ ಇದೆ. ಮಾಡತಕ್ಕ ಶಕ್ತಿಯನ್ನು ನಿಮ್ಮ ಕೈಯಲ್ಲಿ ಕೊಟ್ಟಿದ್ದರೂ ಸಹ ನೀವು ಅವರು ಒಯ್ದ ಕಡೆಗೇ ಹೋಗುತ್ತೇವೆ ಎಂದರೆ, ನಿಮಗೂ ಬೇರೆಯವರಿಗೂ ವ್ಯತ್ಯಾಸ ಇಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದು ಇವರ ಸ್ಟ್ಯಾಂಡರ್ಡ್ ಉತ್ತರ. ಇವರು ಯಾವ ವಿಷಯ ಹೇಳಿದರೂ ಕೇಂದ್ರ ಸರಕಾರದ ಕಡೆಗೆ ತೋರಿಸುತ್ತಾರೆ. ಒಂದು ಸಾರಿ ನಮ್ಮಲ್ಲಿ ರೈತರು ಮಾನ್ಯ ಪಟೇಲರನ್ನು ನೀವು ಈ ರೀತಿ ಹೇಳಲಿಲ್ಲವೇ ಎಂದು ಕೇಳಿದರು. ಅದಕ್ಕೆ ಪಟೇಲರು, ನಾನು ಹೇಳಿದ್ದು ಹೌದು, ನಾನು ಹಂಗೆ ಹೇಳಬೇಕಾದರೆ ಹಿಂಗೆ ಆಗುತ್ತದೆ ಎಂದು ಗೊತ್ತಿರಲಿಲ್ಲ, ಹಂಗೆ ಹೇಳಿದ್ದರಿಂದಲೇ ಹಿಂಗೆ ಆಯಿತು, ಹಿಂಗೆ ಹೇಳುವುದರಿಂದಲೇ ಹಂಗೆ ಆಗುತ್ತದೆ ಎಂದು ಹೇಳಿದರು. ಕೊನೆಗೆ ಏನು

ಉಪದೇಶ ಹೇಳಿದರು ಎಂದರೆ, ನಾವೂ ನೀವೂ ಸೇರಿ ಕೇಂದ್ರ ಸರಕಾರದ ಮೇಲೆ ಧಾಳಿ ಮಾಡೋಣ, ನಾವು ರೆಡಿಯಾಗಿದ್ದೇವೆ ಎಂದು ಹೇಳಿದರು. ರಾಜ್ಯ ಸರಕಾರ ಇಷ್ಟು ಉಪಯೋಗಕ್ಕೆ ಬರದಿದ್ದ ವಿಚಾರ ಆದಮೇಲೆ, ನೀವು ಏತಕ್ಕೆ ಅದಕ್ಕೆ ಇಷ್ಟೊಂದು ಅಂಟಿಕೊಂಡಿದ್ದೀರಿ. ಬಾಟ್ಲಿಂಗ್ ವ್ಯವಹಾರದ ಮೇಲೆ ಹೈಕೋರ್ಟ್ ಡಿಸಿಷನ್ ಬಂದಿದೆ. ಹೀರೋಗಳ ತರಹ ರಾಜೀನಾಮೆ ಕೊಟ್ಟು ಬಿಸಾಕಿ ಹೋಗುವುದನ್ನು ಬಿಟ್ಟು ಏತಕ್ಕೆ ಅಂಟಿಕೊಂಡಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಶ್ರೀನಿವಾಸ್‌ರವರು ನಮ್ಮ ಮುಖ್ಯಮಂತ್ರಿಗಳಿಗೆ ಹೇಗೆ ಹೇಳಿದರು ಎಂದರೆ ಕ್ಷುದ್ರವಾದ ಈ ಮುಖ್ಯಮಂತ್ರಿ ಪದವಿ ಏತಕ್ಕೆ ಅದನ್ನು ಬಿಟ್ಟುಕೊಡಿ ಎಂದು ಹೇಳುತ್ತಿದ್ದಾರೆ. ಮರದ ಮೇಲಿದ್ದ ಕೋಗಿಲೆ ಬಾಯಿನಲ್ಲಿ ಹಣ್ಣು ಇತ್ತು. ಅದರ ಹತ್ತಿರ ಒಂದು ನರಿ ಬಂದು, ಕೋಗಿಲೆ, ನೀನು ಎಷ್ಟು ಚೆನ್ನಾಗಿ ಹಾಡು ಹೇಳುತ್ತೀಯಾ, ಹಾಡು ಎಂತು, ಅದಕ್ಕೆ ಅದರ ಹಾಡಿನ ಬಗ್ಗೆ ಪ್ರೇಮ ಇರಲಿಲ್ಲ, ಅದರ ಬಾಯಿನಲ್ಲಿರುವ ಹಣ್ಣಿನ ಮೇಲೆ ಕಣ್ಣು ಇತ್ತು. ನಮ್ಮ ಕೋಗಿಲೆಗೆ ಇದು ನರಿ ಎಂದು ಗೊತ್ತಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ರೀತಿ ತಪ್ಪು ಅರ್ಥ ಮಾಡಿಕೊಂಡರೆ ಹೇಗೆ ? ಹಳದೀ ಕನ್ನಡಕ ಹಾಕಿಕೊಂಡರೆ ಹೀಗೆ ಆಗುವುದು. ಸತ್ಯ ಹೇಳಿದರೂ ಕಷ್ಟ. ಒಂದು ಮಾತಿದೆ. I can take care of my enemies, Please save me from my friends ನಮ್ಮ ಮಾತು ಕೇಳಿದ್ದರೆ. ಮಾನ್ಯ ರಾಮಕೃಷ್ಣ ಹೆಗಡೆಯವರ ವ್ಯಕ್ತಿತ್ವ ಇಡೀ ಭಾರತ ದೇಶದಲ್ಲಿ ಹಬ್ಬುತ್ತಿತ್ತು, ಇಂತಹ ಹತ್ತು ಚೀಫ್ ಮಿನಿಸ್ಟರ್ ಪದವಿಗಳು ಅವರನ್ನು ಹುಡುಕಿಕೊಂಡು ಬರುವ ವ್ಯಕ್ತಿತ್ವಕ್ಕೆ ಅವರು ಹೋಗುತ್ತಿದ್ದರು ಅವರು ರಾಜೀನಾಮೆ ಮಾಡಿದ್ದರೆ ಇಂತಹ ವ್ಯಕ್ತಿತ್ವಗಳಿಸುತ್ತಿದ್ದರು. ಅವರು ರಾಜೀನಾಮೆ ಕೊಡುತ್ತಿದ್ದರು, ಆದರೆ ನಿಮ್ಮಂಥವರು ಅಡ್ವೈಸ್ ಮಾಡಿಬಿಟ್ಟಿದ್ದೀರಿ, ನೀವೆಲ್ಲರೂ ಕಳ್ಳರು ಸೇರಿಕೊಂಡು ಅವರು ಅದನ್ನು ಮಾಡುವುದಕ್ಕೆ ಬಿಡಲಿಲ್ಲ.

ಶ್ರೀ ಬಿ. ಎನ್. ಬಚ್ಚೇಗೌಡ.—ಕೆ. ಹೆಚ್. ಶ್ರೀನಿವಾಸ್‌ರವರು, ನೀವೆಲ್ಲಾ ಕಳ್ಳರು ಸೇರಿಕೊಂಡು ಎಂದು ಹೇಳಿದರು. ಆ ವರ್ಡ್ ರೆಕಾರ್ಡ್‌ಗೆ ಹೋಗಿದೆ. ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಎಲ್ಲರೂ ಕಳ್ಳರು ಎಂದು ಹೇಳಬಾರದು.

ಒಬ್ಬ ಮಾನ್ಯ ಸದಸ್ಯರು.—ಅದನ್ನು ವಾಪಸ್ ತೆಗೆದುಕೊಳ್ಳಬೇಕು, ಎಲ್ಲರೂ ಕಳ್ಳರು ಎಂದು ಹೇಳಿದರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ನರಿ ಎಂದು ಹೇಳಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನರಿ ಎಂಬ ಪದಕ್ಕೆ ಪರ್ಯಾಯ ಅರ್ಥ ಕಳ್ಳ ಎಂದು ಆಗುತ್ತದೆ.

ಶ್ರೀ ಎಂ. ರಾಮಪ್ಪ.—ಈ ಕಡೆ ಇದ್ದವರು ನರಿಗಳು ಎಂದು ಹೇಳುತ್ತಾರೆ. ನಮಗೆ ಇನ್ನೂ ಜನತಾ ಪಕ್ಷದ ಕಳ್ಳತನದ ಬುದ್ಧಿ ಬಂದಿಲ್ಲ. ಅದು ನಿಮಗೆ ಇರಬಹುದು.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಅಧ್ಯಕ್ಷರು.—ಮಾನ್ಯ ರಾಮಪ್ಪನವರೇ ಕ್ಲಾರಿಫಿಕೇಷನ್ ಏನಾದರೂ ಇದ್ದರೆ ಕೇಳಿರಿ.

ಶ್ರೀ ಆರ್. ಎನ್. ನಾಯಕ್.—ಸನ್ಮಾನ್ಯ ಅಧ್ಯಕ್ಷರೇ, ಸಭೆ ಬಹಳ ಸಂತೋಷದಲ್ಲಿ ತೇಲಾಡುತ್ತಿದೆ. ಆದರೂ ಸಹ ಸ್ವಲ್ಪ ಸೀರಿಯಸ್‌ನೆಸ್ ಬರಲಿ ಎಂದು ಹೇಳುತ್ತೇನೆ. ಇನ್ನು ರಾಜ್ಯಪಾಲರ ಭಾಷಣದಲ್ಲಿ ಮುಖ್ಯವಾಗಿ ಹಲವಾರು ವಿಷಯಗಳ ಬಗ್ಗೆ ಚರ್ಚೆ ನಡೆದಿದೆ. ಆದರೆ ಉತ್ತರ ಮಾತ್ರ ಸರಿಯಾಗಿ ಸಿಕ್ಕಿಲ್ಲವೆಂದು ಎಂಬ ವಾದ ಇದೆ, ಅದು ನಿಜವೂ ಹೌದು. ನಾನು ಮುಖ್ಯವಾದ ಒಂದು ವಿಚಾರವನ್ನು ಸಭೆಯ ಮುಂದಿಡುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಏನಾಗಿದೆ ಎಂದರೆ ನಿರುದ್ಯೋಗಿಗಳ ಸಮಸ್ಯೆಯ ಬಗ್ಗೆ, ಅದರಲ್ಲೂ ಮುಖ್ಯವಾಗಿ ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯ ಬಗ್ಗೆ ಏನನ್ನೂ ಹೇಳಿದಹಾಗೆ ಇಲ್ಲ. ಮಾನ್ಯ ಮಂತ್ರಿಗಳ ಉತ್ತರ ಸಹ ಈ ಸಮಸ್ಯೆಯನ್ನು ಎದುರಿಸುವುದು ಹೇಗೆ ಎಂದು ಹೇಳಿದಹಾಗೆ ಇಲ್ಲ. ಸಾಧಾರಣವಾಗಿ ನೂರು ವರ್ಷದಲ್ಲಿ ೭೫ ಸಾವಿರ ಉದ್ಯೋಗ ಸಿಗಬೇಕಾಗಿದ್ದ ಒಂದು ಅವಕಾಶವನ್ನು ಈ ಸರಕಾರದವರು ಬಂದ ಮೇಲೆ, ನಿವೃತ್ತಿಯ ವಯಸ್ಸನ್ನು ೫೮ ವರ್ಷಕ್ಕೆ ಹೆಚ್ಚಿಸುವುದರ ಮೂಲಕ ಹಾಳು ಮಾಡಿರುತ್ತಾರೆ. ಇಂತಹ ಒಂದು

ಅವಕಾಶವನ್ನು ಹಾಳು ಮಾಡಿರಬೇಕಾದರೆ, ಈ ವಿದ್ಯಾವಂತ ನಿರುದ್ಯೋಗಿಗಳಿಗೆ ತಾವು ಏನು ಪರಿಹಾರ ಸೂಚಿಸುತ್ತೀರಿ ಎನ್ನುವುದರ ಬಗ್ಗೆ ವಿಚಾರ ಮಾಡಿಲ್ಲ. ನಿವೃತ್ತಿ ವಯಸ್ಸನ್ನು ಮೂರು ವರ್ಷ ಜಾಸ್ತಿ ಮಾಡಿದರೆ ಸರಕಾರಿ ನೌಕರರ ಒಲವು ತಮಗೆ ಸಿಗುತ್ತದೆ ಎಂದು ತಿಳಿದುಕೊಂಡು ಮಾಡಿರುತ್ತೀರೇ ಹೊರತು, ವಿದ್ಯೆಯನ್ನು ಕಲಿತು ತಮ್ಮ ಆಯುಸ್ಸನ್ನು ಕಳೆದುಕೊಳ್ಳುತ್ತಿರುವ ಹೊಸಬರಿಗೆ ಅವಕಾಶ ಮಾಡಿಕೊಡುವ ವಿಚಾರ ತಮಗೆ ಇಲ್ಲ. ರಾಜ್ಯಪಾಲರ ಭಾಷಣದಲ್ಲಿ ಇದರ ಬಗ್ಗೆ ವಿಚಾರ ಮಾಡಿಲ್ಲ. ಒಂದು ಮಾತು ಇದರ ಬಗ್ಗೆ ಇಲ್ಲ. ಚಾಕಚಕ್ಯತೆಯಿಂದ ಉತ್ತರ ಕೊಡುವ ನಮ್ಮ ಹಿರಿಯ ಮಂತ್ರಿಗಳು ಇದಕ್ಕೆ ಏನು ಉತ್ತರ ಕೊಡುತ್ತಾರೋ ನೋಡೋಣ. ?

ಶ್ರೀ ಜೆ. ಹೆಚ್. ಪಟೇಲ್.—ಇದು ರಾಜ್ಯಪಾಲರ ಭಾಷಣದಲ್ಲಿ ಇದೆ. ನಿರುದ್ಯೋಗಿಗಳು, ಅವರು ವಿದ್ಯಾವಂತರೇ ಇರಲಿ, ಹಳ್ಳಿಗಾಡಿನವರೇ ಇರಲಿ. ವಿದ್ಯಾವಂತ ಹಾಗೂ ಅವಿದ್ಯಾವಂತ ನಿರುದ್ಯೋಗಿಗಳಿಗೆ ಯಾವ ತರಹ ಕೆಲಸ ಕೊಡಬೇಕೆನ್ನುವುದರ ಬಗ್ಗೆ ರಾಜ್ಯಪಾಲರ ಭಾಷಣದ ಎರಡನೇ ಪುಟದಲ್ಲಿಯೇ ಇದೆ. ಈ ಪ್ರೋಗ್ರಾಂಗಳ ವಿವರಗಳ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಾರೆ ಎಂದು ಕಾಣುತ್ತದೆ. ಇದರ ಬಗ್ಗೆ ಸರಕಾರ ಗಮನ ಕೊಟ್ಟಿದೆ. ನಮ್ಮ ಬಜೆಟ್‌ನಲ್ಲಿ ತಾವು ಇದನ್ನು ಕಾಣುತ್ತೀರಿ.

ಶ್ರೀ ಆರ್. ಎನ್. ನಾಯಕ್.—೭೫ ಸಾವಿರ ಜನರಿಗೆ ಕೆಲಸ ಸಿಗುವ ಅವಕಾಶ ಮೂರು ವರ್ಷದಲ್ಲಿ ಕಳೆದು ಹಾಕಿದಿರಿ. ಅದನ್ನು ಕಳೆದು ಹಾಕಬೇಕಾದರೆ, ಇದಕ್ಕೆ ಏನು ಮಾಡಬೇಕು ಎಂಬುದು ನಿಮಗೆ ಮೊದಲೇ ಇರಬೇಕಲ್ಲ. ಇದನ್ನು ಗಮನದಲ್ಲಿ ಇಟ್ಟುಕೊಂಡು ಏನಾದರೂ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ರಿಟೈರ್‌ಮೆಂಟ್ ಏಜನ್ನು ಜಾಸ್ತಿ ಮಾಡಿದ ತಕ್ಷಣ ೫೫ ರಿಂದ ೫೮ ಕ್ಕೆ ಏರಿಸಿದ ತಕ್ಷಣ, ಎಂಪ್ಲಾಯಿಮೆಂಟ್ ಅಪೋರ್ಚುನಿಟಿ ಬ್ಲಾಕ್ ಆಯಿತು ಎಂದು ಅಲ್ಲ. ಸ್ವಲ್ಪ ಮಟ್ಟಿಗೆ ಆಗಿರಬಹುದು. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇದಕ್ಕೆ ಪೂರಕವಾದ ವಾದಗಳೂ ಇವೆ, ೫೮ ಕ್ಕೆ ಏತಕ್ಕೆ ಮಾಡಿದರು, ಎಂಬುದರ ಬಗ್ಗೆ ವಾದ ಇದೆ. ಇದು ಕೇಂದ್ರ ಸರಕಾರ ಮಾಡಿತು ಆ ಸರಕಾರ ಮಾಡಿತು, ಈ ಸರಕಾರ ಮಾಡಿತು ಎಂದು ನಾನು ಹೇಳುವುದಿಲ್ಲ, ಅದಕ್ಕೆ ಪೂರಕವಾದ ವಾದಗಳು ಇವೆ. ಅದರ ವಿಮರ್ಶೆಯನ್ನು ಇಲ್ಲಿ ಮಾಡುವುದಿಲ್ಲ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸಚಿವರಾದ ಪಟೇಲರು ಅನೇಕ ದಂತಕಥೆಗಳು, ಉಪಕಥೆಗಳನ್ನು ಸೇರಿಸಿಕೊಂಡು ಬಹಳ ಚಲೋ ಉತ್ತರ ಕೊಟ್ಟಿದ್ದಾರೆ. ಆದರೂ ಅನೇಕ ಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದಂತಹ ವಿಚಾರಗಳಿಗೆ ಸರಿಯಾದ ಉತ್ತರ ಬರಲಿಲ್ಲ. ಗೂಂಡಾ ಕಾನೂನು ಬಂದಂಥ ವಿಚಾರದಲ್ಲಿ ತಾವು ಹೇಳಿದಿರಿ. ಇದು ತಮ್ಮ ಕಾಲದಲ್ಲಿ ಬಂದಂಥ ಮಳೆ, ಅದರ ಹನಿಗಳು ಮಾತ್ರ ಈಗ ಇಲ್ಲಿ ಬೀಳುತ್ತಿವೆ. ಎಂದು ಹೇಳಿದಿರಿ. ಈಗ ಐದಾರು ತಿಂಗಳಿಂದ ಹನಿ ಅಲ್ಲ ಜಡಿಮಳೆಯೇ ಬರುತ್ತಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟವಾಳ ಉಡುಪಿ, ಉಳ್ಳಾಲ, ಕುಕ್ಕುಡೆ ಮುಂತಾದ ಕಡೆಗಳಲ್ಲಿ ಗಂಭೀರವಾದ ದರೋಡೆ ಆಗಿದೆ. ಪರಿಸ್ಥಿತಿ ಬಹಳ ಗಂಭೀರವಾಗಿದೆ, ಕಾನೂನು ಸುವ್ಯವಸ್ಥೆ ಸರಿಯಾಗಿಲ್ಲ. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ತಾವು ಕವನವನ್ನು ಓದಿದ್ದೀರಿ, ನಾನು ಬಹಳ ಸಂತೋಷ ಪಟ್ಟೆ ತಮ್ಮ ಕನ್ನಡ ಭಾಷೆ ನಿಜವಾಗಿಯೂ ನನಗೆ ಮೆಚ್ಚಿಗೆಯಾಯಿತು. ಆದರೆ ಒಂದು ಮಾತು ಹೇಳುವುದರಿಂದ ತಾವು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ನಾನು ಭಾವಿಸಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಗೂಂಡಾಗಿರಿ ಇರುವುದಕ್ಕೂ, ಕಾಂಗ್ರೆಸ್ ಪಾರ್ಟಿ ಮೆಜಾರಿಟಿ ಬರುವುದಕ್ಕೂ ಏನಾದರೂ ಸಂಬಂಧ ಇದೆಯೇ ?

ಶ್ರೀ ಎಂ. ರಾಮಪ್ಪ.—ಇಂತಹ ಹಾರಿಕೆಯ ಮಾತುಗಳಿಂದ ನಮಗೆ ಸಮಾಧಾನವಾಗುವುದಿಲ್ಲ, ತಾವು ಸರಿಯಾದ ರೀತಿಯಲ್ಲಿ ಉತ್ತರ ಕೊಡಬೇಕು. ನೀವು ಸತ್ಯಾಂಶಗಳನ್ನು ಮುಚ್ಚಿಡುತ್ತಿದ್ದೀರಿ. ನಿಮ್ಮಲ್ಲಿ ಸರಿಯಾದ ಚಿಂತನೆ ಇದ್ದರೆ ಹೇಳಿ, ಸತ್ಯಾಂಶಗಳನ್ನು ಮುಚ್ಚಿಡುತ್ತಿದ್ದೀರಿ.

ಶ್ರೀ ಆರ್. ಎನ್. ನಾಯಕ್.—ಬೆಂಗಳೂರಿನಲ್ಲಿ ದಿನವೂ ಕೊಲೆಗಳಾಗುತ್ತಿವೆ, ದರೋಡೆಗಳಾಗುತ್ತಿವೆ, ಇದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಜಿ. ನಾರಾಯಣ ಕುಮಾರ್.—"ಕುಂಬಳ ಕಾಯಿ ಕಳ್ಳ ಎಂದರೆ, ಹೆಗಲು ಮುಟ್ಟಿ ನೋಡಿಕೊಂಡರು" ಎಂದ ಹಾಗೆ ಆಯಿತು. ಮಾನ್ಯ ಜೆ. ಹೆಚ್. ಪಟೇಲರು ಚೆನ್ನಾಗಿ ಅರಿತು ನುರಿತವರು. ನಿಜವಾಗಿಯೂ ಕನ್ನಡದಲ್ಲಿ ಸೊಗಸಾದಂತಹ ಮಾಧುರ್ಯದ ಮಾತುಗಳಿಂದ ಉತ್ತರ ಕೊಟ್ಟಿದ್ದಾರೆ. ಅವರ ಉತ್ತರ ಬಹಳ ಸೊಗಸಾದ ಉತರ. ಮಾನ್ಯ ಪಟೇಲರು ಲೋಕಸಭೆಯಲ್ಲಿಯೂ ಕೂಡ ಕನ್ನಡದಲ್ಲಿಯೇ ಮಾತನಾಡಿದಂತಹ ಗಣ್ಯ ವ್ಯಕ್ತಿ. ನಾನು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆ. ದೂರದರ್ಶನದಲ್ಲಿ ಕನ್ನಡದ ಅಭಿಮಾನ ಇರತಕ್ಕಂಥ, ಕನ್ನಡದ ಗುಮಾಸ್ತರುಗಳನ್ನು ಮತ್ತು ಕನ್ನಡದ ಅಧಿಕಾರಿಗಳನ್ನು ಬೇರೆ ಬೇರೆ ಕಡೆ ವರ್ಗಾವಣೆ ಮಾಡುತ್ತಿದ್ದಾರೆ, ಕನ್ನಡೇತರ ನಿರ್ದೇಶಕರನ್ನು ಅಲ್ಲಿಗೆ ಹಾಕಿದ್ದಾರೆ. ಇದೇ ರೀತಿ ಒಂದು ಸಾರಿ ತಮಿಳುನಾಡಿನಲ್ಲಿ ತಮಿಳೇತರ ಅಧಿಕಾರಿಯನ್ನು ಹಾಕಿದ್ದರು. ಆಗ ಇವರಿಗೆ ತಮಿಳು ಅಭಿಮಾನ ಇಲ್ಲದೇ ಇರುವುದನ್ನು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿದ್ದರಿಂದ ಅಲ್ಲಿಗೆ ಬೇರೆ ತಮಿಳು ಬಲ್ಲ ಅಧಿಕಾರಿಗಳನ್ನು ಹಾಕಿದರು. ಇದೇ ರೀತಿ ಕರ್ನಾಟಕದಲ್ಲೂ ದೂರದರ್ಶನ ನಿರ್ದೇಶಕರನ್ನು ಬದಲಾಯಿಸಿ, ಕನ್ನಡದ ಅಭಿಮಾನ ಇರತಕ್ಕಂಥ ನಿರ್ದೇಶಕರನ್ನು ಹಾಕಬೇಕು. ಹಾಗೆಯೇ ಕನ್ನಡದ ಗುಮಾಸ್ತರನ್ನು ಬೇರೆ ಬೇರೆ ಕಡೆ ವರ್ಗಾವಣೆ ಮಾಡುವ ಬಗ್ಗೆ, ತಡೆಗಟ್ಟಲು ಏನಾದರೂ ಮಾಡಬೇಕು. ಅನಂತರ ನನ್ನ ಪ್ರಶ್ನಾವಳಿಯಲ್ಲಿ, ವಿರೋಧಪಕ್ಷದ ನಾಯಕರಾದ ಮಾನ್ಯ ಬಂಗಾರಪ್ಪನವರ ಬಗ್ಗೆ ವಾರಪತ್ರಿಕೆಯಲ್ಲಿ ಭ್ರಷ್ಟಾಚಾರದ ಹೊರೆ ಇತ್ತು. ಅದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೆ. ಇದರ ಬಗ್ಗೆ ಉತ್ತರ ಹೇಳಿದರೋ ಇಲ್ಲವೋ ಗೊತ್ತಾಗಲಿಲ್ಲ, ಆ ಮೇಲೆ ನಿನ್ನೆ ಮಾತನಾಡಿದ ಮಾನ್ಯ ಉಮರಬ್ಬರವರ ಭಾಷಣ ಪತ್ರಿಕೆಯಲ್ಲಿ ಬಂದಿದೆ. ನನಗೆ ಅದನ್ನು ಓದಿ ಆನಂದವಾಯಿತು. ಅವರು ಮಾತನಾಡುವ ವೇಳೆಯಲ್ಲಿ "ಚೆಲುವ ಕನ್ನಡ ನಾಡು" ಪುಸ್ತಕದ ಹಾಳೆಯನ್ನು ಹರಿದು ಹಾಕಿದ್ದಾರೆ, ಇದರ ಬಗ್ಗೆ ಉತ್ತರ ಹೇಳಲಿಲ್ಲ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ಮೊದಲನೆಯದಾಗಿ, ದೂರದರ್ಶನದಲ್ಲಿ ಕನ್ನಡಿಗರಿಗೆ ಆಗತಕ್ಕಂಥ ಅಪಚಾರವನ್ನು ತಡೆಹಿಡಿಯಬೇಕೆಂಬುದನ್ನು ರಾಜ್ಯ ಸರ್ಕಾರ ಒಪ್ಪಿದೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯುವುದು ನಮ್ಮ ಕರ್ತವ್ಯ. ಎರಡನೆಯದಾಗಿ ಮಾನ್ಯ ಬಂಗಾರಪ್ಪನವರ ಬಗ್ಗೆ, ಅವರ ವೈಯಕ್ತಿಕ ಆಸ್ತಿ ಪಾಸ್ತಿಗಳ ವಿಚಾರದ ಬಗ್ಗೆ ಉತ್ತರ ಕೊಡುವ ಇಚ್ಛೆ ನನಗೆ ಇಲ್ಲ, ಅಲ್ಲದೆ ಆ ರೀತಿ ಕೊಡಲೂ ಬಾರದು. ಅದು ಅವರ ಸ್ವಂತದ್ದು. ಇನ್ನು ಮಾನ್ಯ ಉಮರಬ್ಬರವರ ಭಾಷಣ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿ ನನಗೂ ಸಂತೋಷವಾಯಿತು. ಅದು ಪೂರ್ಣ ಸತ್ಯವೋ ಅಲ್ಲವೋ ಅದರ ಮೆರಿಟ್ಸ್ ಬಗ್ಗೆ ನಾನು ಹೋಗುವುದಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ನಿನ್ನೆಯ ದಿವಸ ಕನ್ನಡಕ್ಕೆ ಅಪಮಾನ ಮಾಡಿ ಕನ್ನಡದ ಪುಸ್ತಕವನ್ನು ಹರಿದು ಹಾಕಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು ಬೂಸಾ ಸಾಹಿತ್ಯವೆಂದು ಹೇಳಿ ಅಧಿಕಾರ ಕಳೆದುಕೊಂಡರು......

ಅಧ್ಯಕ್ಷರು.—ಮಾನ್ಯ ನಾರಾಯಣ ಕುಮಾರ್ ಅವರೇ, ನೀವು ಆ ರೀತಿ ಮಾತನಾಡಬಾರದು, ದಯಮಾಡಿ ಕುಳಿತುಕೊಳ್ಳಿ. ಮುಂದೆ ನೀವು ಏನು ಮಾತನಾಡಿದರೂ, ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ನಾರಾಯಣ ಕುಮಾರ್ ಅವರಿಗೆ ಇರತಕ್ಕ ಕನ್ನಡ ಪ್ರೇಮಕ್ಕೆ ನಾನು ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ನನ್ನ ಬಗ್ಗೆ ಹೇಳಿಂತ್ತಾ, ಸಾಹಿತ್ಯವನ್ನು ಬೂಸಾ ಎಂದು ಹೇಳಿ ಅಧಿಕಾರ ಕಳೆದುಕೊಂಡರು ಎಂದು ಹೇಳಿದರು. ಸತ್ಯಕ್ಕೋಸ್ಕರ, ನೀತಿಗೋಸ್ಕರ ಅಧಿಕಾರ ಕಳೆದುಕೊಂಡಿದ್ದೇನೆ. ಬೂಸಾ ಸಾಹಿತ್ಯ ಬರೆದು, ಜನಗಳಲ್ಲಿ ಇರತಕ್ಕ ಬುದ್ಧಿಯನ್ನು ಅಪಹರಿಸಿಬಿಟ್ಟು, ಸುಖವಾಗಿ ತಿಂದು, ತೇಗಿ, ಕೊಬ್ಬು ಬೆಳೆಸಿಕೊಂಡು, ಸಮಾಜದಲ್ಲಿ ಬೆಳೆಯುತ್ತಿದ್ದಾರೆ, ಅಂತಹವರನ್ನು ನಾನು ಬಿಡುವುದಿಲ್ಲ. ಕೆಲವು ಜನ ಬೂಸಾ ಸಾಹಿತ್ಯ ಬರೆದು, ಕೊಬ್ಬು ಬೆಳೆಸಿಕೊಂಡು ಸಮಾಜದಲ್ಲಿದ್ದಾರೆ. ಅದಕ್ಕೆ ಸಾಹಿತ್ಯ ಹೇಗಿರಬೇಕೆಂದು ಹೇಳಿದ್ದೇನೆ.

ಸಮಾಜ ಬದಲಾವಣೆಯಾಗಬೇಕು. ಜಾತೀಯ ಭಾವನೆ ಮಾಯವಾಗಬೇಕು. ಎಲ್ಲರೂ ನಮ್ಮ ಅಣ್ಣತಮ್ಮಂದಿರಂತೆ ಬೆಳೆಯತಕ್ಕ ಸಮಾಜ ಸೃಷ್ಟಿಯಾಗಬೇಕು. ಅದು ಬಿಟ್ಟು, ಜಾತಿ, ಭೇದ ಮೇಲು ಕೀಳು ಎಂದು ಹೇಳುವುದು ಬೂಸಾ ಸಾಹಿತ್ಯ. ಇದನ್ನು ಸಾವಿರ ಸಾರಿ ಹೇಳುತ್ತೇನೆ. ಸಾಹಿತ್ಯದಲ್ಲಿ ಎಂತಹ ವಿಷಯ ಇರಬೇಕು, ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಕನ್ನಡ ಭಾಷೆಗಾಗಿ ನನ್ನ ವಿರೋಧ ಇಲ್ಲ. ನಾನೂ ಕೂಡ ಕನ್ನಡದವನು, ಕನ್ನಡ ಸಾಹಿತ್ಯಕ್ಕೆ ವಿರೋಧವಿಲ್ಲ. ಬೂಸಾ ವಿಷಯಗಳನ್ನು ಆಧಾರವಾಗಿಟ್ಟುಕೊಂಡು ಬರತಕ್ಕಂಥ ವಿಚಾರಗಳ ಬಗ್ಗೆ ನಾನು ಹೇಳಿದ್ದೇನೆ. ಸಮಾಜವನ್ನು ಹಾಳು ಮಾಡತಕ್ಕಂಥ ವಿಷಯಗಳ ಸಾಹಿತ್ಯ ಏನಿದೆ ಅದೇ ಬೂಸಾ ಸಾಹಿತ್ಯ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಬಂಗಾರಪ್ಪನವರು ಅವತ್ತು ಏನು ಅಭಿಪ್ರಾಯ ಪಟ್ಟರೋ ಅದು ಜನರಿಗೆ ಸಿಟ್ಟು ಬಂದು, ಕಹಿ ವಾತಾವರಣ ಬಂತು. ಮಾನ್ಯ ಬಸವಲಿಂಗಪ್ಪನವರಿಗೆ ನೆಮ್ಮದಿ ತರುವಂತಹ ಒಂದು ಮಾತನ್ನು ಅವರ ಗಮನಕ್ಕೆ ತರುತ್ತೇನೆ. ನೀವು ಪಟ್ಟಂಥ ಅಭಿಪ್ರಾಯವನ್ನು ಸತ್ಯವೆಂದು ಒಪ್ಪಿಕೊಂಡವರೂ ಇದ್ದಾರೆ. ಆದ್ದರಿಂದ ತಾವು ಅಧಿಕಾರ ಕಳೆದುಕೊಂಡಿದ್ದೀರಿ ಎಂದು ವ್ಯಥೆಪಡುವುದು ಬೇಡವೆಂದು ಭಾವಿಸುತ್ತೇನೆ.

12-00 NOON:

SRI MOHAMED LIAQUDDIN BURANUDDIN (Bidar).—Sir, Hon'ble Minister Sri J.H. Patel in his reply has not clarified the position regarding the Minority Development Corporation. A share capital of Rs. 1 crore was set up in this institution for the developmental activities of minorities in the State. In my speech I have referred to a High Court ruling in which the Court has held that 'Konkani' were also considered as minority group. In view this I would like to know whether only the religious minorities are eligible for the benefits from the Minority Development Corporation or whether linguisitic minorities would also be eligible for the benefits from this Corporation. If that judgment is taken into account tomorrow, Gujarathis, Marathis and other minorites will also claim the benefits. I would like to know the mind of the Government on this point whether it is meant only for religious minorities or it applies even to lingutistic minorities also.

Secondly, regarding Development of Urdu Language in the State. The Department concerned has not taken any effective steps to promote Urdu Langauge in the State. I would like to know what steps have been taken to promote Urdu in the State.

Thirdly, we are facing the drought for the last three consecutive year. This time it is very severe. Whether Government proposes to have a master plan to fight the drought in the State which we are facing year after year? I want to know what the Think Tank has contributed its efforts or suggestions to combat the drought. Whether the Think Tank is working or whether it has dried up-we don't know.

ಶ್ರೀ ಜಿ. ನಾರಾಯಣಕುಮಾರ್.—ನಿನ್ನೆ ದಿವಸ ನಾನು ಮಂಗಳೂರಿಗೆ ಹೋಗಿದ್ದೆ. ಸಹಸ್ರಾರು ಮೈಲಿಯಿಂದ ಬಂದಿರತಕ್ಕಂಥ ಪೋಪ್‌ರವರು, ಕನ್ನಡನಾಡಿನ ೪ ಕೋಟಿ ಜನತೆ ಏನು ಇದ್ದಾರೆ ಅವರ ಬಗ್ಗೆ ಕನ್ನಡದಲ್ಲೇ ಮಾತನಾಡಿದರು. ಅಂಥಾದ್ದರಲ್ಲಿ ದೇಶದ ಶಾಸಕರಾಗಿರುವ ಇವರು, ಕನ್ನಡದಲ್ಲಿ

ಮಾತನಾಡದೇ ಇಂಗ್ಲೀಷನಲ್ಲೇ ಮಾತನಾಡಿದರು. ಅವರಿಗೆ ಕನ್ನಡದಲ್ಲಿ ಪ್ರೇಮ ಇದ್ದರೆ, ಅವರ ಆತ್ಮ ಈ ಬಗ್ಗೆ ಒಪ್ಪಿದರೆ ನನಗೆ ಸಂತೋಷ. ಅವರು ಇನ್ನು ಮುಂದಾದರೂ ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡಲಿ.

ಅಧ್ಯಕ್ಷರು.--ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ರಾಮಪ್ಪ —ಅವರಿಗೆ ಹೆಚ್ಚು ಕಡಿಮೆ ಕನ್ನಡ ಬರುವುದಿಲ್ಲ. ಮಾನ್ಯ ಅಧ್ಯಕ್ಷರಿಗೆ ಹೇಳಬಯಸುತ್ತೇನೆ. ಸ್ವಾಮಿ, ನನಗೆ ೫೪ ವರ್ಷ ಕನ್ನಡ ಬರೆಯಲಿಕ್ಕೆ ಬರುವುದಿಲ್ಲ. ನಾನು ಕನ್ನಡ ಕಲಿಯಬೇಕಾದರೆ ಶ್ರೀ ಜಿ. ನಾರಾಯಣಕುಮಾರ್‌ರವರ ಹತ್ತಿರ ಹೇಳಿಸಿಕೊಂಡರೆ ನಾನು ಮುಗ್ಗರಿಸ ಬೇಕಾಗುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ಕನ್ನಡ ಕಲಿತರೆ ನೀವು ಅಧಿಕಾರಕ್ಕೆ ಬರಬಹುದು ಇಲ್ಲದೇ ಹೋದರೆ ರಾಜೀನಾಮೆ ಕೊಟ್ಟು ಹೋಗುವ ಕಾಲ ಅತಿ ಶೀಘ್ರವಾಗಿ ಬರುತ್ತದೆ, ಬಹು ದೂರ ಇಲ್ಲ.

ಶ್ರೀ. ಜೆ.ಹೆಚ್. ಪಟೇಲ್.— ಈ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ನಾವು ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆ ಕೆಲಸ ಪ್ರಾರಂಭವಾಗಿದೆ. ಮಾನ್ಯ ಸದಸ್ಯರು ಇನ್ನು ಉರ್ದು ಭಾಷೆಯ ಬೆಳವಣಿಗೆ ಬಗ್ಗೆ ಪ್ರಸ್ತಾಪ ಇಲ್ಲ ಎಂದು ಹೇಳಿದರು. ಪ್ರತಿವರ್ಷವೂ ಈ ಉರ್ದುಭಾಷೆಯನ್ನು ಬೆಳೆಸುವುದಕ್ಕೆ ನಮ್ಮ ಸರ್ಕಾರ ಒಂದು ನಿಲುವನ್ನು ತೆಗೆದು ಕೊಂಡಿದೆ. ಇದು ಒಂದು ಉತ್ಕೃಷ್ಟವಾದ ಭಾಷೆ. ಅಲ್ಲಲ್ಲಿ ಸ್ಕೂಲುಗಳನ್ನೂ ಸಹ ನಾವು ತೆಗೆಯುತ್ತಾ ಇದ್ದೇವೆ. ಉರ್ದು ಸ್ಕೂಲುಗಳಿಗೆ ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ನಮ್ಮ ಸರ್ಕಾರ ಈಗಾಗಲೇ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇನ್ನು ಲಿಂಗ್ವಿಸ್ಟಿಕ್ ಮೈನಾರಿಟೀಸ್ ಬಗ್ಗೆ ಹೇಳುವುದಾದರೆ ಇದು ಒಂದು ಗೊಂದಲಮಯವಾದ ವಿಚಾರ. ಸರ್ಕಾರದವರು ಅವರಿಗೇನಾದರು ಸೌಲಭ್ಯವನ್ನು ಕೊಡಬೇಕೆಂದು ಆ ಜನರನ್ನು ಗುರುತಿಸಿದ್ದಾರೆ. ಆದರೂ ಸಹ ಮೈನಾರಿಟೀಸ್‌ನವರು ಬ್ಯಾಕವರ್ಡ್ ಕ್ಲಾಸ್‌ಗೆ ಯಾವುದಾದರೂ ಒಂದು ಕಾರಣದಿಂದ ಬಂದು, ಅಲ್ಲಿ ಸೇರಿಕೊಂಡು ಆ ಸೌಲಭ್ಯ ಗಳನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಹೀಗಾಗಿ ಈ ಲಿಂಗ್ವಿಸ್ಟಿಕ್ ಮೈನಾರಿಟೀಸ್‌ನವರಿಗೆ ಕೊನೆಗೆ ಏನೂ ಮಾಡುವುದಕ್ಕಾಗುವುದಿಲ್ಲ. ನನ್ನ ವಿಚಾರ ಹೇಳುವುದಾದರೆ ಈ ಲಿಂಗ್ವಿಸ್ಟಿಕ್ ಮೈನಾರಿ ಟೀಸ್ ಬಗ್ಗೆ ಒಂದು ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡಬೇಕೆಂದು ಯೋಚನೆ ಮಾಡಿದ್ದೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಲಿಂಗ್ವಿಸ್ಟಿಕ್ ಮೈನಾರಿಟೀಸ್‌ನವರಿಗೆ ನಮಗೂ ಸಹ ಸೌಲಭ್ಯಗಳನ್ನು ಕೊಡಬೇಕು ಎಂದು ಕೇಳಿದ್ದಾರೆ. ಈಗ ಇದರ ಬಗ್ಗೆ ಹೈಕೋರ್ಟು ತೀರ್ಪು ಏನು ಇದೆ ಅದನ್ನು ಅಪ್ಪೀಲ ಮಾಡಬೇಕು. ಇಲ್ಲದೇ ಹೋದರೆ ಬೇರೆ ಏನಾದರೂ ಮಾಡಿದರೆ ಅದರಲ್ಲಿ ಸಿಂಧಿ ಮಾರ್ವಾಡಿ ಜನಗಳು ಬಂದು ಬಿಡುತ್ತಾರೆ. ಅವರು ಬಂದುಬಿಟ್ಟರೆ ಎಲ್ಲಾ ಸೌಲಭ್ಯಗಳೂ ಹೊರಟು ಹೋಗುತ್ತವೆ.

ಶ್ರೀ ಜೆ.ಹೆಚ್. ಪಟೇಲ್.— ನೀವು ಹೇಳಿದ ತತ್ವ ಇದಕ್ಕೆ ಅನ್ವಯಿಸುವುದಿಲ್ಲ.

ಶ್ರೀ ಬಿ.ಎ. ಉಮರಬ್ಬ.--ಮಾನ್ಯ ಅಧ್ಯಕ್ಷರೇ, ತಮ್ಮ ಸಮ್ಮುಖದಲ್ಲಿ ಅನೇಕ ವಿಚಾರಗಳನ್ನು ತಂದಾಗಿದೆ. ಅದರಲ್ಲಿ ಒಂದು ಗಂಭೀರವಾದಂಥ ವಿಚಾರ, ಕನ್ನಡ ಸಾಹಿತ್ಯದ ಬಗ್ಗೆ. ಮಾನ್ಯ ರಾಜ್ಯ ಪಾಲರು ತಮ್ಮ ಭಾಷಣದಲ್ಲಿ ಕನ್ನಡದ ಬಗ್ಗೆ ತಮ್ಮ ಅಪಾರ ಪ್ರೇಮ ಹಾಗೂ ಕನ್ನಡದ ನೆರಳಿನಲ್ಲಿರುವ ಛಾಯೆಯನ್ನು ಪ್ರತಿಬಿಂಬಿಸಿದ್ದಾರೆ. ಅದರ ಬಗ್ಗೆ ನಾವು ಈಗಾಗಲೇ ವಿವರವಾಗಿ ಚರ್ಚಿಸಿದ್ದೇವೆ. ಅದಕ್ಕೆ ನಾನು ಉತ್ತರ ಬಯಸಿದ ಹಾಗೆ ಮಾನ್ಯ ಸಚಿವರಿಂದ ಬರಲಿಲ್ಲ.

ಅಧ್ಯಕ್ಷರು.--ತಾವು ಅದರ ಬಗ್ಗೆ ವಿವರಣೆಯನ್ನು ನೇರವಾಗಿ ಕೇಳಿ ?

ಶ್ರೀ ಬಿ.ಎ. ಉಮರಬ್ಬ.-- ಅವರು ರಾಜೀನಾಮೆ ಕೇಳಿದ್ದಾರೆ, ಆದುದರಿಂದ ಇವೆಲ್ಲವನ್ನೂ ವಿವರಿಸಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೆ ಈ ಚೆಲುವ ಕನ್ನಡ ನಾಡಿನ ಪುಸ್ತಕದ ಮುನ್ನುಡಿಯಲ್ಲಿ ಹಾಗೂ ಅದರಲ್ಲಿ ಬರೆದಿರುವ ವಿಷಯಗಳನ್ನು ವಿವರಿಸಿದ್ದೇನೆ. ಒಬ್ಬನ ಮೈಮೇಲೆ ಬಟ್ಟೆ ಹರಿದು ಹೋಗಿದೆ ಎನ್ನುವುದು ಮುಖ್ಯವಲ್ಲ. ಅದರಲ್ಲಿ ಯಾವ ಭಾಗ ಹರಿದಿದೆ ಎನ್ನುವುದು ಮುಖ್ಯ. ಮಾನ್ಯ ಜಿ. ನಾರಾಯಣಕುಮಾರ್‌ರವರು ನಮ್ಮ ಸಹ ಸದಸ್ಯರು ಬಹಳ ಕನ್ನಡ ಪ್ರೇಮಿ ಗಳು. ನಾವೂ ಸಹ ಕನ್ನಡ ಪ್ರೇಮಿಗಳೇ. ಆದುದರಿಂದ ಈ ಕನ್ನಡದ ಪ್ರೇಮಿಗಳ ಬಗ್ಗೆ ಈ ಪುಸ್ತಕದಲ್ಲಿ ಏನು ಬರೆದಿದ್ದಾರೆ ಎನ್ನುವುದನ್ನು ಉಲ್ಲೇಖ ಮಾಡಿದ್ದೇನೆ. ಈ ಕನ್ನಡ ಪ್ರೇಮಿಗಳ ಬಗ್ಗೆ ಸರ್ವಾಂಗ

ಸುಂದರವಾದ ಈ ಪುಸ್ತಕವನ್ನು ಅವರು ಏನು ಹೊರತಂದಿದ್ದಾರೆ ಆ ಬಗ್ಗೆ ನಮ್ಮ ಅನುಭವವನ್ನೂ ಸಹ ವ್ಯಕ್ತಪಡಿಸಿದ್ದೇವೆ. ಆದರೆ ಈ ಪುಸ್ತಕದ ಸೌಂದರ್ಯದ ಬಗ್ಗೆ ನಾನು ಆಕರ್ಷಿತನಾಗಿದ್ದೇನೆ. ಆದರೆ ಅದರ ಶೀಲದ ಬಗ್ಗೆ, ಆದರ ಕಳಂಕದ ಬಗ್ಗೆ ನಾನು ಉದ್ರೇಕಗೊಳ್ಳಬೇಕಾಯಿತು. ಈ ಸಂದರ್ಭದಲ್ಲಿ ನಾನು ಶ್ರೀ ಜಿ. ನಾರಾಯಣಕುಮಾರ್‌ರವರಿಗೆ ನೇರವಾದ ಪ್ರಶ್ನೆಯನ್ನು ಕೇಳುತ್ತೇನೆ; ಅವರು ಈ ಪುಸ್ತಕವನ್ನು ಪೂರ್ತಿ ಓದಿದ್ದೀರೆಯೇ ? ಈ ಪುಸ್ತಕದ ಪ್ರತಿಯೊಂದು ಸರಣಿಯನ್ನೂ ಓದಿದ್ದೀರಾ?

ಅಧ್ಯಕ್ಷರು.—ತಾವು ಇದರ ಬಗ್ಗೆ ಸೀರಿಯಸ್ ಆಗಿ ಹೋಗಬೇಡಿ.

ಶ್ರೀ ಬಿ. ಎ. ಉಮರಬ್ಬ.—ಸ್ವಾಮಿ, ತಾವು ಹಾಗೆ ಹೇಳಬಾರದು......

ಅಧ್ಯಕ್ಷರು.—ತಾವು ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳಬೇಡಿ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೇ, ಈ ಸದನಕ್ಕೆ ಆತ್ಮಗೌರವ ಇದ್ದರೆ, ಇವರೇನಾದರೂ ತಪ್ಪು ಮಾಡಿದ್ದರೆ ಅದನ್ನು ತಿದ್ದಿಕೊಳ್ಳಲಿ ಹಾಗೆ ಹೇಳುವುದನ್ನು ಬಿಟ್ಟು ಅವಹೇಳನಕರವಾದ ಮಾತುಗಳನ್ನಾಡುವುದಾದರೆ ಅದು ಸರಿಯಲ್ಲ ಅದರಿಂದ ನನಗೆ ಬಹಳ ನೋವುಂಟಾಗುತ್ತದೆ. ರಾಜ್ಯಕ್ಕೆ ಇದರಿಂದೇನಾದರೂ ಅಪಮಾನವಾಗಿದ್ದರೆ ತಪ್ಪು ಮಾಡಿದ್ದರೆ ಅದನ್ನು ತಿದ್ದುಕೊಳ್ಳಬೇಕು ಎಂದು ಹೇಳಲಿ. ಅವರು ಈ ಸದನದ ಗೌರವವನ್ನು ಇಟ್ಟುಕೊಂಡು ಮಾತನಾಡಬೇಕು ಇಲ್ಲದೇ ಹೋದರೆ ನನಗೆ ಬಹಳ ನೋವಾಗುತ್ತದೆ. ನಾನು ಈ ಮಾತನ್ನು ಬಹಳ ಸಂಕಟದಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು.—ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ, ಇದರ ಬಗ್ಗೆ ನೇರವಾದ ವಿವರಣೆ ಕೇಳಿ ಎಂದು. Please don't be serious.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುತ್ತಾ ಇರತಕ್ಕಂಥಾ ಸಂದರ್ಭದಲ್ಲಿ ಮಾನ್ಯ ಸಚಿವರು ಗೈರುಹಾಜರಾಗಿದ್ದರು. ಆದರೂ ಸಹ ನಾನು ಹೇಳಿದಂಥ ವಿಷಯಗಳನ್ನು ತಿಳಿದುಕೊಂಡಿರುವುದರಿಂದ ನಾನು ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಚೆಲುವ ಕನ್ನಡ ನಾಡು ಪುಸ್ತಕದಲ್ಲಿ ಇಂಗ್ಲೀಷ್‌ಗೆ ಋಣಿಯಾದ ಮತ್ತೊಬ್ಬ ಮಹಾಕವಿ ಎಂದರೆ ಕುವೆಂಪು ಎಂದು ಪ್ರಸಿದ್ಧರಾದ ಕೆ. ವಿ. ಪುಟ್ಟಪ್ಪನವರನ್ನು ಉಲ್ಲೇಖ ಮಾಡಿ ಅವಹೇಳನ ಮಾಡಿದ್ದಾರೆ. ಕನ್ನಡ ಪ್ರೇಮಿ ಹಾಗೂ ಪ್ರಸಿದ್ಧ ಚಿತ್ರನಟ ನಟಸಾರ್ವಭೌಮ ಡಾಕ್ಟರ್ ರಾಜಕುಮಾರ್ ಹಾಗೂ ಇನ್ನೂ ಪ್ರಖ್ಯಾತ ನಟನಟಿಯರನ್ನು ಅವರಿಗೆ ಬೇಕಾದವರ ಹೆಸರನ್ನು ಇದರಲ್ಲಿ ಹಾಕಿದ್ದಾರೆ. ಇದನ್ನು ಅಷ್ಟು ಲಘುವಾಗಿ ತಿಳಿದುಕೊಳ್ಳಬೇಡಿ. ಅಷ್ಟೇ ಅಲ್ಲದೆ ಬಡವರಿಗೆ ನೆಲೆ ಕಲ್ಪಿಸಿದ ಶ್ರೀ ದೇವರಾಜ ಅರಸ್ ಮತ್ತು ಸಮಾಜವಾದಿ ಹೋರಾಟಗಾರರಾದ ಶ್ರೀ ಗೋಪಾಲಗೌಡ ಇಂಥ ರಾಜಕಾರಣಿಗಳ ಬಗ್ಗೆ, ಈ ಪುಸ್ತಕದಲ್ಲಿ ಒಂದು 'ಚಕಾರ' ಶಬ್ದವನ್ನೂ ಹಾಕಿಲ್ಲ. ಕರ್ನಾಟಕದ ಜನರ ಬಗ್ಗೆ, ಕನ್ನಡಿಗರ ಇತಿಹಾಸದ ಬಗ್ಗೆ ಇದರಲ್ಲಿ ಉಲ್ಲೇಖ ಮಾಡಿರುವುದನ್ನು ನೋಡಿದರೆ ಸರ್ಕಾರದವರು ಎಷ್ಟು ಅಸತ್ಯದಿಂದ ನುಡಿದಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಇದರ ವಸ್ತುಸ್ಥಿತಿಯನ್ನು ಈ ಪುಸ್ತಕದಲ್ಲಿ ಇಟ್ಟಿಲ್ಲ ಎಂದು ಹೇಳಿದರೆ ಅಪ್ರಸ್ತುತವಾಗಲಾರದು. ಹಾಗೆಯೇ ಕರ್ನಾಟಕದ ಸರ್ವಾಂಗ ಸೌಂದರ್ಯ ದೃಷ್ಟಿಯಲ್ಲೂ ವಕ್ರದೃಷ್ಟಿಯನ್ನು ತೋರಿಸಿದ್ದಾರೆ. ಮತ್ತು ಈ ಪುಸ್ತಕವನ್ನು ಹೊರಗಡೆ ಮುದ್ರಿಸಿದ್ದಕ್ಕಾಗಿ ಸರ್ಕಾರಕ್ಕೆ ಅಪಾರ ವೆಚ್ಚವನ್ನು ಮಾಡಿದೆ. ಈ ಅಪ್ರಸ್ತುತ ಅಂಶಗಳನ್ನೊಳಗೊಂಡಂತೆ ಇರುವ ಈ ಚೆಲುವ ಕನ್ನಡ ನಾಡು ಪುಸ್ತಕವನ್ನು ಏನು ಕೊಟ್ಟಿದ್ದಾರೆ ಇದರಿಂದ ಕನ್ನಡಿಗರು ತಲೆತಗ್ಗಿಸುವಂತಾಗಿದೆ.

ಕೊನೆಯದಾಗಿ ಹೇಳಬೇಕಾದರೆ ೫೦೦ ರೂಪಾಯಿಗಳ ಬೆಲೆ ಬಾಳುವ ಈ ಪುಸ್ತಕವನ್ನು ಎಲ್ಲಾ ಶಾಸಕರಿಗೂ ಪುಕ್ಕಟೆಯಾಗಿ ತಮ್ಮ ಜ್ಞಾನಭಂಡಾರವನ್ನು ಬೆಳೆಸಿಕೊಳ್ಳಲು ಕೊಟ್ಟಿದ್ದಾರೆ. ಅವರು ಕನ್ನಡದ ಬಗ್ಗೆ ಹೆಚ್ಚಿನ ಪ್ರೇಮ ಇಟ್ಟುಕೊಂಡು ಓದಲಿ ಎಂದು ಕೊಟ್ಟಿದ್ದಾರೆ. ನಾನು ಈ ಪುಸ್ತಕದ ಒಳಗೆ ಇರುವ ಎಲ್ಲಾ ಅಂಶಗಳನ್ನು ಓದಿ ಅದರಲ್ಲಿ ಕೆಲವೊಂದು ಅಂಶಗಳನ್ನು ಈಗಾಗಲೇ ಈ ಸದನದ ಮುಂದೆ ವಿವರಿಸಿದ್ದೇನೆ. ಒಟ್ಟಿನಲ್ಲಿ ಹೇಳಬೇಕಾದರೆ ಈ ಚೆಲುವ ಕನ್ನಡ ನಾಡು ಅನ್ನುವ ಪುಸ್ತಕ ಅಷ್ಟು ಯೋಗ್ಯವಾದ ಪುಸ್ತಕ ಅಲ್ಲ. ಈ ಪುಸ್ತಕವನ್ನು ನೀವು ಹಿಂತೆಗೆದುಕೊಳ್ಳಬೇಕು. ನಾನು ಮೊದಲೇ ಹೇಳಿದ ಹಾಗೆ ಈ ಪುಸ್ತಕದಲ್ಲಿ ಅಪ್ರಸ್ತುತ ಸಾಹಿತ್ಯ ವಿಚಾರಗಳನ್ನು ಬರೆದಿದ್ದಾರೆ. ಒಂದು ವೇಳೆ ಈ ಪುಸ್ತಕವನ್ನು ನೀವು ಹಿಂತೆಗೆದುಕೊಂಡರೂ ಕೂಡ ಅದರಲ್ಲಿರುವ ವಿಚಾರಗಳನ್ನು ಹಿಂತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕಾಗಿ ಕರ್ನಾಟಕ ರಾಜ್ಯದ ಖಜಾನೆಯಿಂದ ೧೬ ಲಕ್ಷ ರೂಪಾಯಿಗಳನ್ನು ವೆಚ್ಚ

ಮಾಡಿದ್ದಾರೆ. ಈ ಪುಸ್ತಕದ ಮುದ್ರಣಕ್ಕಾಗಿ ಕೊಟ್ಟಿರುವ ಹಣ, ಸರ್ಕಾರದ ಖಜಾನೆಯಿಂದ ಕೊಟ್ಟಿರುವ ಹಣ ಏನು ಇದೆ ಇದನ್ನು ದರೋಡೆ ಮಾಡಿದ್ದಾರೆಂದು ಹೇಳಬಹುದು. ಪೋಲೀಸ್ ಇಲಾಖೆಯುವರು ದರೋಡೆಗಾರರ ಒಂದು ಲಿಸ್ಟ್ ಮಾಡಿ, ಆ ದರೋಡೆಗಾರರಿಗೆ ಯಾವ ರೀತಿ ಶಿಕ್ಷೆ ಕೊಡುತ್ತಾರೋ, ಇದನ್ನು ಇವರು ಒಪ್ಪುವುದಾದರೆ ಈ ಸರ್ಕಾರದ ಖಜಾನೆಯಲ್ಲಿ ದರೋಡೆಯಾಗಿರುವ ೧೬ ಲಕ್ಷ ರೂಪಾಯಿಗಳು ಏನು ಇದೆ ಇದಕ್ಕೆ ಯಾರು ಜವಾಬ್ದಾರರು ? ಯಾರು ಕಾರಣರು ? ಯಾವ ಇಲಾಖೆಯುವರು ಜವಾಬ್ದಾರರು ಅವರನ್ನು ಕಂಡುಹಿಡಿದು ಅವರಿಗೆ ಇದಕ್ಕಿಂತಲೂ ಘೋರವಾದ ಶಿಕ್ಷೆಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ಅವರು ಈ ಒಂದು ಶಿಕ್ಷೆಗೆ ಅರ್ಹರಾಗಿರುತ್ತಾರೆಂದು ತಮ್ಮ ಮೂಲಕ ಈ ವಿಷಯವನ್ನು ಮಾನ್ಯ ಸಚಿವರ ಮುಂದೆ ಇಡುತ್ತೇನೆ. ಅಲ್ಲದೆ ಈ ಬಗ್ಗೆ ಮಾನ್ಯ ಸಚಿವರಿಂದ ನಾನು ಉತ್ತರವನ್ನು ಬಯಸುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ. ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ಪುಸ್ತಕ ವಿದೇಶದಲ್ಲಿ ಮುದ್ರಣವಾಗಿದೆಯೇ ಎಂದು ಕೇಳಿದ್ದಾರೆ. ಅದು ನಿಜ, ವಿದೇಶದಲ್ಲಿ ಮುದ್ರಣವಾಗಿದೆ. ಅದಕ್ಕೆ ಕೊಟ್ಟಿರತಕ್ಕ ದುಡ್ಡು ೧೧ ಲಕ್ಷ ರೂಪಾಯಿಗಳು. ಅದು ಅವರ ದೃಷ್ಟಿಯಲ್ಲಿ ದರೋಡೆ ಮುಂತಾದ್ದು ಏನೇ ಆಗಿದ್ದರೂ, ಅವರ ಒಳಗಿರತಕ್ಕ ವಿಷಯಗಳ ಬಗ್ಗೆ ಅವರ ಅಭಿಪ್ರಾಯವೇನಿದೆ ಅದನ್ನು ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಉಮರಬ್ಬ ಅವರು ಹೇಳಿರುವುದರಲ್ಲಿ ಬಹಳ ರಾಜಕೀಯ ಅಡಗಿದೆ. ಅವರು ವಿಶ್ವಕನ್ನಡ ಸಮ್ಮೇಳನಕ್ಕೆ ಬರಲೇ ಇಲ್ಲ. ಅವರಿಗೆ ಆಹ್ವಾನ ಕಳಿಸಿದರೂ, ಗೌರವಿಸಿದರೂ ಅವರು ಬರಲೇ ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರೂ ಕನ್ನಡದ ಅಭಿಮಾನಿಯಾಗಿ ಬರಲೇ ಇಲ್ಲ. ಆದರೆ ಮಾನ್ಯ ಉಮರಬ್ಬ ಅವರು ಈ ಸದನದಲ್ಲಿ ಮಾತನಾಡುವಾಗ ಈ ರೀತಿ ಮಾಡಿರುವುದು ೪ ಕೋಟಿ ಜನತೆಗೆ ಅಪಮಾನ ಮಾಡಿದ ಹಾಗೆ. ಅಲ್ಲದೆ ನೀವು ನನ್ನ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಕ್ಕಾಗಿ ಬಹಿಷ್ಕಾರ ಹಾಕಿ ನಾನು ಹೊರಗೆ ಹೋಗಬೇಕಾಗುತ್ತದೆ,

ಅಧ್ಯಕ್ಷರು.—ತಾವು ಗಂಭೀರವಾಗಿ ಕುಳಿತುಕೊಳ್ಳಿ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ಬರಗಾಲ ಪರಿಸ್ಥಿತಿಯಿಂದ ಸಾಕಷ್ಟು ಮಂದಿ ರೈತರು ಎತ್ತುಗಳನ್ನು ಕಳೆದುಕೊಂಡಿದ್ದಾರೆ. ಅವರಿಗೆ ಸರ್ಕಾರ ಯಾವರೀತಿ ಸಹಾಯ ಮಾಡುತ್ತದೆ ಎನ್ನುವುದನ್ನು ಸ್ವಲ್ಪ ತಿಳಿಸಬೇಕಾಗುತ್ತದೆ. ಈಗಾಗಲೇ ಬರಗಾಲದ ಮಂಥ್ಯೆ ಬೋರ್‌ವೆಲ್‌ಗೆ ಇಂಡೆಂಟ್ ಹಾಕುತ್ತೇವೆ, ಟೆಂಡರ್ ಕಾಲ್‌ಫಾರ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಆಗ ರೈತರಿಗೆ ಎತ್ತುಗಳು ಬೇಕಾದಾಗ ಡೆನ್ಮಾರ್ಕಿನಿಂದ ತರಿಸುತ್ತೇವೆ ಎನ್ನುವುದು ಆಗಬಾರದು. ಆದುದರಿಂದ ಅದಕ್ಕೆ ಮೊದಲೇ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಜೆ. ಹೆಚ್. ಪಟೇಲ್.—ಮೊದಲು ಮಳೆ ಬಂದರೆ ಸಾಕು, ಆಮೇಲೆ ಕ್ರಮ ಏನಾದರೂ ತೆಗೆದುಕೊಳ್ಳೋಣ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ಈ ರೀತಿ ತೆನಾಲಿ ರಾಮಕೃಷ್ಣನ ತರಹ ಉತ್ತರಗಳು ಬೇಕಾಗಿಲ್ಲ. ನೇರವಾಗಿ ಉತ್ತರ ಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಇವರು ಮಹಾ ಪಂಡಿತರು ಎನ್ನುವುದು ನನಗೆ ಗೊತ್ತು. ಮಳೆ ಬಂದರೆ, ಆಗ ಎತ್ತುಗಳು ಬೇಕಾದರೆ ಏನು ಮಾಡುತ್ತೀರಿ ಎಂದು ಪ್ರಶ್ನೆ ಕೇಳಿದ್ದು ಸಂಸದೀಯ ವ್ಯವಹಾರಗಳಲ್ಲಿ ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಸರ್ಕಾರ ಪೂರ್ವಭಾವಿಯಾಗಿ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು.—ಮಾನ್ಯ ಮಂತ್ರಿಗಳ ಉತ್ತರ ಸರಿಯಿಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಮಳೆ ಬಂದರೆ ನಮ್ಮಲ್ಲಿರುವ ಜಾನುವಾರು ಸಂಖ್ಯೆ ಎಷ್ಟು, ಮುಂದೆ ಎಷ್ಟು ಬೇಕಾಗುತ್ತದೆ, ಇದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳೋಣ. ಈಗ ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುವುದು.

ಶ್ರೀ ಪಟಮಕ್ಕಿ ರತ್ನಾಕರ್.—ತಾವು ಇಷ್ಟು ಸಿಟ್ಟಾಗಬಾರದು. ಸಂಸದೀಯ ವ್ಯವಹಾರಗಳಲ್ಲಿ, ಸಂಸದೀಯ ಕೌಶಲ್ಯದ ಬಗ್ಗೆ ನಿಮಗೆ ಅಪಾರವಾದ ಅನುಭವ ಇದೆ. ಹೊಸ ಸದಸ್ಯರು ಏನಾದರೂ ತಪ್ಪಾಗಿ ಪ್ರಶ್ನೆ ಕೇಳಿದರೆ ತಿದ್ದಿಕೊಂಡು ಉತ್ತರ ಕೊಡುವುದು ಧರ್ಮ. ಅದು ನಿಮ್ಮ ಹೆಗಲ ಮೇಲಿದೆ. ಈ ರೀತಿ ನೀವು ಹೇಳಿದರೆ ನಮ್ಮ ಸ್ಫೂರ್ತಿ ಕುಗ್ಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ.—ನೀವು ಅವರಿಗೆ ಹೇಳಿಕೊಡಿ.

ಶ್ರೀ ಆರ್.ಎನ್. ನಾಯಕ್.—ನೀವೆ ಹೇಳಿಕೊಡಿ.

ಶ್ರೀ ಎಂ.ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಕಳೆದ ಬಾರಿ ಮುಖ್ಯವಾದ ವಿಷಯವನ್ನು ಕೇಳಿದ್ದೇನೆ. ಏನೆಂದರೆ, ಬರಗಾಲದ ಬಗ್ಗೆ ಶಾಶ್ವತ ಪರಿಹಾರಕ್ಕಾಗಿ ಒಂದು ಪ್ರಾಧಿಕಾರವನ್ನು ನೇಮಕ ಮಾಡಬೇಕು ಎಂದು ಅದರ ಬಗ್ಗೆ ಯಾವುದೇ ವಿವರ ರಾಜ್ಯಪಾಲರ ಭಾಷಣದಲ್ಲೂ ಬರಲಿಲ್ಲ, ಮಾನ್ಯ ಮಂತ್ರಿಗಳ ಉತ್ತರದಲ್ಲೂ ಬರಲಿಲ್ಲ. ಪ್ರಾಧಿಕಾರ ನೇಮಕ ಮಾಡದೇ ಹೋದರೆ ಅಸೆಂಬ್ಲಿಯಲ್ಲಿ ಡಿಸ್ಕಷನ್ ಮಾಡಿಕೊಂಡು ಹೋಗುತ್ತಾರೆ ಎನ್ನುವ ವಿಚಾರ ಜನರಿಗೆ ಕೊಡಬಹುದೇ ಹೊರತು ಯೋಗ್ಯವಾದ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ ಎನ್ನುವ ಸಂದೇಹ ಬರುತ್ತಿದೆ. ಎರಡನೆಯದಾಗಿ, ಎಕ್ಸೈಜ್ ಬಗ್ಗೆ ಹೇಳುವುದಾದರೆ ಒಂದು ಕಡೆ ದಿನಗೂಲಿ ಕೊಡುತ್ತೇವೆ, ಇನ್ನೊಂದು ಕಡೆ ಸಾರಾಯಿಯನ್ನು ಮಾರಾಟ ಮಾಡಿ ಜನರಿಂದ ಲಾಭ ಪಡೆಯುತ್ತೇವೆ. ಆದ್ದರಿಂದ ೧೮ ಜಿಲ್ಲೆಗಳಲ್ಲಿ ಬರಗಾಲ ಇದ್ದಾಗ ಡ್ರೈ ಏರಿಯ ಎಂದು ಡಿಕ್ಲೇರ್ ಮಾಡಲಿಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಇಲ್ಲದೇ ಹೋದರೆ ದಿನನಿತ್ಯ ಏನು ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಅದನ್ನು ಕಡಿಮೆ ಬೆಲೆಯಲ್ಲಿ ದುಡಿಯತಕ್ಕ ಜನರಿಗೆ ಕೊಡುವ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಜೆ.ಹೆಚ್. ಪಟೇಲ್.—ಎರಡನೆಯ ಕಾರ್ಯಕ್ರಮ ಸರ್ಕಾರದ ಪರಿಶೀಲನೆಯಲ್ಲಿಲ್ಲ. ಮೊದಲನೆಯದು ಬರಗಾಲದ ಪ್ರಾಧಿಕಾರ ಮಾಡಬೇಕು ಎಂದು ಹೇಳಿದ್ದಾರೆ. ಈ ಐಡಿಯಾವನ್ನು ನಾವು ಒಪ್ಪಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದೆ. ನಮ್ಮ ದೇಶದಲ್ಲಿ ಫ್ಲಡ್ ಅಂಡ್ ಫ್ಯಾಮಿನ್ ಇವೆರಡೂ ಆಲ್ಟರ್ನೇಟ್ ಹಜಾರ್ಡ್ಸ್. ಕೆಲವು ರಾಜ್ಯಗಳಲ್ಲಿ ಫ್ಲಡ್ ಬಂದಿರುತ್ತದೆ. ಅದು ಒರಿಸ ಮುಂತಾದ ಕಡೆ ಇರಬಹುದು. ಕರ್ನಾಟಕದಲ್ಲಿ ಫ್ಯಾಮಿನ್ ಬರುತ್ತಿದೆ. ಆದ್ದರಿಂದ ಇದಕ್ಕೆ ಒಂದು ರಾಷ್ಟ್ರೀಯ ಯೋಜನೆ ಬೇಕು. ಬರೀ ಪ್ರಾಧಿಕಾರ ಮಾಡಿಕೊಂಡರೆ ಇನ್ನೊಬ್ಬ ಛೇರ್ಮನ್‌ಗೆ ಪ್ರಾಧಿಕಾರ ಮಾಡಿದರು ಎಂದು ಬರುತ್ತದೆ. ಈ ಅಭಿಪ್ರಾಯವನ್ನು ಈಗಾಗಲೇ ಪ್ರಸ್ತಾಪ ಮಾಡುತ್ತಾ ಇದ್ದೇವೆ. ಈ ದಿಸೆಯಲ್ಲಿ ನಾವು ಹೆಜ್ಜೆ ಇಡುತ್ತಾ ಇದ್ದೇವೆ.

ಶ್ರೀ ಎಂ.ಎಸ್. ಪಾಟೀಲ್.—ನಾನು ಮಹತ್ವವಾದ ವಿಷಯವನ್ನು ಕೇಳಿದ್ದೇನೆ. ನಮ್ಮ ನಾಯಕರು ಅರಿವು ಮಾಡಿಕೊಂಡಿದ್ದಾರೆಂದು ತಿಳಿದಿದ್ದೇನೆ. ಡ್ರೈ ಏರಿಯಾ ಮಾಡಲಿಕ್ಕೆ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ಬರಗಾಲಕ್ಕಾಗಿ ವ್ಯಯ ಮಾಡಿದಂಥ ಹಣ ಮರುಪಾವತಿಯಾಗುತ್ತಿದೆಯೋ ಎನ್ನುವ ಸಂಶಯ ವ್ಯಕ್ತವಾಗುತ್ತದೆ. ಸಾರಾಯಿ ಮಾರಾಟವನ್ನು ರದ್ದುಗೊಳಿಸದೇ ಹೋದರೆ ಈ ಕಾರ್ಯಕ್ರಮಕ್ಕೆ ವ್ಯಯ ಮಾಡಿದ ಹಣ ಮತ್ತೆ ಸಂದಾಯವಾಗುತ್ತದೆ. ಆದ್ದರಿಂದ ಡ್ರೈ ಏರಿಯಾ ಎಂದು ಡಿಕ್ಲೇರ್ ಮಾಡಲಿಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜೆ.ಹೆಚ್. ಪಟೇಲ್.—ಆ ಸಲಹೆಯನ್ನು ನಾನು ಪರಿಶೀಲಿಸುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಅಭಾವ ಪರಿಹಾರದ ಅಂಗವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬೇರೆ ಬೇರೆ ಪರಿಹಾರ ಕಾರ್ಯಕ್ರಮಗಳನ್ನು ಸೂಚಿಸಿದ್ದಾರೆ. ದನಗಳಿಗೆ ಮೇವಿನ ಪೂರೈಕೆ ಬಗ್ಗೆ ಹೇಳಿದ್ದಾರೆ. ನಾನು ಒಂದು ಸಲಹೆ ಮಾಡುತ್ತೇನೆ. ನಮ್ಮ ಬಿಜಾಪುರ ಜಿಲ್ಲೆ ಅಭಾವ

ಪೀಡಿತ ಪ್ರದೇಶವಾಗಿದ್ದು ಅಲ್ಲಿಗೆ ಸಿರಸಿ, ಕಾರವಾರದಿಂದ ಹುಲ್ಲು ತರಿಸುತ್ತಾರೆ. ಸಿರಸಿ, ಕಾರವಾರ ಮತ್ತು ಶಿವಮೊಗ್ಗದಿಂದ ಹುಲ್ಲು ಬಿಜಾಪುರಕ್ಕೆ ಬರಬೇಕಾದರೆ ಸಾಗಾಣಿಕೆ ವೆಚ್ಚ ಹುಲ್ಲಿನ ನಾಲ್ಕು ಪಟ್ಟಾಗುತ್ತದೆ. ಇಲ್ಲಿ ಒಂದು ಅನಿಷ್ಟ ಏನೆಂದರೆ, ಹುಲ್ಲಿನ ಲಾರಿಗಳು ಹೋಗುವಾಗ ಅಧಿಕಾರಿಗಳೂ ಹೋಗುತ್ತಾರೆ. ಹೀಗಾಗಿ ಕಚೇರಿಗಳಲ್ಲಿ ಕೆಲಸ ಆಗುತ್ತಿಲ್ಲ. ೧೦ ವರ್ಷಗಳ ಹಿಂದೆ ಒಂದು ಪದ್ಧತಿ ಜಾರಿಯಲ್ಲಿತ್ತು. ಕೆಲವು ವಿಶೇಷ ರೀತಿಯ ಬರಗಾಲ ಬಿದ್ದಾಗ ಸಾಲಗಳನ್ನು ಕೊಡಬೇಕು ಎಂದು ಇತ್ತು. ಈಗ ಈ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಹುಲ್ಲಿನ ಹಂಚಿಕೆ ಅಸಮರ್ಪಕವಾಗಿದೆ. ಅಲ್ಲದೆ ಸಿರಸಿ, ಕಾರವಾರದಿಂದ ಬಂದಂಥ ಹುಲ್ಲನ್ನು ನಮ್ಮ ದನಗಳು ತಿನ್ನಲು ಹೊಂದಿಕೊಳ್ಳುತ್ತಾ ಇಲ್ಲ. ಆದಕಾರಣ ನನ್ನ ಸಲಹೆ ಏನೆಂದರೆ, ಸಮಗ್ರವಾಗಿ ಇಡೀ ಜಿಲ್ಲೆಯನ್ನು ಸರ್ವೆ ಮಾಡಿ ಎರಡು ಎತ್ತು ಮತ್ತು ಚಕ್ಕಡಿ ಇರುವವರಿಗೆ ೧೦ ವರ್ಷಗಳ ಹಿಂದೆ ಇದ್ದ ಪದ್ಧತಿಯಂತೆ ಕನಿಕಿ ತರಾಯಿ ಸಾಲ ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಅದನ್ನು ಯೋಚನೆ ಮಾಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಎಲ್ಲಿಂದ ಕೊಂಡು ಕೊಂಡು ಬರುತ್ತಾರೆ? ಇಲ್ಲಿ ಫಾಡರ್ ಇಲ್ಲದೆ ಪಂಜಾಬ್, ಉತ್ತರ ಪ್ರದೇಶದಿಂದ ತರಿಸುತ್ತಿದ್ದೇವೆ. ಅವರಿಗೆ ಸಾಲ ಕೊಟ್ಟರೆ ಎಲ್ಲಿಂದ ಕೊಂಡು ಕೊಂಡು ಬರುತ್ತಾರೆ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮೇವಿನ ಸಂಬಂಧದಲ್ಲಿ ಮಾನ್ಯ ಕೆ. ಹೆಚ್. ಪಾಟೀಲರು ಹುಲು ಕೋಟೆಯ ಕ್ಯಾಟಲ್ ಫೀಡ್ ಸೊಸೈಟಿಯವರು ೨ ಸಾವಿರ ರೂಪಾಯಿಗಳಿಗೆ ಕ್ಯಾಟಲ್ ಫೀಡ್ ಕೊಡುತ್ತಿದ್ದಾರೆ, ಅದನ್ನು ಸ್ವಲ್ಪ ಪರಿಷ್ಕರಣ ಮಾಡಿ ೧೨೫೦ ರೂಪಾಯಿಗಳಿಗೆ ಒದಗಿಸಿಕೊಡುವುದಕ್ಕೆ ತಯಾರಿದ್ದೇವೆ ಎಂದು ಬರೆದಿದ್ದಾರೆ. ನೀವು ಮೇವನ್ನು ಸಂಗ್ರಹಣೆ ಮಾಡತಕ್ಕಂಥ ಲೆಕ್ಕಾಚಾರದಲ್ಲಿ. ಇದನ್ನು ವಿಚಾರ ಮಾಡಬಹುದಲ್ಲದೇ ?

ಶ್ರೀ ಜೆ. ಹೆಚ್. ಪಟೇಲ್.—ಈ ಸಮಸ್ಯೆಯನ್ನು ಎದುರಿಸುವುದಕ್ಕೆ ಹಲವಾರು ಸಲಹೆಗಳು ಇವೆ. ಮೊಲ್ಯಾಸಸ್ ಮತ್ತು ಬಗಾಸ್ ಅನ್ನು ಕಂಬೈನ್ ಮಾಡಿಕೊಡುವುದು, ಮುಂತಾದವನ್ನೆಲ್ಲಾ ಪರಿಶೀಲನೆ ಮಾಡುತ್ತಿದ್ದೇವೆ. ಅದರ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಕೆ ಹೆಚ್. ಪಾಟೀಲ್.—ರಾಜ್ಯದಲಿ ಎಷ್ಟು ಕ್ಯಾಟಲ್ ಫೀಡರ್ ಇದೆ, ಅವುಗಳಿಂದ ದಿನಕ್ಕೆ ಸಾವಿರಾರು ಟನ್ ಫೀಡ್ ಮಾಡುವುದಕ್ಕೆ ಸಾಧ್ಯವಿದೆ. ಹುಲಕೋಟಿ ಕ್ಯಾಟಲ್ ಫೀಡ್‌ನವರು ತಯಾರಿದ್ದಾರೆ. ಸೊಸೈಟಿಯವರು ಕಡಿಮೆ ದರದಲ್ಲಿ ಕೊಡುವುದಕ್ಕೆ ರೆಡಿಯಿದ್ದಾರೆ, ೧೨೦೦ಕ್ಕೆ ಕೊಡುವುದಕ್ಕೆ ರೆಡಿಯಾಗಿದ್ದಾರೆ. ಅವರಿಂದ ಏಕೆ ಪ್ರಯೋಜನ ಪಡೆದುಕೊಳ್ಳಬಾರದು. ನೋ ಪ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ಇವನ್ನು ಏಕೆ ಮಾಡಬಾರದು ?

ಶ್ರೀ ಜೆ. ಹೆಚ್. ಪಟೇಲ್.—ಆಗಬಹುದು.

ಶ್ರೀ ಬಿ. ಆರ್. ನೀಲಕಂಠಪ್ಪ.—ಬರಗಾಲ ಪರಿಸ್ಥಿತಿಯಲ್ಲಿ ಸಣ್ಣ ರೈತರು ಮತ್ತು ಹಿಂದುಳಿದ ವರು ಬದುಕುತ್ತಾರೆ. ದೊಡ್ಡ ರೈತರು ಮತ್ತು ಮಧ್ಯಮ ರೈತರಿಗೆ ಬಾವಿ ತೆಗೆಸಲಿಕ್ಕೆ ಸಾಲ ಮತ್ತು ವಿಶೇಷ ರಿಯಾಯಿತಿಯನ್ನು ಕೊಡಬೇಕು. ಅವರು ಕೂಲಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಅವರ ಹಳ್ಳಿಗಳಲ್ಲಿ ವಿಶೇಷ ಕಾಮಗಾರಿಗಳನ್ನು ನಡೆಸಲಿಕ್ಕೆ ಇಂತಿಷ್ಟು ಸಾಲವನ್ನು ಮಂಜೂರು ಮಾಡಿ ದರೆ ಆದರಿಂದ ದೊಡ್ಡ ರೈತರು ಹಾಗೂ ಮಧ್ಯಮ ವರ್ಗದ ರೈತರು ಬದುಕುತ್ತಾರೆ. ಬರಗಾಲದ ಬವಣೆ ಇರತಕ್ಕಂತಹ ಪ್ರದೇಶದಲ್ಲಿ ಸಹಕಾರಿ ಸಾಲ ವಸೂಲು ಮಾಡುವುದನ್ನು ಮುಂದೂಡ ಬೇಕು. ಮತ್ತೊಂದು ವಿಶೇಷವಾದ ಪ್ರಶ್ನೆಯೇನೆಂದರೆ, ನಮ್ಮ ಜಿಲ್ಲೆಯ ಸಬ್‌ಡಿವಿಜನ್‌ನಲ್ಲಿ ಮೆಕ್ಯಾನಿಕ್ ಇಲ್ಲದೆ ಕೊಳವೆ ಬಾವಿಗಳು ಕೆಟ್ಟಿವೆ. ಇದರಿಂದ ಬಹಳ ತೊಂದರೆಯಾಗಿದೆ. ಅದನ್ನು ರಿಪೇರಿ ಮಾಡುವುದಕ್ಕೆ ಒಂದು ತಿಂಗಳಿಂದ ಆರು ತಿಂಗಳು ಹಿಡಿಯುತ್ತದೆ. ಆದುದರಿಂದ ಅಲ್ಲಿ ಮೆಕ್ಯಾನಿಕ್ ಅನ್ನು ಇಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರು ಹೇಳುತ್ತಿರುವ ಸಲಹೆಯನ್ನು ಒಪ್ಪಿಕೊಂಡಿದ್ದೇವೆ. ಎಲ್ಲಿ ಆಣಿ ಬೆಳೆ ಕಡಿಮೆ ಇದೆ, ಅಲ್ಲೆಲ್ಲಾ ಕೋ ಆಪರೇಟಿವ್ ಲೋನ್ಸ್ ಅನ್ನು ಮುಂದೆ ಹಾಕ ಬೇಕೆಂದು ಹೇಳಿದ್ದೇವೆ. ದೊಡ್ಡ ರೈತರಿಗೆ ಮತ್ತು ಮಧ್ಯಮ ರೈತರಿಗೆ...

ಶ್ರೀ ಆರ್. ಎಲ್. ಜಾಲಪ್ಪ.—ಮೂರು ದಿವಸ ಅಧಿಕಾರಿಗಳನ್ನು ಕರೆಯಿಸಿ ಚರ್ಚೆ ಮಾಡಿ ಬೋರ್‌ವೆಲ್ ರಿಗ್ಸ್ ಅನ್ನು ಹೊರಗಡೆಯಿಂದ ಬೇಕಾದರೆ ತರಿಸಿ ಎಂದು ಹೇಳಿದ್ದೇನೆ. ಆಗ್ರೋ ಇಂಡಸ್ಟ್ರೀಸ್‌ರವರ ಜೊತೆಯಲ್ಲಿ. ಕಾಂಟ್ರಾಕ್ಟ್ ಮಾಡಿಕೊಂಡಿದ್ದೇವೆ. ಎಲ್ಲಿ ನಮ್ಮಿಂದ, ಎಂದರೆ ಬ್ಯಾಂಕಿನಿಂದ ಸಾಲ ಪಡೆದುಕೊಂಡಿದ್ದಾರೆ, ಅಂತಹವರ ಬಾವಿ ಒಣಗಿ ಹೋಗಿದ್ದರೆ. ಬೋರ್‌ವೆಲ್ ಹಾಕುವುದಕ್ಕೆ ಟ್ರೆಡಿಷನಲ್ ಮೆಥೆಡ್, ಲೇಟೆಸ್ಟ್ ಮೆಥೆಡ್ ಅನ್ನು ಉಪಯೋಗಿಸುವುದಕ್ಕೆ ಮತ್ತೆ ಸಾಲ ಕೊಡುವುದಕ್ಕೆ ಈಗಾಗಲೇ ಒಪ್ಪಿಕೊಂಡಿದ್ದೇವೆ. ಮೈನರ್ ಇರಿಗೇಷನ್‌ಗೆ ನಮ್ಮಿಂದ ಯಾವುದೇ ಅಡ್ಡಿ ಆತಂಕಗಳಿಲ್ಲ.

ಶ್ರೀ ಎಂ. ಪಿ. ಎಲ್. ಉಸ್ತಾದ್.—ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಕಳೆದ ೫೨ ವರ್ಷಗಳಲ್ಲಿ ೩೩ ಸಲ ಬರ ಬಂದಿದೆ. ಅದರ ಸಲುವಾಗಿ ಶಾಶ್ವತ ಪರಿಹಾರವನ್ನು ತಾವು ಕೊಡಬೇಕಾದರೆ ಮುನವಳ್ಳಿ ಲಿಫ್ಟ್ ಇರಿಗೇಷನ್ ಮಾಡಬೇಕು. ಈ ೫ ತಾಲ್ಲೂಕುಗಳಿಗೆ ಇದನ್ನು ಮಾಡಿಸಿದ್ದೇ ಆದರೆ ಐದೂವರೆ ಲಕ್ಷ ಎಕರೆಗೆ ನೀರಾವರಿಯಾಗುತ್ತದೆ. ಇದರಿಂದ ಬಿಜಾಪುರ ನಗರದ ನೀರಿನ ಸಮಸ್ಯೆಯು ಬಗೆಹರಿಯುತ್ತದೆ. ಮತ್ತು ನಾನು ಎಲಿವೇಟೆಡ್ ರಿಸರ್ವಾಯರ್ ಬಗ್ಗೆ ಪ್ರಸ್ತಾಪ ಮಾಡಿದ್ದೆ, ಅದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಅದಕ್ಕೆ ಸ್ಪೆಸಿಫಿಕ್ ಆದ ಉತ್ತರವಿಲ್ಲ. ಅದನ್ನು ಇಲಾಖೆಯಿಂದ ತರಿಸಿಕೊಳ್ಳಬೇಕು. ಮತ್ತು ಅದರ ಎಸ್ಟಿಮೇಟ್ಸ್ ಏನಿದೆ, ಅದು ಯಾವ ಸ್ಟೇಜ್‌ನಲ್ಲಿದೆ ಎಂಬುದನ್ನು ತಿಳಿಸಬೇಕು. ಅದರ ಬಗ್ಗೆ ನಾನು ಮಾನ್ಯ ಸದಸ್ಯರಿಗೆ ನಂತರ ತಿಳಿಸುತ್ತೇನೆ.

ಶ್ರೀ ಎಚ್. ಕೆ. ಕುಮಾರ ಸ್ವಾಮಿ.—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಸರ್ವತೋಮುಖ ಅಭಿವೃದ್ಧಿಗೆ ವಿಶೇಷ ಘಟಕ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುತ್ತಿದ್ದೇವೆಂದು ಹೇಳಿದ್ದಾರೆ. ಅದು ಸ್ವಾಗತಾರ್ಹ. ಅದರಲ್ಲಿ ಅನುಮಾನವಿಲ್ಲ. ೧೯೮೦ ರಲ್ಲಿ ಈ ವಿಶೇಷ ಘಟಕ ಯೋಜನೆಯಿಂದ ಎಲ್ಲಾ ಇಲಾಖೆಗಳಿಗೆ ಹಣ ಬಿಡುಗಡೆ ಮಾಡುತ್ತಿದ್ದಾರೆ. ಪರಿಣಾಮಕಾರಿಯಾಗಿ ಈ ಯೋಜನೆ ಜಾರಿಗೆ ಬಂದಿದ್ದು ೧೯೮೩ನೇ ಇಸವಿಯಲ್ಲಿ ಎಂದರೆ ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ. ೧೯೮೪ನೇ ಇಸವಿಯಲ್ಲಿ ನಮ್ಮ ಹಾಸನ ಜಿಲ್ಲೆಯ ಆಲೂರಿನಲ್ಲಿ ಈ ಕಾರ್ಯಕ್ರಮ ಜಾರಿಗೆಬಂತು, ಲೋಕೋಪಯೋಗಿ ಇಲಾಖೆಯವರು ಮೂರು ಲಕ್ಷ ರೂಪಾಯಿಗಳ ಯೋಜನೆಯಲ್ಲಿ ಇದನ್ನು ಜಾರಿಗೆ ತಂದರು. ಅದರ ಪ್ರಕಾರ ಜಮೀನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸೇರಿಗಬೇಕಿತ್ತು. ಅಲ್ಲಿ ಹೋಗಿ ಪರಿಶೀಲಿಸಿದಾಗ ೨೦೦ ಎಕರೆ ಫ್ಲೀಡ್ ಆಗಿದ್ದು. ಅದರಲ್ಲಿ ೧ ಎಕರೆ ೩ ಗುಂಟೆ ಬಿಟ್ಟರೆ ಮಿಕ್ಕಿದ್ದೆಲ್ಲಾ ಬೇರೆಯವರಿಗೆ ಸೇರಿ ದುರುಪಯೋಗವಾಗಿತ್ತು. ಆದರೆ ೧೯೮೩ರ ನಂತರ ಎಲ್ಲಾ ಇಲಾಖೆಗಳಿಗೂ ಹಣವನ್ನು ಕೊಟ್ಟರು ಪರಿಣಾಮಕಾರಿಯಾಗಿ ಕೆಲಸವಾಗುತ್ತಿದೆ ಅಲ್ಲಿ ಇಲ್ಲಿ ಕೆಲವು ಸಣ್ಣ ಪುಟ್ಟ ತಪ್ಪುಗಳಾಗುತ್ತದೆ. ಇನ್ನೂ ಪರಿಣಾಮಕಾರಿಯಾಗಿ ಯೋಜನೆಗಳು ಜಾರಿಯಾಗಬೇಕು. ಅದಕ್ಕಿಂತ ಹೆಚ್ಚಿನ ಹಣವನ್ನು ಹಾಸ್ಟೆಲ್ ಕಟ್ಟಡ ಕಟ್ಟಿಸಲು ಉಪಯೋಗಿಸಬೇಕು. ಮತ್ತು ಬಾಂಡೆಡ್ ಲೇಬರರ್ಸ್‌ಗೆ, ಮತ್ತು ಅನ್ ಎಂಪ್ಲಾಯ್ಡ್ ಗ್ರಾಜುಯೇಟ್ಸ್ ಏನಿದ್ದಾರೆ, ಅವರಿಗೆ ಉದ್ಯೋಗವನ್ನು ನೀಡುವ ದೃಷ್ಟಿಯಿಂದ ಇದನ್ನು ಬಳಸಿಕೊಂಡರೆ ಹೆಚ್ಚು ಅನುಕೂಲವಾಗುತ್ತದೆಂಬ ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತೇನೆ,

ಶ್ರೀ ಜೆ. ಹೆಚ್. ಪಟೇಲ್.—ಆಗಬಹುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಸಹಕಾರಿ ಸಚಿವರು ಈಗತಾನೆ ಹೇಳಿದರು. ಜಿಯೋಫಿಜಿಸ್ಟ್ ಕೊರತೆಯಿದೆಯೆಂದು, ಹಿಂದೆ ನಾನು ಪ್ರಶ್ನೆ ಕೇಳಿದ್ದೆ, ಅದಕ್ಕೆ ಸರಿಯಾದ ಉತ್ತರ ಬಂದಿರಲಿಲ್ಲ. ೧೦೦ ಬೋರ್‌ವೆಲ್ ಅನ್ನು ಪ್ರತಿ ತಾಲ್ಲೂಕಿನಲ್ಲಿ ತೆಗೆಯುವಂತಹ ಯೋಜನೆ ಇದೆ. ಶಿವಮೊಗ್ಗ ಮತ್ತು ಚಿಕ್ಕಮಗಳೂರಿನಲ್ಲಿ ಕೇವಲ ಇಬ್ಬರು ಜಿಯಾಲಿಜಿಸ್ಟಗಳಿದ್ದಾರೆ. ಇಂತಹ ಒಂದು ಸ್ಕೀಮ್ ಮಾಡಿದ ಮೇಲೂ ಅದಕ್ಕೆ ಬೇಕಾದಂತಹ ಜಿಯಾಫಿಜಿಸ್ಟ್ ಇಲ್ಲವೆಂದು ಅದು ನಿಲ್ಲಬೇಕೇ ? ಅದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ ? ಎಲ್ಲಾ ಕಡೆಗಳಲ್ಲೂ ಹೀಗೇ ಆಗಿದೆ. ಹಣ ಇದೆ ಜಿಯಾಫಿಜಿಸ್ಟ್ ಇಲ್ಲ.

ಶ್ರೀ ಆರ್. ಎಲ್, ಜಾಲಪ್ಪ.—ಇದರ ಬಗ್ಗೆ ಈಗಾಗಲೇ ಗಮನ ಕೊಟ್ಟಿದ್ದೇವೆ. ಈಗ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್‌ನವರು ಆರು ಜನ ಜಿಯಾಫಿಜಿಸ್ಟ್‌ಗವರನ್ನು ಇಟ್ಟುಕೊಂಡಿದ್ದಾರೆ. ಸರ್ಕಾರ ಕ್ಲೈವರ್‌ಲ್ಲೆ ಲೊಕೇಟ್ ಮಾಡಬೇಕೆಂದು ಪರ್ಮಿಷನ್ ಕೊಟ್ಟಿದೆ. ರಾಜ್ಯ ಕೋ-ಆಪರೇಟೀವ್ ಬ್ಯಾಂಕ್‌ನವರು ೮-೧೦ ಜನ ಜಿಯಾಫಿಜಿಸ್ಟ್‌ರವರನ್ನು ರೆಕ್ರೂಟ್ ಮಾಡಿದ್ದಾರೆ ಅವರನ್ನು ಮೈನ್ಸ್ ಅಂಡ್ ಜಿಯಾಲಜಿಸ್ಟ್‌ನವರು ಉಪಯೋಗಿಸಿಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮೈನ್ಸ್ ಅಂಡ್ ಜಿಯಾಲಜಿಯ ಯಾವ ಜಿಯಾಲಿಜಿಸ್ಟ್‌ಗೆ ವಾಟರ್ ಡಿವಿಜನ್‌ನಲ್ಲಿ ಅನುಭವಿದೆ, ಅಂತಹವರನ್ನು ಈ ಕೆಲಸಕ್ಕೂ ರೆಕ್ರೂಟ್ ಮಾಡುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ೭ ತಾಲ್ಲೂಕುಗಳು ಇವೆ. ನಿಮ್ಮ ಪ್ರಕಾರ ೧೦೦ ಬಾವಿ ತೆಗೆಯಬೇಕೆಂದರೆ, ೭೦೦ ಆಗುತ್ತದೆ. ಅಲ್ಲಿ ಜಿಯಾಫಿಜಿಸ್ಟ್‌ಗಳು ಹೋಗಿ ಸ್ಥಳ ತನಿಖೆ ಮಾಡಲು ಎಷ್ಟು ಸಮಯ ಬೇಕು ಮತ್ತು ಎಷ್ಟು ಜನ ಬೇಕಾಗುತ್ತದೆಂಬ ಅಂದಾಜು ಇದೆಯೇ? ೮-೧೦ ಜನರನ್ನು ರೆಕ್ರೂಟ್ ಮಾಡುತ್ತೇವೆಂದು ಹೇಳುತ್ತೀರಿ. ಜಿಲ್ಲೆಗೆ ಒಬ್ಬರಂತೆ ಕೊಡಬಹುದು. ಇದರಿಂದ ಈ ಸಮಸ್ಯೆ ಬಗೆಹರಿಯುತ್ತದೆಯೇ ?

ಶ್ರೀ ಜೆ. ಹೆಚ್. ಪಟೇಲ್.—ಇದರ ಬಗ್ಗೆ ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಅವಶ್ಯಕತೆ ಇದ್ದ ಕಡೆಯಲ್ಲಿ ಬೇರೆ ಕಡೆಯಿಂದ ಅವರ ಸರ್ವೀಸಸ್ ತೆಗೆದುಕೊಳ್ಳಬೇಕೆಂದು ಮಾತನಾಡಿದ್ದೇವೆ,

ಶ್ರೀ ಆರ್. ಎಲ್. ಜಾಲಪ್ಪ.—ಎಲ್ಲೆಲ್ಲಿ ವೈಟ್ ಏರಿಯಾ ಎಂದು ಘೋಷಣೆ ಮಾಡಿದ್ದೇವೆ. ಅಲ್ಲಿ ಒಂದು ಹೊಸದಾಗಿ ಯೋಜನೆಯನ್ನು ಮಾಡಿದ್ದೇವೆ. ಜಿಯಾಫಿಜಿಸ್ಟ್‌ರವರು ೮೫೦ ಅಡಿ ಸ್ಪೇಸಿಂಗ್ ಬಿಟ್ಟು ಬಾವಿ ತೆಗೆದರೆ, ಅದಕ್ಕೆ ಸಾಲ ಕೊಡುತ್ತೇವೆಂದು ಹೇಳಿದ್ದೇವೆ. ಇದರ ಬಗ್ಗೆ ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—೨೦ ಜನ ಜಿಯಾಫಿಜಿಸ್ಟ್ ಇದ್ದಾರೆಂದು ಇಟ್ಟುಕೊಳ್ಳಿ, ಅವರನ್ನು ಮೂರು ಬ್ಯಾಚ್ ಮಾಡಿ. ಸುಮಾರು ೮-೮ ಜನರನ್ನು ನಾಲ್ಕೈದು ಹಳ್ಳಿಗಳಿಗೆ ಹೋಗಿ ಅಲ್ಲಿ ತನಿಖೆ ನಡೆಸಿ ಅಲ್ಲಲ್ಲಿ ಕ್ಯಾಂಪ್ ಮಾಡಿ ಟೂರಿಂಗ್ ತರಹ ಮುಂದೆ ಹೋಗಬಹುದು. ಇಲ್ಲದಿದ್ದರೆ ಈ ಕೆಲಸ ಸರಿಯಾಗಿ ಆಗುವುದಿಲ್ಲ. ಸ್ವಲ್ಪ ಸರಿಯಾಗಿ ಯೋಚನೆ ಮಾಡಿ.

ಶ್ರೀ ಜೆ. ಹೆಚ್. ಪಟೇಲ್.— ಈ ಬಗ್ಗೆ ಆಗಲೇ ನಾವು ಚರ್ಚೆ ಮಾಡಿದ್ದೇವೆ. ವಿಷಯ ಗೊತ್ತಿದೆ

೧೨-೮೦ ಪಿ.ಎಂ.

ಶ್ರೀ ಎಚ್. ಬಿ. ದ್ಯಾವರಪ್ಪ— ಸ್ವಾಮಿ, ಬರಗಾಲ ಪರಿಸ್ಥಿತಿಯಲ್ಲಿ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ. ಮೇವು ಬೆಳೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ಬಹಳಷ್ಟು ರೈತರು ಕೂಡ ಮೇವು ಬೆಳೆಯುತ್ತಿದ್ದಾರೆ. ನೀರಿನ ಅನುಕೂಲ ಇರುವ ಕಡೆ ಸರ್ಕಾರೀ ಜಮೀನು ಇರುವ ಕಡೆ ಮೇವು ಬೆಳೆಯಲು ರೈತರಿಗೆ ಸಹಾಯ ಮಾಡಿ ಎಂದು ಹೇಳಿದರೆ ಅಧಿಕಾರಿಗಳು ನಮ್ಮಲ್ಲಿ ಮೇವು ಬೆಳೆಯುವುದಕ್ಕೆ ಹಣ ಇಲ್ಲ ಕೊಳ್ಳುವುದಕ್ಕೆ ಮಾತ್ರ ಹಣ ಇದೆಯೆಂದು ಹೇಳುತ್ತಿದ್ದಾರೆ ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

SMT. MUKHTHARUNISA — Yesterday you said tbat 24 lakhs rural people are benefitted under green card. What about the poor urban sections when the rain fails the poor urban people will also be affected. Regarding Minority Development Corporation the Chairman is not appointed. When he will be appointed and when it will start its work? Then Goodwala Commission Report has not been published. When it will be published? Thirdly? K. R. Mill workers are on Dharna. When this Mill, will be re-opened? Lastly, Stadium at Mysore is not yet completed. When is will be completed?

ಶ್ರೀ ಜೆ. ಹೆಚ್. ಪಟೇಲ್— ಮೈನಾರಿಟೀಸ್ ಕಮೀಷನ್ ಫೈನಲ್ ರಿಪೋರ್ಟ್ ಸದ್ಯದಲ್ಲಿಯೇ ಬರಲಿದೆ. ಮೈನಾರಿಟಿ ಕಾರ್ಪೋರೇಷನ್‌ಗೆ ಒಂದು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದೆ. ಕಾರ್ಪೋರೇಷನ್‌ಗೆ ಛೇರ್ಮನ್‌ರವರ ನೇಮಕವನ್ನು ಶೀಘ್ರದಲ್ಲಿಯೇ ಮಾಡಲಾಗುವುದು. ಅಧ್ಯಕ್ಷರ ನೇಮಕವಾದ ಮೇಲೆ ಅದರ ಕೆಲಸ ಪ್ರಾರಂಭವಾಗುತ್ತದೆ. ಹಳ್ಳಿಗಾಡಿನಲ್ಲಿ ಇರತಕ್ಕ ಬಡವರಿಗೆ ಪಟ್ಟಣ ಪ್ರದೇಶಗಳಲ್ಲಿರತಕ್ಕ ಬಡವರಿಗೆ ವ್ಯತ್ಯಾಸ ಏನೂ ಇಲ್ಲ. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಯೋಜನೆಗಳನ್ನು ಜೊತೆಗೆ ತೆಗೆದುಕೊಂಡು ಹೋಗಬೇಕಾದ ಕಾರಣದಿಂದ ಪಟ್ಟಣ ಪ್ರದೇಶಗಳಲ್ಲಿರತಕ್ಕ ಬಡವರನ್ನು ಬಿಟ್ಟು ಕಾರ್ಯಕ್ರಮಗಳನ್ನು ಹಾಕಬೇಕಾಗಿದೆ. ಸ್ಟೇಡಿಯಂ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಕೆ. ಆರ್. ಮಿಲ್‌ಗೆ ಸಂಬಂಧಪಟ್ಟಂತೆ ಸರ್ಕಾರದ ಉದ್ದೇಶ ಸ್ಪಷ್ಟ ಇದೆ ಕಾರ್ಮಿಕರ ಹಿತದೃಷ್ಟಿಯಿಂದ ಕಾರ್ಖಾನೆಯನ್ನು ಪ್ರಾರಂಭಿಸಬೇಕೆಂಬ ಇಚ್ಛೆ ಸರ್ಕಾರಕ್ಕಿದ್ದರೂ ಕೂಡ ಮಾಲೀಕರು ಆ ಕಡೆ ಈ ಕಡೆ ಹೋಗುತ್ತಿದ್ದಾರೆ. ಕೇಂದ್ರದ ಹಣಕಾಸಿನ ಸಂಸ್ಥೆಗಳು ಕೂಡ ಹಣ ಕೊಡಬೇಕೆಂದು ಹೇಳಿದ್ದೇವೆ.

ಅಧ್ಯಕ್ಷರು— ಪ್ರಸ್ತಾವ ಏನೆಂದರೆ, ಜನವರಿ ೨೦, ೧೯೮೬ರಂದು ಮಾನ್ಯ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಈ ಅಧಿವೇಶನದಲ್ಲಿ ಸೇರಿರುವ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ಪ್ರಸ್ತಾಪ ಅಂಗೀಕೃತವಾಗಿದೆ

ಖಾಸಗೀ ಸದಸ್ಯರ ನಿರ್ಣಯಗಳು

(೧) ಪರಿಶಿಷ್ಟ ವರ್ಗ ಮತ್ತು ಜನಾಂಗಗಳಿಗೆ ಮೀಸಲಾಗಿಟ್ಟ ಸವಲತ್ತುಗಳನ್ನು ಆ ವರ್ಗದ ಹಿರಿಯ ಅಧಿಕಾರಿಗಳ ಮಂತ್ರಿಗಳ ಮತ್ತು ಶಾಸಕರ ಮಕ್ಕಳಿಗೆ ವಿಸ್ತರಣೆ ಮಾಡದಿರುವುದು

ಶ್ರೀ ಬಿ. ಎಂ. ತಿಪ್ಪೇಸ್ವಾಮಿ (ಭರಮಸಾಗರ) ಸನ್ಮಾನ್ಯ ಅಧ್ಯಕ್ಷರೇ. ನಾನು ಈ ದಿವಸ ಈ ಖಾಸಗೀ ನಿರ್ಣಯವನ್ನು ತರುವುದಕ್ಕೆ ಮುಂಚೆ ಕೆಲವೊಂದು ಅಂಶಗಳನ್ನು ತಮ್ಮ ಮೂಲಕ ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಡಾಕ್ಟರ್ ತಿಪ್ಪೇಸ್ವಾಮಿಯವರು, ಮೀಸಲಾತಿಗೆ ಸಂಬಂಧಪಟ್ಟಂತೆ. ಅದಕ್ಕೆ ವಿರುದ್ಧವಾಗಿ ಮತ್ತು ಹರಿಜನರಿಗೆ ವಿರುದ್ಧವಾಗಿ ಇಂಥ ನಿರ್ಣಯ ತಂದಿದ್ದಾರಲ್ಲ ಎಂದು ತಿಳಿದುಕೊಂಡರೆ ತಪ್ಪಾದೀತು. ನಾನು ಮೀಸಲಾತಿ ವಿರೋಧಿಯಲ್ಲ. ಇವೊತ್ತು ಎಲ್ಲಾ ವರ್ಗಗಳಲ್ಲಿಯೂ, ಎಲ್ಲಾ ಜನಾಂಗಗಳಲ್ಲಿಯೂ ಶೋಷಿತ ವರ್ಗ ಹಾಗೂ ಶೋಷಣೆ ಮಾಡತಕ್ಕ ವರ್ಗ ಎಂದು ಎರಡು ಭಾಗ ಇದೆ. ಪ್ರತಿಯೊಂದು ಜಾತಿಯಲ್ಲಿಯೂ ವಿದ್ಯಾವಂತರು ಒಂದು ಭಾಗ, ದಡ್ಡರು ಒಂದು ಭಾಗ ಇರುತ್ತಾರೆ. ನಾನು ತಂದಿರತಕ್ಕಂಥ ನಿರ್ಣಯ ಬರೀ ಹರಿಜನ ಗಿರಿಜನಕ್ಕೆ ಸಂಬಂಧಪಟ್ಟ ಮೀಸಲಾತಿಗೆ ಸೇರಿದ್ದಲ್ಲ. ಇದು ಎಲ್ಲಾ ಜನಾಂಗಗಳಲ್ಲಿಯೂ ಇರುವಂಥ ಶೋಷಿತ ವರ್ಗಕ್ಕೆ ಅನ್ವಯಿಸುತ್ತದೆ ಎಂದು ಭಾವಿಸುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ— ಸ್ವಾಮಿ, ಅವರ ದೃಷ್ಟಿಯಿಂದ ಒಳ್ಳೆಯದಿರಬಹುದು. ಹರಿಜನ ಗಿರಿಜನ ಸಮಾಜದದಲ್ಲೂ ಶ್ರೀಮಂತರು ಬಡವರು ಇದ್ದಾರೆ. ಇದು ಒಪ್ಪತಕ್ಕಂಥ ತತ್ವ. ಆದರೆ. ಈ ದೇಶದಲ್ಲಿ ಕ್ಯಾಸ್ಟ್ ಮತ್ತು ಕ್ಲಾಸ್ ಒಂದು ಕಡೆ ಹೋಗುತ್ತದೆ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ— ಎಲ್ಲಾ ವರ್ಗದಲ್ಲೂ ಶ್ರೀಮಂತ ವರ್ಗ. ಬಡ ವರ್ಗ ಎಂದು ಇದೆ, ಅದರಲ್ಲಿಯೂ ಹರಿಜನ ಗಿರಿಜನರಿಗೆ ಸಂಬಂಧಪಟ್ಟಂತೆ ಏತಕ್ಕೆ ನಿರ್ಣಯ ತಂದಿದ್ದೇನೆಂದರೆ. ಉದ್ದೇಶ ಇಷ್ಟೆ.

ಮೊದಲು ತಾವುಗಳೆಲ್ಲರೂ ಈ ನಿರ್ಣಯವನ್ನು ಓದಿದ್ದೀರಿ, ಎಂದು ಭಾವಿಸುತ್ತೇನೆ, ನಾನೂ ಓದಿದ್ದೇನೆ, ಸಭೆಯ ಅನುಕೂಲಕ್ಕಾಗಿ ಅದನ್ನು ಇನ್ನೊಮ್ಮೆ ಓದುತ್ತೇನೆ.

"ಈ ಸಭೆಯು ಹರಿಜನ ಗಿರಿಜನರಲ್ಲಿರುವ ಉನ್ನತ ಅಧಿಕಾರಿಗಳು, ಮಂತ್ರಿಗಳು, ಸಂಸತ್ ಸದಸ್ಯರು, ಶಾಸಕರು ಹಾಗೂ ಆರ್ಥಿಕವಾಗಿ ವಾರ್ಷಿಕ ವರಮಾನ ೧೦–೧೫